ಸಂಕ್ರಮಣ

೧೮೫

ಡಾ. ಶಾಂತಿನಾಥ ದೇಸಾಯಿ

ಡಿ. ವಿ. ಜಿ. : ಕೆಲವು ಅನಿಸಿಕೆಗಳು, ಅನುಮಾನಗಳು

ಲೂಷುನ್ : ಚೀನಿ ಕಥೆ

ಹೊಸ ವರ್ಷದ ಬಲಿ ಅರ್ಥಾತ್
ಷಿಯಾಂಗ್‌ಲಿನ್ ಹೆಂಡತಿ

ಅರವಿಂದ ನಾಡಕರ್ಣಿ

ವಿಮರ್ಶಾ ವಿಧಾನಗಳೂ ಅವು ಒಡ್ಡುವ ಸಮಸ್ಯೆಗಳೂ

ವಿಕಾಸ, ಸರೋಜಿನಿ ಜಾಲವಾದಿ, ಸರಜೂ ಕಾಟಕರ,
ಗುರುಮೂರ್ತಿ ಪೆಂಡಕೂರು, ನೀಲಾ ಕಾ.,
ದೇವೇಂದ್ರಕುಮಾರ ಹಕಾರಿ, ಅರವಿಂದ ಮಾಲಗತ್ತಿ
ಇವರ ಕವನಗಳು

ಚಂಪಾಕಾಲಂ

ಬಳ್ಳಾರಿ : ಬಂಡಾಯ ಸಾಹಿತ್ಯ ಸಮ್ಮೇಳನ

ಸಂಪುಟ ೨೩ : ಸಂಚಿಕೆ ೧ ಜನವರಿ ೧೯೮೮

ಈ ಸಂಚಿಕೆಯ ಲೇಖಕರು

ಡಾ. ಶಾಂತಿನಾಥ ದೇಸಾಯಿ ಕುಲಪತಿಗಳು, ಕುವೆಂಪು ವಿಶ್ವವಿದ್ಯಾಲಯ. ಬಿ. ಆರ್ ಪ್ರಾಜೆಕ್ಟ್ (ಶಿವಮೊಗ್ಗ)

ಕುಂ. ವೀರಭದ್ರಪ್ಪ ಗೂಳ್ಯಮ್ (ಕರ್ನೂಲ. ಆಂ. ಪ್ರ)

ಸರೋಜಿನಿ ಚಾಲವಾದಿ ಕನ್ನಡ ಪ್ರಾಧ್ಯಾಪಕಿ, ಆರ್ಟ್ಸ್ ಮತ್ತು ಸೈನ್ಸ ಕಾಲೇಜ, ಮುಧೋಳ (ಬಿಜಾಪೂರ)

ಡಾ. ಅರವಿಂದ ಮಾಲಗತ್ತಿ ಕನ್ನಡ ಪ್ರಾಧ್ಯಾಪಕ, ಮಂಗಳೂರು ವಿ. ವಿ. ಮಂಗಳಗಂಗೋತ್ರಿ (ದ. ಕ.)

ಅರವಿಂದ ನಾಡಕರ್ಣಿ ಕೇತಾತುನ್, ಶಹಾಜಿ ರಾಜೆ ಮಾರ್ಗ, ವಿಲೆ ಪಾರ್ಲೆ (ಪೂರ್ವ), ಮುಂಬೈ–೫೭.

ನೀಲಾ, ಕಾ ಜ್ಯೋತಿ ಬೆರಳಚ್ಚು ಸಂಸ್ಥೆ, ಉದಗೀರ ರಸ್ತೆ, ಬೀದರ.

ಸರಜೂ ಕಾಟಕರ 'ಕಾವ್ಯ' MIG ೬೫, ಮಹಾಂತೇಶ ನಗರ, ಬೆಳಗಾವಿ–೬.

ವಿಕಾಸ (ವಿಶ್ವನಾಥ ಕಾರ್ನಾಡ). ೪೦೮, ಪುಷ್ಕರ ಕೋ–ಆಪ್. ಹೌಸಿಂಗ್ ಸೊಸೈಟಿ, ಎಕ್ಸರ್ ರೋಡ, ಬೋರಿವ್ಲಿ (ಪಶ್ಚಿಮ), ಮುಂಬೈ–೯೨.

ಡಾ. ದೇವೇಂದ್ರಕುಮಾರ ಹಕಾರಿ ಕನ್ನಡ ಪ್ರಾಧ್ಯಾಪಕ, ಕರ್ನಾಟಕ ವಿ. ವಿ. ಧಾರವಾಡ-೩

ಗುರುಮೂರ್ತಿ ಪೆಂಡಕೂರು ಹಗರಿ ಬೊಮ್ಮನಹಳ್ಳಿ (ಬಳ್ಳಾರಿ)

ಪ್ರಿಯ ಚಂದಾದಾರರೇ

೨೩ ನೆಯ ಸಂಪುಟದ ಮೊದಲ ಸಂಚಿಕೆ ನಿಮ್ಮ ಕೈಯಲ್ಲಿದೆ. ಇನ್ನು ಮೇಲೆ ಪ್ರತಿ ತಿಂಗಳ ಸಂಚಿಕೆಯೂ ಬಿಡಿ ಬಿಡಿಯಾಗಿಯೇ ಪ್ರಕಟವಾಗಲಿದೆ.

ಕಳೆದ ಸಂಚಿಕೆಯೊಂದಿಗೆ ಚಂದಾ ಅವಧಿ ಮುಗಿಸಿದ ಚಂದಾದಾರ ಸ್ನೇಹಿತರು **ಕೂಡಲೇ** ಹೊಸ ವರ್ಷದ ಚಂದಾ ರೂ. ೫೦/–ಗಳನ್ನು ಎಂ. ಓ. ಅಥವಾ ಡಿ. ಡಿ. ಮೂಲಕ ಕಳಿಸಿಕೊಡಬೇಕೆಂದು ಕೋರಿಕೆ.

ಎಂದಿನಂತೆ ನಿಮ್ಮ ಪ್ರಬುದ್ಧ ಬರಹಗಳಿಗೆ 'ಸಂಕ್ರಮಣ'ದ ಸ್ವಾಗತ ಇದ್ದೇ ಇದೆ.

'ಸಂ'

ಡಿ. ವಿ. ಜಿ. : ಕೆಲವು ಅನಿಸಿಕೆಗಳು, ಅನುಮಾನಗಳು

ಶಾಂತಿನಾಥ ದೇಸಾಯಿ

ಡಿ. ವಿ. ಜಿ. ಭಾರತದ ಪುನರುಜ್ಜೀವನದ ಮೊದಲ ಹಂತದಲ್ಲಿ ಹುಟ್ಟಿ ಬೆಳೆದವರು. ಪುನರುಜ್ಜೀವನದ ಹಲವಾರು ಒಲವುಗಳಲ್ಲಿ ಒಂದಾದ ಸಾಂಸ್ಕೃತಿಕ-ವೈಚಾರಿಕ ಸಮನ್ವಯವಾದದ ಪ್ರತಿನಿಧಿಯಾಗಿ ಕೆಲಸ ಮಾಡಿದವರು. ಗೋಪಾಲ ಕೃಷ್ಣ ಗೋಖಲೆಯವರ ಅನುಯಾಯಿಗಳು.

ನಮ್ಮಲ್ಲಿ ಸೃಜನ ಶಕ್ತಿ ಕ್ಷೀಣವಾಗಿದೆ. ನಮ್ಮ ಜೀವನವೆಂದರೆ ಗಾಣದ ಎತ್ತುಗಳ ಜೀವನ. ಕುರಿಯ ಹಿಂಡಿನ ಜೀವನ ಎಂದು ಅವರಿಗೆ ತೀವ್ರವಾಗಿ ಅನಿಸಿತ್ತು: 'ಈಗ ನಮ್ಮ ಜನ ಬದುಕುತ್ತಿಲ್ಲವೇ ? ಇದ್ದಾರೆ. ಆದರೂ ಇದೆಂಥ ಬದುಕು ? ಬದುಕಲಾರದ ಬದುಕು, ಅರೆ ಮನಸ್ಸಿನ ಬದುಕು : ಇಹಕ್ಕೆ ಸಾಲದು. ಪರಕ್ಕೆ ಮುಟ್ಟದು...ಒಂದು ಸ್ವತಂತ್ರ ವಿವೇಕವಿಲ್ಲ; ನೈಜ ಸಾಹಸವಿಲ್ಲ. ಸ್ವತಂತ್ರ ಪ್ರಯತ್ನದಿಂದ ಹೊಸದಾಗದೆ ಇರುವ ಬಾಳು ಉಸಿರಾಡುತ್ತಿದ್ದರೂ ಸತ್ತ ಬಾಳೇ ಸರಿ.' ಹೀಗೆ ಡಿ. ವಿ. ಜಿ. "ಬಾಳಿಗೊಂದು ನಂಬಿಕೆ"ಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಮಾನವೀ ಜೀವನದ ಸೃಜನ ಶಕ್ತಿಯನ್ನು ಅಳೆಯಲು ಅವರು ಕಲ್ಪಿಸಿದ ಮಾನದಂಡಗಳು ಮೂರು : ಜೀವನೋತ್ಸಾಹ, ಪುರುಷ ಪ್ರಯತ್ನ ಹಾಗೂ ಲೋಕಸ್ನೇಹ. ಸಮಾಜ ಜೀವನವನ್ನು ಅಳೆಯಲು ಕಲ್ಪಿಸಿದ ಮಾನದಂಡಗಳು ಮೂರು : ಪ್ರಗತಿ, ವಿಜ್ಞಾನ, ಸೌಜನ್ಯ. ನಮ್ಮ ನಿರ್ವಿಣ್ಣತೆಗೆ, ನಮ್ಮ ಸೋಲು ಮನಸ್ಸಿಗೆ ಕಾರಣ ಪಾರತಂತ್ರ್ಯವಲ್ಲ. ನಾವು ನಮ್ಮ ಸ್ವಾತಂತ್ರ್ಯ ಕಳಕೊಂಡದ್ದೇ ನಮ್ಮ ನಿರ್ವಿಣ್ಣತೆಯ ಮೂಲಕ, ನಮ್ಮ ಮನೋದೌರ್ಬಲ್ಯದ ಮೂಲಕ, ನಮ್ಮ ವಿವೇಕಶೂನ್ಯವಾದ ವಿರಕ್ತಿಯ ಮೂಲಕ-ಎಂದು ಡಿ. ವಿ. ಜಿ. ಹೇಳುತ್ತಾರೆ.

ಡಿ. ವಿ. ಜಿ. ಯವರಿಗೆ ವೇದೋಪನಿಷತ್ತಿನ ಕಾಲವೆಂದರೆ ಆದರ್ಶ ಯುಗ. ಆಗ ಜೀವನಾಕಾಂಕ್ಷೆ ಪ್ರಖರವಾಗಿತ್ತು; ವೈಚಾರಿಕ ಸೃಜನಶಕ್ತಿ ತುಂಬ ಬಲವಾಗಿತ್ತು; ಗಂಡು ತೇಜಸ್ಸಿನಿಂದ ಗೆಲುಬುದ್ಧಿಯಿಂದ ಮುನ್ನಡೆಯುವ, ದಿಗ್ವಿಜಯ ಸಾಧಿಸುವ ಹವ್ಯಾಸವಿತ್ತು—ಮುಖ್ಯ, ಸಂಸ್ಕೃತಿಯಲ್ಲಿ ಚೈತನ್ಯದ ಸೆಲೆಯಿತ್ತು. ನಮ್ಮ ಸಾಹಸದ ಗೆಲು ಮನಸ್ಸು ಹೋಗಿ ಸೋಲು ಮನಸ್ಸು ಯಾವಾಗ ಬಂತು ? ಡಿ. ವಿ. ಜಿ. ಯವರ ಪ್ರಕಾರ ಶಂಕರಾಚಾರ್ಯರ ಕಾಲಕ್ಕೆ ಹಿಂದೆಯೇ, ಗೌತಮ ಬುದ್ಧ, ಮಹಾವೀರರ ಮೊದಲೇ ಆರ್ಯ ಜನಾಂಗದ ಜೀವನ ಸಂತೋಷದ ಧ್ವನಿ ಕಡಿಮೆಯಾಗಿ ನಿರ್ವಿಣ್ಣತೆಯ ಧ್ವನಿ ಹೆಚ್ಚಾಗಿತ್ತು. ನಮ್ಮ ಜನಕ್ಕೆ ಮನಸ್ಸಿನ ಉಲ್ಲಾಸ ಇಳಿದುಹೋಗಿತ್ತು. ಇದರ ಪರಿಣಾಮವಾಗಿ ಇಹಲೋಕ ತುಚ್ಛ, ಭೋಗ ಪಾಪಕರ, ಪರಲೋಕ ಮೇಲು, ಮೋಕ್ಷ ಮೇಲು, ಇಂದ್ರಿಯ ಸುಖ ನಿಂದ್ಯ, ದೇಹ ಹೇಯ, ಸಂಸಾರಕ್ಕಿಂತ ಸನ್ಯಾಸ ಉತ್ತಮ, ಊರಿಗಿಂತ ಕಾಡು ಲೇಸು–ಎಂಬ ತತ್ವಜ್ಞಾನ ಬೇರೂರಿತು. ಡಿ. ವಿ. ಜಿ. ಗೆ ಜೀವನ ವಿಮುಖತೆ ಯಾವಾಗಲೂ ತ್ಯಾಜ್ಯ. 'ಅಗ್ಗದ ವೈರಾಗ್ಯ ಹೋಗಬೇಕು. ಹಣೆಯ ಬರಹದ ಗೋಣಗಾಟ ನಿಲ್ಲಬೇಕು', ಎಂದು ಅವರು ಹೇಳುತ್ತಿದ್ದರಲ್ಲದೆ, 'ಇಲ್ಲಿಯ ಬದುಕು ಸಾರ್ಥಕವಾಗಬೇಕು. ಇಲ್ಲಿಯ ಜೀವನ ಸಮೃದ್ಧವಾಗಬೇಕು, ಎಂದು ಒತ್ತಿಯೊತ್ತಿ ಹೇಳುತ್ತಿದ್ದರು. 'ದೇವರೆಂಬುದು ಬೇರೆ ಇದ್ದರಿರಲಿ, ಇಲ್ಲದಿದ್ದರೂ ಪರಿವೆಯಿಲ್ಲ. ನಮ್ಮ ಜೀವನವಂತೂ ನಮಗೆ ಪ್ರತ್ಯಕ್ಷ ಸಂಗತಿ... ಜೀವನ ಸಂಸ್ಕಾರ, ಜೀವನ ಸೌಂದರ್ಯ, ಇದು ಬರಿಯ ಐಹಿಕಾಸಕ್ತಿಯಲ್ಲ. ಚಾರ್ವಾಕತನವಲ್ಲ. ಭೋಗನಿಷ್ಠೆಯಲ್ಲ; ಅದು ವೇದವೇದಾಂತಗಳ ಸಾರಾಂಶ. ಡಿ. ವಿ. ಜಿ. ಯವರ ಈ ಇಹಲೋಕ ಶ್ರದ್ಧೆ ನಮಗೆ ಅತ್ಯಂತ ಪ್ರಸ್ತುತವಾದುದು. ಪ್ರಾಮುಖ್ಯವಾಗಿ ಅವರು ಮೂಲತಃ ಮಾನವತಾವಾದಿ. ಅವರಿಗೆ ಮನುಷ್ಯನ ಬುದ್ಧಿಶಕ್ತಿಯಲ್ಲಿ, ಅವನ ಪುರುಷ ಪ್ರಯತ್ನದಲ್ಲಿ, ಅವನ ಜಿಜ್ಞಾಸೆಯಲ್ಲಿ, ಅವನ ಸೃಜನ ಶೀಲತೆಯಲ್ಲಿ ನಂಬಿಗೆ ಬಹಳ. ಅಂತೇ ಅವರಿಗೆ ವಿಜ್ಞಾನದಲ್ಲಿಯೂ ತುಂಬ ವಿಶ್ವಾಸ. ಮನುಷ್ಯ ಬುದ್ಧಿಯ ಫಲವಾದ, ಪುರುಷ ಪ್ರಯತ್ನದ ಫಲವಾದ ವಿಜ್ಞಾನ ನಮಗೆ ಬೇಕು, ನಮ್ಮ ಜೀವನವನ್ನು ಸಮೃದ್ಧಗೊಳಿಸಲು, ನಮ್ಮ ಸತ್ಯಾನ್ವೇಷಣೆಯನ್ನು ಸಾರ್ಥಕಗೊಳಿಸಲು ವಿಜ್ಞಾನ ಬೇಕು ಎಂಬುದು ಡಿ. ವಿ. ಜಿ. ಯವರ ಗಟ್ಟಿ ಮತ. 'ಇಂಥ ವಿಜ್ಞಾನವನ್ನು ನಾವು ಬಿಡಲಾಗದು. ಅದನ್ನು ನಮ್ಮ ಜೀವನಕ್ರಮದೊಳಕ್ಕೆ ಹದವರಿತು ತಂದುಕೊಳ್ಳಬೇಕು.' ವಿಜ್ಞಾನದ ಮಿತಿ ಗೊತ್ತಿದ್ದೂ ವಿಜ್ಞಾನವಿರಲಿ ಎಂದು ಡಿ. ವಿ. ಜಿ. ಹೇಳುತ್ತಿದ್ದರು. ಪ್ರಾರ್ಥಿಸುವದಿದ್ದರೆ ಪ್ರಾರ್ಥಿಸಿ. ಆದರೆ ಮೊದಲು 'ಪಂಪಿಸಿ' ಎಂದೆನ್ನುತ್ತಿದ್ದರು.

. ವಿ. ಜಿ. ಯವರ ದೃಷ್ಟಿಕೋನದಲ್ಲಿ ಪ್ರಗತಿಪರ ಆಧುನಿಕತೆ ಇದ್ದರೂ ಅದ
ಲ್ಲಿ ಸಮಾಜ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಪರಿವರ್ತಿಸ ಬೇಕೆನ್ನುವ ಕ್ರಾಂ
ಕಾರಿ ಪ್ರವೃತ್ತಿ ಇರಲಿಲ್ಲ. ಪ್ರಗತಿ ಬೇಕು, ಕ್ರಾಂತಿ ಬೇಡ ಎಂಬುದು ಅವರ
ಾದ. ಹೆಜ್ಜೆಹೆಜ್ಜೆಯ ಪ್ರಗತಿಯಲ್ಲಿಯೇ ಅವರಿಗೆ ನಂಬಿಗೆ. ಅವಿಧೇಯತೆ, ದಂಗೆ,
ಂಡಾಯ, ಕ್ರಾಂತಿ ಇವುಗಳಲ್ಲಿ ಅವರಿಗೆ ವಿಶ್ವಾಸವಿರಲಿಲ್ಲ. 'ಯಾವ ಬದಲಾ
ಣೆಯೂ ರೋಷಾವೇಶ ಮಾತ್ರದಿಂದಲೇ ಬಂದದ್ದಾಗಬಾರದು, ಯಾಕಂದರೆ
್ರಾಂತಿ ರೋಗಕ್ಕಿಂತ ಭಯಂಕರವಾದ ಚಿಕಿತ್ಸೆಯಾಗಿ ಪರಿಣಮಿಸಬಹುದು.'
ೀಗೆಲ್ಲ ಹೇಳುವಾಗ ಡಿ. ವಿ. ಜಿ. ಕಾಲದ ಒತ್ತಡಗಳನ್ನು ಗುರುತಿಸಲಿಲ್ಲವೆಂದು
ೇಳಬೇಕು. ಅವರ ಸಂಪ್ರದಾಯ ನಿಷ್ಠೆಯ ಎಳೆತ ಅವರೇ ಹೇಳುವ ಸೃಜನ
ಕ್ತಿಯ ಕ್ಷೀಣತೆಯ ಸಂಕೇತವಾಯಿತೇ ಎಂಬುದು ನಮ್ಮ ಅನುಮಾನ.

ುನುಷ್ಯನ ಸೃಜನ ಶಕ್ತಿಯ ಕ್ಷೀಣತೆಗೆ ಆತನಿದ್ದ ವ್ಯವಸ್ಥೆಯೂ ಕಾರಣವಾಗಿರಬೇಕಲ್ಲ
ಂಬ ವಿಚಾರ ಡಿ. ವಿ. ಜಿ. ಯವರಿಗೆ ಅಷ್ಟೊಂದು ತೀವ್ರವಾಗಿ ತಟ್ಟಲಿಲ್ಲವೇನೋ.
ವರು ಹೇಳುವದೆಂದರೆ — ಮನುಷ್ಯ ಸಮಾಜವೆಂಬುದು ಬಹು ಪುರಾತನವಾದ
ಟ್ಟಡ. ಅದನ್ನು ದುರುಸ್ತ ಮಾಡ ಹೊರಟವನು ಬಹು ಜಾಗರೂಕವಾಗಿರ
ೇಕು. ಹಾಗಿಲ್ಲದಿದ್ದರೆ ಪೂರ್ವದ ಗೋಡೆಯ ಬಿರುಕಿಗೆ ಹಾರೆ ತಗುಲಿಸಿದಾಗ
ಶ್ಚಿಮದ ಕಡೆಯ ಗೋಡೆ ಕುಸಿದುಬೀಳಬಹುದು. ಆದರೆ ಮುಖ್ಯ ಪ್ರಶ್ನೆಯೆಂದರೆ
—ಇಡಿಯ ಕಟ್ಟಡವೇ ಅಲ್ಲಲ್ಲಿ ಭಯಾನಕವಾಗಿ ಕುಸಿದುಬಿದ್ದಾಗ, ಅದನ್ನು
ುರಿದು, ಬೇರೆ ಕಟ್ಟಡ ಕಟ್ಟುವ ವಿಚಾರ ಮಾಡಬೇಕಾಗುವದಲ್ಲವೇ ?

ಿ. ವಿ. ಜಿ. ಯ ಮುಖ್ಯ ಒತ್ತು ವ್ಯಕ್ತಿಯ ಮೇಲೆ. ವ್ಯಕ್ತಿ ಬದಲಾಗಬೇಕು.
್ರಿಯಾಶೀಲನಾಗಬೇಕು, ತನ್ನ ಗುರಿಯನ್ನು ಸಾಧಿಸಲೆತ್ನಿಸಬೇಕು. ಪ್ರತಿ
ಯೊಬ್ಬ ವ್ಯಕ್ತಿಗೆ ಅವನದೇ ಆದ ಸಾಧ್ಯತೆಗಳಿರುತ್ತವೆ, ಗುರಿಗಳಿರುತ್ತವೆ. ಆತ
ಯುಕ್ತಾಯುಕ್ತ ವಿವೇಕದಿಂದ, ಧೈರ್ಯದಿಂದ ತನ್ನ ಜೀವನ ನಿರ್ವಹಿಸಿಕೊಳ್ಳಬೇಕು.
ಜೊತೆಗೆ ಲೋಕಹಿತದ ಸಲುವಾಗಿಯೂ ದುಡಿಯಬೇಕು. ಡಿ. ವಿ. ಜಿ. ಯ ವಿಚಾ
ರ ಸರಣಿ ಪಾರತಂತ್ರ್ಯದಲ್ಲಿ, ಬಡತನದಲ್ಲಿ, ಸಾಂಪ್ರದಾಯಿಕ ಅರ್ಥಹೀನ ಸಾಮಾ
ಜಿಕ ವ್ಯವಸ್ಥೆಯಲ್ಲಿ ತೊಳಲಾಡುವ ಜನತೆಗೆ ಯೋಗ್ಯವಾದುವಲ್ಲ. ತಮ್ಮ ಸುರ
ಕ್ಷಿತತೆಯನ್ನೂ, ತಮ್ಮ 'ಸಂಸ್ಕೃತಿ'ಯನ್ನೂ ಕಾಪಾಡಿಕೊಳ್ಳಲು ತವಕಿಸುವ
ಬೂರ್ಜ್ವಾ ವರ್ಗಕ್ಕೆ ಯೋಗ್ಯವಾದ ವಿಚಾರ ಸರಣಿಯಿದು. ಮೈಸೂರ ಸಂಸ್ಥಾ
ನದ ಕ್ರಮಬದ್ಧವಾದ, ಶಾಂತಿಮಯವಾದ ಸರಂಜಾಮಿ ವ್ಯವಸ್ಥೆಯಲ್ಲಿ ಡಿ. ವಿ.
ಜಿ. ನಲೆಸಿದ್ದರಿಂದಲೋ ಏನೋ, ಅವರ ವಿಚಾರ ಸರಣಿಗೆ ಮಹಾರಾಷ್ಟ್ರ—ಬಂ
ಗಾಲಗಳ ತೀವ್ರತೆ ಬರಲಿಲ್ಲ. ಪ್ರಖರತೆ ಬರಲಿಲ್ಲ, ಕ್ರಾಂತಿಶಕ್ತಿ ಬರಲಿಲ್ಲ. ತದ್ವಿ

ರುದ್ಧವಾಗಿ, ಅವರು ಸಮನ್ವಯವಾದಿಗಳಾದರು. ಮಧ್ಯಮ ಮಾರ್ಗದವರಾ ದರು.

ಸಮನ್ವಯವಾದದ ಮುಖ್ಯ ದೋಷವೆಂದರೆ ಜೀವನವನ್ನು ಸರಳೀಕೃತ ಮಾಡಿ ನೋಡುವದು ಕರ್ಷಣೆ—ದ್ವಂದ್ವಗಳ, ಕೃತಿ—ಪ್ರತಿಕೃತಿಗಳ ಸಂಕೀರ್ಣ ಪ್ರಕ್ರಿಯೆ ಯನ್ನು ಸುಲಭೀಕರಿಸುವ ಪ್ರವೃತ್ತಿಯನ್ನು ಸ್ವೀಕರಿಸುವದು. ಉದಾಹರಣೆಗೆ, ಡಿ. ವಿ. ಜಿ ಯವರ ಸಮನ್ವದ ತತ್ವದ ಪ್ರಕಾರ ವಿಜ್ಞಾನದ ಜೊತೆ ಆಧ್ಯಾತ್ಮ ಬೇಕು; ಆತ್ಮದ ಜೊತೆ ಆ್ಯಟಂ ಬೇಕು; ಯುರೋಪದ ಸಂಸ್ಕೃತಿಯ ಒಳ್ಳೆಯ ಅಂಶಗ ಳನ್ನು ತೆಗೆದಕೊಳ್ಳಬೇಕು. ಜೊತೆಗೆ ನಮ್ಮ ಸಂಸ್ಕೃತಿಯ ಒಳ್ಳೆಯ ಅಂಶಗಳನ್ನು ಉಳಿಸಿಕೊಳ್ಳಬೇಕು. ಪುರಂದರದಾಸ, ಕನಕದಾಸ. ಕಬೀರ ಅಂಥವರ ಕಣ್ಣೀರಿನ ಭಕ್ತಿಯೂ ಬೇಕು, ಗೋಖಲೆ–ತಿಲಕ–ಗಾಂಧಿ–ವಿಶ್ವೇಶ್ವರಯ್ಯ–ತಾತಾ ಮುಂತಾ ದವರ ಗಟ್ಟಿ ದುಡಿಆದ ಭಕ್ತಿಯೂ ಬೇಕು—ಇತ್ಯಾದಿ. ಈ 'ಅ–ಬ'ದ ಬೇರೀ ಜಿನ ಕೆಲಸದಿಂದ ಸಂಸ್ಕೃತಿ ಎಂದೂ ಬೆಳೆಯುವದಿಲ್ಲ. ನಿರ್ಮಾಣಶೀಲವಾಗುವ ದಿಲ್ಲ. ಸಮಾಜ ಪರಿವರ್ತನೆಯ ಮಹಾನ್ ಯುಗವಾದ ಗಾಂಧೀಯುಗದಲ್ಲಿ ವರ್ಣಾಶ್ರಮ ಧರ್ಮದ ಸಮರ್ಥನೆಯನ್ನು ಡಿ. ವಿ. ಜಿ. ಮಾಡುತ್ತಾರೆಂದರೆ ಅವರ ಸಮನ್ವಯವಾದದಲ್ಲಿಯ ಪ್ರತಿಗಾಮಿತ್ವದ ಅಂಶದ ಕಲ್ಪನೆ ನಮಗಾಗ ದಿರದು.

ಡಿ. ವಿ. ಜಿ. ಯವರ ವೈಚಾರಿಕತೆಯಲ್ಲಿ ಕೆಲವು ಮೂಲಭೂತ ಸೀಮಿತತೆಗಳಿದ್ದರೂ ಅವರು ತಮ್ಮ ಆತ್ಮ ಚೌಕಟ್ಟಿನಲ್ಲಿದ್ದುಕೊಂಡೇ ಬಹಳ ಕೆಲಸ ಮಾಡಿದರು. ಸಾರ್ವಜನಿಕ ಜೀವನದಲ್ಲಿ ಲೋಕಶಿಕ್ಷಣಕ್ಕೆ ಮಹತ್ವ ಕೊಟ್ಟು ಪತ್ರಿಕೋದ್ಯಮವ ನ್ನು ಮೊದಲಿನಿಂದಲೂ ಅತ್ಯಂತ ನಿಷ್ಠೆಯಿಂದ ಕೈಕೊಂಡಿದ್ದರು. ಜನರಲ್ಲಿ ವೈ ಚಾರಿಕ ಶಕ್ತಿ ಬೆಳೆಯಬೇಕೆಂದು 'ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ'ಯನ್ನು ಕಟ್ಟಿದರು. ಡಿ. ವಿ. ಜಿ. ಯೆಂದರೆ ಮೂಲತಃ ಆಚಾರ್ಯರು. ಅವರ ಕೇಂದ್ರ ಪಿಂಡ ವಿಚಾರವಂತನದು, ಬುದ್ಧಿಜೀವಿಯದು. ಅವರು ಬರೆದ ಸಾಹಿತ್ಯದಲ್ಲಿ ತತ್ವ ಚಿಂತನೆಗೇ ಪ್ರಾಮುಖ್ಯತೆ. ಅಂತೇ ಅವರ ಉತ್ಕೃಷ್ಟ ಕಾವ್ಯವೆಂದರೆ 'ಮಂಕು ತಿಮ್ಮನ ಕಗ್ಗ'ದ ತಾತ್ವಿಕ ಕಾವ್ಯ. ಅವರ ಉತ್ಕೃಷ್ಟ ಗದ್ಯ ಕೃತಿಗ ಳೆಂದರೆ ಜೀವನ ಚರಿತ್ರೆಗಳು, ಉಪನ್ಯಾಸಗಳು. 'ಸಂಸ್ಕೃತಿ', 'ರಾಜ್ಯಶಾಸ್ತ್ರ'; 'ಸಾಹಿತ್ಯ ಶಕ್ತಿ', 'ಬಾಳಿಗೊಂದು ನಂಬಿಕೆ' ಮುಂತಾದ ವೈಚಾರಿಕ ಹೊತ್ತಿಗೆಗಳು.

ಡಿ. ವಿ. ಜಿ. ಕನ್ನಡ ಗದ್ಯದ ಶ್ರೇಷ್ಠ ನಿರ್ಮಾಪಕರಲ್ಲೊಬ್ಬರು. 'ಕನ್ನಡಕ್ಕೆ ಎಲ್ಲ ವಿಷಯಗಳನ್ನು ಬೋಧಿಸುವ ಸಾಮರ್ಥ್ಯ ಬರಬೇಕು', ಎಂಬುದು ಅವರ ಗುರಿ ಯಾಗಿತ್ತು. ಜಟಿಲವೂ, ಸೂಕ್ಷ್ಮವೂ ಆದ ವಿಷಯುಗಳ ಸೇವಾವಕಾಶವನ್ನು

ಕನ್ನಡಕ್ಕೆ ತಪ್ಪಿಸಬಾರದು. ಕನ್ನಡ ಭಾಷೆಯನ್ನು ಬಗೆ ಬಗೆಯ ಪ್ರಸಂಗಗಳಿಗೆ ಹಚ್ಚಿ ತೀಡಬೇಕು, ವಾದ–ವಿವಾದದಲ್ಲಿ ನಾದಬೇಕು; ಅನ್ಯ ಭಾಷಾ ಪದಗಳ ಸಂಪರ್ಕ-ಸಂಘರ್ಷಗಳಿಗೆ ಅದನ್ನು ಸಿಕ್ಕಿಸಬೇಕು...ಹೀಗೆ ನಮ್ಮ ಭಾಷೆಯ ಶರೀರಕ್ಕೆ ಸಾಮು ಮಾಡಿಸಿದಲ್ಲದ ಅದಕ್ಕೆ ಶಕ್ತಿಯೂ ಅಂಗಲಾಘವವೂ ಉಂಟಾಗದು. ಡಿ. ವಿ. ಜಿ. ಯವರ 'ಜ್ಞಾಪಕ ಚಿತ್ರಶಾಲೆ' ಯ ಎಂಟು ಸಂಪುಟಗಳೆಂದರೆ ಮೈಸೂರ ಸಂಸ್ಥಾನದ ಬೂರ್ಜ್ವಾ ಸಮಾಜದ ವಿಶ್ವಕೋಶ: ಸ್ವಾತಂತ್ರ್ಯ ಪೂರ್ವ ಕಾಲದಲ್ಲಿಯ ಪ್ರಸ್ಥಾಪಿತ ಸಂಸ್ಕೃತಿಯ ಪ್ರತಿನಿಧಿಗಳ ವ್ಯಕ್ತಿ ಚಿತ್ರಣ ಅತ್ಯಂತ ಸ್ಫುಟವಾಗಿ ಈ ಲೇಖನಮಾಲೆಯಲ್ಲಿ ಬಂದಿದೆ. ಆಗಿನ ದಿವಾನರು, ಮಂತ್ರಿಗಳು, ಸಾಹಿತಿಗಳು, ಕಲಾವಿದರು, ಸಾರ್ವಜನಿಕರು. ಹೃದಯ ಸಂಪನ್ನರು, ವೈದಿಕ ಧರ್ಮ ಸಂಪ್ರದಾಯಸ್ಥರು ಇತ್ಯಾದಿ ಜನ ಈ ಪುಟಗಳಿಂದ ಜೀವಂತವಾಗಿ ಪುಟಿದೆದ್ದು ಬರುತ್ತಾರೆ. ಡಿ. ವಿ. ಜಿ. ಯವರಿಗೆ ಪ್ರಿಯವಾದ ಈ ವಿಶ್ವದಲ್ಲಿ ಅವರಿಗೆ ಸುಖ-ಸಮಾಧಾನಗಳು ಸಾಕಷ್ಟು ಸಿಕ್ಕಿದ್ದರಿಂದಲೇ ಅವರಲ್ಲಿ ಆಮೂಲಾಗ್ರ ಸಮಾಜ ಪರಿವರ್ತನೆಯ ವಿಚಾರ ಮೂಡಲೇ ಇಲ್ಲ. ತದ್ವಿರುದ್ಧವಾಗಿ, ಸಂಸ್ಕೃತಿಯ ಬೆಳವಣಿಗೆಯೆಂದರೆ ತರುಂಗ–ತರಂಗವಾಗಿ ಸಾವಕಾಶವಾಗಿ ಸಮನಿಸುವ ದೀರ್ಘ ಕೃತಿ ಎಂಬ ನಂಬಿಕೆ ಅವರಲ್ಲಿ ಬೇರೂರಿರಬೇಕು. ಪ್ರಸ್ಥಾಪಿತ ಸಾಮಾಜಿಕ ವರ್ಗಗಳು, ಜಾತಿ–ಪಂಗಡಗಳು ಸಾಮಾಜಿಕ ರಚನೆಯನ್ನು ಗಟ್ಟಿಯಾಗಿಟ್ಟಿವೆ ಎಂದೂ ಅವರಿಗೆ ಅನಿಸಿರಬೇಕು. ವರ್ಣಾಶ್ರಮ ಧರ್ಮವೆಂದರೆ ಭಾರತೀಯತೆಯ ಒಂದು ಅವಿಭಾಜ್ಯ ಅಂಗವೆಂದು ಡಿ. ವಿ. ಜಿ. ಗೆ ಅನಿಸಿದ್ದರ ಕಾರಣವೂ ಅದೇ ಆಗಿರಬೇಕು. ಅವರು ಕೇಳುವದೆಂದರೆ 'ಜಾತಿ-ಪಂಗಡ ತಪ್ಪಾದರೆ ಭಾರತೀಯತೆಯನ್ನುವದೇನು? ದೇಶೀಯತೆಯನ್ನುವದೇನು?' ಮಾನವತಾವಾದಿಯಾದ ಡಿ. ವಿ. ಜಿ. ಜಾತಿ ವ್ಯವಸ್ಥೆ ಅನಿವಾರ್ಯವೆನ್ನುವದು ತೀರ ವಿಚಿತ್ರವಷ್ಟೇ ಅಲ್ಲದೆ, ಆಧುನಿಕ ಒತ್ತಡಗಳನ್ನು ಅವರು ಆಳವಾಗಿ ಗ್ರಹಿಸಲಿಲ್ಲವೆಂದಾಯಿತು. ಅವರ ಸಂವೇದನೆಯಲ್ಲಿ ವಿಕ್ಟೋರಿಯನ್ ಯುಗದ ಅಲ್ಪ ಸಂತೃಪ್ತಿಯ ಒಲವು ಸಾಕಷ್ಟು ಪ್ರಭಾವಿಯಾಗಿಯೇ ಕೆಲಸ ಮಾಡಿದೆಯೆಂದು ಹೇಳಬಹುದೇನೋ. ಈ ದೃಷ್ಟಿಯಿಂದ ಗಾಂಧೀಜಿ ಯವರು ನಮಗೆ ಎಷ್ಟು ಪ್ರಸ್ತುತರೋ, ಅಷ್ಟು ಡಿ. ವಿ. ಜಿ. ಪ್ರಸ್ತುತರಲ್ಲ. ಗಾಂಧೀಜಿಯವರ ವಿಚಾರಗಳನ್ನು ನಾವು ಒಪ್ಪಿಕೊಳ್ಳದಿದ್ದರೂ. ಅವರು ಆಧುನಿಕ ಭಾರತದ ಸಮಸ್ಯೆಗಳಿಗೆ ಜೀವಂತವಾಗಿ ಸ್ಪಂದಿಸುತ್ತಿದ್ದಂಥ ಮಹಾವ್ಯಕ್ತಿ. ಡಿ.ವಿ.ಜಿ.ಯವರು ಪ್ರಗತಿಪರ ಮಾನವತಾ ವಾದಿಯಾಗಿಯೂ, ವಿಜ್ಞಾನ, ಸ್ವಾತಂತ್ರ್ಯ, ವೈಚಾರಿಕತೆ, ಬುದ್ಧಿಯ ಪ್ರಾಧಾನ್ಯತೆ ಇತ್ಯಾದಿಗಳ ಬಗ್ಗೆ ನಮಗೆ ಒಪ್ಪಿಗೆಯಾಗುವಂತಹ ಮಾತು ಹೇಳಿಯೂ ನಮ್ಮ ಸಂಕ್ರಮಣ ಕಾಲದ ಮಹತ್ವದ ಸಮಸ್ಯೆಗಳಿಗೆ, ಒತ್ತಡಗಳಿಗೆ ಅವರು ತೀವ್ರವಾಗಿ ಸ್ಪಂದಿಸಲಿಲ್ಲ. 'ಇದು ದಿಗ್ಭ್ರಾಂತಿಯ ಕಾಲ', ಎಂದು ಒಪ್ಪಿಯೂ 'ಜಾಗರೂ

ಕತೆ ಹೆಚ್ಚಾಗಿರಬೇಕೆಂದು ಹೇಳುತ್ತ ಸಂಪ್ರದಾಯದತ್ತ ಹಿಂತಿರುಗಿಬಿಟ್ಟರು. ಸ್ವತಂತ್ರ ವಿಚಾರ ಮಾಡಲು ಕಲಿಯಬೇಕೆಂದು ಹೇಳುತ್ತಲೇ ಹನುಮಂತನಂತೆ ರಾಮನಲ್ಲಿ ಶ್ರದ್ಧೆಯಿಟ್ಟು ಅಂದರೆ ಧರ್ಮದಲ್ಲಿ ಶ್ರದ್ಧೆಯಿಟ್ಟು ಪುರುಷಾರ್ಥಗಳನ್ನು ಸಾಧಿಸಬೇಕೆಂದರು. 'ಬೆಟ್ಟದ ಶಿಖರಕ್ಕೆ ಮೆಟ್ಟಲುಗಳನ್ನು ಒಂದೊಂದಾಗಿ ಹತ್ತಬೇಕೆ'ಂದರು. ಡಿ. ವಿ. ಜಿ. ಮಾನವತಾವಾದಿ ಹೌದು, ಆದರೆ ಧಾರ್ಮಿಕ ಮಾನವತಾವಾದಿ; ಪ್ರಗತಿವಾದಿ ಹೌದು, ಆದರೆ ಸಂಪ್ರದಾಯನಿಷ್ಠ ಪ್ರಗತಿವಾದಿ. ಭಾರತೀಯ ಪುನರುಜ್ಜೀವನದ ಕಾಲದಲ್ಲಿ ಇಂಥ ಒಂದು ಒಲವು, ಇಂಥ ಒಂದು ನಿಲುವು ಅನಿವಾರ್ಯವಾಗಿಯೇ ಕೆಲಸ ಮಾಡುತ್ತಿತ್ತು. ಆ ಕಾಲದ ಇನ್ನೊಂದು ಒಲವಾದ ಹಿಂದೂ ರಾಷ್ಟ್ರೀಯತೆ, ಧಾರ್ಮಿಕ ಪುನರುಜ್ಜೀವನ, ಆತಂಕವಾದೀ ಪ್ರವೃತ್ತಿ–ಇದರ ಜೊತೆಗೆ ಹೋಲಿಸಿದಾಗ ಗೋಖಲೆ-ಡಿ. ವಿ. ಜಿ, ಯವರ ಸಮನ್ವಯ ವಾದದ ಪ್ರಗತಿಪರತೆಯ ಪ್ರತೀತಿ ಉಂಟಾಗುವದು. ಐತಿಹಾಸಿಕ ಪ್ರಕ್ರಿಯೆಯ ಡಾಯಲೆಕ್ಟಿಕ್ಸ್‌ದಲ್ಲಿ ಈ ಸಮನ್ವಯವಾದವೂ ಅರ್ಥಪೂರ್ಣವಾಗಿದೆ. ಆದರೆ, ಅವರ ಚಾರಿತ್ರಿಕ ಮಹತ್ವವನ್ನು ಒಪ್ಪಿಕೊಂಡೂ ಅದರ ಸದ್ಯದ ಅಪ್ರಸ್ತುತತೆಯನ್ನು ಎತ್ತಿ ತೋರಿಸಬೇಕಾದದ್ದು ಅನಿವಾರ್ಯ ಸಂಗತಿ.

ಒಟ್ಟಿನ ಮೇಲೆ, ಡಿ. ವಿ. ಜಿ. ಯವರ ಸಾಹಿತ್ಯ, ಅವರ ತತ್ವಪ್ರಣಾಲಿ ಭಾರತೀಯ ಪುನರುಜ್ಜೀವನಕ್ಕೆ ಕನ್ನಡವು ಕೊಟ್ಟಂಥ ಒಂದು ಮಹತ್ವಪೂರ್ಣ ಕಾಣಿಕೆ ಎಂದು ನಿರ್ವಿವಾದವಾಗಿ ಹೇಳಬಹುದು.

ಸೌಜನ್ಯ : **ತಾಯಿನುಡಿ**

ದೀಪಾವಳಿ ವಿಶೇಷಾಂಕ, ೧೯೮೭.

ಬೆಲ್ಲದ ಆ್ಯಂಡ್ ಕಂಪನಿ

ಧಾರವಾಡ–೧ **ಹುಬ್ಬಳ್ಳಿ–೨೧**

ಹೊಸ ವರ್ಷದ ಬಲಿ ಅರ್ಥಾತ್ ಷಿಯಾಂಗ್‌ಲಿನ್ ಹೆಂಡತಿ

ಲೂ-ಷುನ್

ಹಳೆಯ ಚಂದ್ರಮಾಸವನ್ನು ಅನುಸರಿಸೇ ಹೊಸ ವರ್ಷ ಪ್ರಾರಂಭವಾಗಬೇಕು, ಇದು ಚೈನಾದ ಲೆಕ್ಕಾಚಾರ, ಆದರೆ ಒಂದು ದಿನ ಮೊದಲೇ ಹೊಸ ವರ್ಷ ಪ್ರಾರಂಭವಾಗಿದೆ ಅಂತ ಅನ್ನಿಸುತ್ತಿದೆ. ಹೇಳಬೇಕೆಂದ್ರೆ ಹಳ್ಳಿಗಳಲ್ಲಿ ಪಟ್ಟಣಗಳಲ್ಲಿ ಮಾತ್ರ ಅಲ್ಲ. ಕೊನೆಗೆ ಬೀಸುವ ಗಾಳಿಯ ಅಲೆ ಅಲೆಯುಲ್ಲೂ ಹೊಸ ವರ್ಷದ ಆಗಮನದ ಸುಳಿವು ಗೋಚರಿಸುತ್ತಿರುವುದು. ಆಕಾಶದ ಬಹು ಕೆಳಗೆ ಉಯ್ಯಾಲೆ ಯಾಡುತ್ತಿರುವ ಮೋಡಗಳು ಮಿರಿಮಿರಿ ಮಿಂಚುತ್ತಿವೆ. ಅದಕ್ಕೆ ಜೊತೆಯಾಗಿ ಅಗ್ನಿ ದೇವನಿಗೆ ಬೀಳ್ಕೊಡುವ ಸಮಾರಂಭಕ್ಕೆ ಸಂಬಂಧಿಸಿದಂತೆ ನಡೆದಿರುವ ಪಟಾಕಿಗಳ ಸ್ಫೋಟದ ಸದ್ದು ಕಿವಿಗಡುಚಿಕ್ಕುವಂತೆ ಕೇಳ ಬರುತ್ತಿದೆ. ತೀರಾ ಹತ್ತಿರದಲ್ಲೆ ಪಟಾಕಿಗಳ ನೆತ್ತಿಗೆ ಬೆಂಕಿ ಹಚ್ಚುವ ಕೆಲಸ ನಡೆದಿದೆ. ಕಿವಿಗಳ ಕರ್ಣಪಟಲಗಳು ಕತ್ತರಿಸಿ ಹೋಗುವಷ್ಟರ ಮಟ್ಟಿಗೆ ಕೆಟ್ಟ ಸದ್ದು. ಸದ್ದಡಗುವ ಮೊದಲೇ ಇಡೀ ವಾತಾವರಣದಲ್ಲಿ ಮದ್ದು ಗುಂಡಿನ ಒಂದು ವಿಧದ ಕಮರು ವಾಸನೆ ಆವರಿಸಿಬಿಟ್ಟಿತು. ಅಂತಹ ಒಂದು ರಾತ್ರಿ ಸಮಯದಲ್ಲಿ ನಾನು ನಮ್ಮೂರಾದ ಲೂಜೆನ್ ಸೇರಿಕೊಂಡೆನು. ಅದು ನನ್ನೂರಂತ ನಾನೆಂದೂ ಅಲ್ಲಿ ಖಾಯಂ ಆಗಿ ವಾಸಿಸದೇ ಇರುತ್ತಿದ್ದುದರಿಂದ 'ಲೂ' ಮನೆಯೊಳಗೆ ತಾತ್ಕಾಲಿಕ ಬಿಡಾರ ಹಾಕಬೇಕಾಗಿಬಂತು. ಆತನ ಕುಟುಂಬದಲ್ಲಿ 'ಲೂ' ನಾಲ್ಕನೆಯ ಸದಸ್ಯ, ನಮ್ಮ ವಂಶದಲ್ಲಿ ಆತ ಕಂದಾಚಾರದ ಸಾಕಾರಮೂರ್ತಿ, ಆದ್ದರಿಂದ

ಲೂ-ಷುನ್ : ಚೀನಾದ ಒಬ್ಬ ಚರಿತ್ರಾರ್ಹ ಕಥೆಗಾರ. ಇವರ ಮೂಲ ಹೆಸರು ಝೊ ಸೂಜನ್. ಈ ಕಥೆ ಬರೆದ ಕಾಲ ೧೯೨೪.

ನಾನು ಆತನನ್ನು ನಾಲ್ಕನೆಯ ಮಾಮ ಅಂತ ಕರೆಯಬೇಕು. ಆತ ಓದಿಕೊಂಡಿದ್ದು ಇಂಪೀರಿಯಲ್ ಕಾಲೇಜಿನಲ್ಲಿ. ನವಕನ್‌ಫ್ಯೂಷಿಯುನ್ ವಾದದ ಬಗ್ಗೆ ಚೆನ್ನಾಗಿ ಓದಿಕೊಂಡಿರುವನು. ವಯಸ್ಸು, ಮತ್ತು ಆರೋಗ್ಯದ ವ್ಯತ್ಯಾಸವೊಂದನ್ನು ಬಿಟ್ಟರೆ ಮತ್ತೆಂಥ ವ್ಯತ್ಯಾಸ ನಮ್ಮಿಬ್ಬರ ಮಧ್ಯೆ ಇಲ್ಲ.

ನಾವು ಪರಸ್ಪರ ಬೇಟಿಯಾದಾಗ ಕ್ಷೇಮಸಮಾಚಾರದ ವಿನಿಮಯ ನಡೆಯುವುದು. ನಾನು ಸ್ವಲ್ಪ ದಪ್ಪ ಆಗಿರುವೆನೆಂದು ಹೇಳಿದ. ಆನಂತರ ಸಂಸ್ಕರಣವಾದಿಗಳ ಬಗ್ಗೆ ಕಠಿಣವಾಗಿ ಮಾತಾಡಿದ. ಈ ಮಾತನ್ನು ವೈಯಕ್ತಿಕವಾಗಿ ನಾನು ಪರಿಗಣಿಸಲಿಲ್ಲ. ಆತ ಬಿಡುತ್ತಿರುವ ಬಾಣಗಳು ಕಾಂಗ್‌ಯೂ–ವೇಯ್ (ಕಾಂಗ್ ಯೂವೇಯ್ ಲಿಯಾಂಗ್ ಕ್ವಿಚ್ ಮೊದಲಾದವರು ೧೮೯೮ ರಲ್ಲಿ ಗಾಂಗ್ ಷೂ ಚಕ್ರವರ್ತಿಯ ಸಹಕಾರ ಪಡೆದು ಒಂದು ಬೂರ್ಜ್ವಾ ಸಂಸ್ಕರಣ ಚಳುವಳಿಯನ್ನು ಪ್ರಾರಂಭಿಸಿದರು. ಈ ಚಳವಳಿಯನ್ನು ಕೆಲವು ಉಗ್ರವಾದಿಗಳು ಹತ್ತಿಕ್ಕಿದ ಫಲವಾಗಿ ಪ್ರಗತಿವಿರೋಧಿಗಳು ವಿದೇಶಗಳಿಗೆ ಓಡಿ ಹೋಗಿ ಅಲ್ಲಿ ಸಾಮ್ರಾಜ್ಯವಾದಿಗಳ (royalist) ಗುಂಪನ್ನೂ ಸಂಘಟಿಸಿ constitutional monarchy ಯ ಪ್ರಚಾರ ನಡೆಸಿದರು. ಆನಂತರ ಕಾಲಾಂತರದಲ್ಲಿ ಇದು ಪ್ರಗತಿ ನಿರೋಧ ಕೂಟವಾಗಿಬಿಟ್ಟಿತು.) ಕಡೆಗೆ ಅಂತ ಚೆನ್ನಾಗಿ ಗೊತ್ತು, ನಮ್ಮ ಸಂಭಾಷಣೆ ನಡೆದ ಸ್ವಲ್ಪ ಹೊತ್ತಿನ ಬಳಿಕ ನಾನು ಅಧ್ಯಯನದಲ್ಲಿ ಮುಳುಗಿಬಿಟ್ಟೆ.

ಮರುದಿನ ನನಗೆ ಎಚ್ಚರ ಆದದ್ದು ತುಂಬಾ ತಡವಾಗಿ. ಮದ್ಯಾಹ್ನದ ಊಟದ ನಂತರ ಬಂಧುಗಳನ್ನು; ಬೀಗರು ಬಿಜ್ಜರನ್ನು; ಗೆಳೆಯರನ್ನು ಕಾಣಲು ಹೊರಗಡೆ ಹೊರಟೆ. ಮರುದಿನವೂ ಸಹ ಇಂಥ ಕೆಲಸ ಮಾಡುವುದಾಯಿತು. ಅವರ್‍ಯಾರಲ್ಲಿ ವಯಸ್ಸಿನ ವ್ಯತ್ಯಾಸ ಬಿಟ್ಟರೆ ಮತ್ತೊಂದು ವ್ಯತ್ಯಾಸ ಕಾಣಲು ನನ್ನಿಂದಾಗಲಿಲ್ಲ. ಪ್ರತಿ ಕುಟುಂಬವೂ ಬಲಿಗೆ ಸಂಬಂಧಿಸಿದ ವಿಷಯದಲ್ಲಿ ತನ್ಮಯವಾಗಿರುವುದು ನನ್ನ ಗಮನಕ್ಕೆ ಬಂದಿತು. ಇದು ಹೊಸವರ್ಷದ ಸಂಭ್ರಮದ ಹಬ್ಬ. ಲೂಜೆನ್ ಪ್ರಜೆಗಳು ಅದೃಷ್ಟ ದೇವತೆಯನ್ನು ಸಂತೃಪ್ತಿಪಡಿಸಿ., ಈ ಹೊಸವರ್ಷದ ಉದ್ದಕ್ಕೂ ತಮ್ಮೆಲ್ಲರನ್ನೂ ಸುಖವಾಗಿಟ್ಟಿರು ಅಂತ ಬೇಡಿಕೊಳ್ಳುವರು. ಅವರು ಕೋಳಿಗಳನ್ನು ಬಾತುಕೋಳಿಗಳನ್ನು ಕೊಲ್ಲುವರು. ಹಂದಿಮಾಂಸವನ್ನು ಕೊಂಡುಕೊಂಡು ಹೆಂಗಸರು ತಂತಮ್ಮ ಕೈಗಳು ಸವೆಯುವವರೆಗೆ ತಿಕ್ಕಿ ತಿಕ್ಕಿ ತೊಳೆಯುವರು. ಕೆಲವರು ಮಹಿಳೆಯರು ಮಾಂಸ ತೊಳೆಯಲು ಬೆಳ್ಳಿ ದಂಡಗಳನ್ನು ಉಪಯೋಗಿಸುವುದೂ ಉಂಟು. ಬೆಳ್ಳಿದಂಡಗಳಿಂದ ಅಡುಗೆ ಮಾಡುವುದೂ ಉಂಟು. ಮಾಂಸದ ಅಡುಗೆ ರೆಡಿಯಾದ ನಂತರ ಪ್ರತಿಮಾಂ

ಸದ ತುಂಡಿಗೂ ಚಿಕ್ಕ ಚಿಕ್ಕ ಹುಲ್ಲಿನ ಕಡ್ಡಿಗಳನ್ನು ಸಿಕ್ಕಿಸುವರು. ಇದ ಕ್ಕೇನೆ ನೈವೇದ್ಯ ಅಂತ ಅನ್ನುವುದು. ಇವನ್ನೆಲ್ಲ ಸೂರ್ಯೋದಯದ ಮೊದ ಲೇ ಅದೃಷ್ಟದೇವತೆಯ ಮುಂದಿರಿಸಿ ಸ್ವೀಕರಿಸಿ ಕಾಪಾಡುವಂತೆ ಪ್ರಾರ್ಥಿಸು ವರು. ಹಚ್ಚಿದ ಧೂಪ ದೀಪದ ಹೊಗೆಯಲ್ಲಿ ಕ್ಷಣಹೊತ್ತು ಕಣ್ಣು ಮುಚ್ಚಿ ತಲ್ಲೀನರಾಗುವರು. ಪೂಜೆಗೆ ಅರ್ಹರಾದ ವ್ಯಕ್ತಿಗಳೆಂದರೆ ಗಂಡಸರು. ಇದೆಲ್ಲ ಪೂರ್ತಿಯಾದ ಬಳಿಕ ಮದ್ದು ಗುಂಡುಪಟಾಕಿ ಸಾಮಾನುಗಳಿಗೆ ಬೆಂಕಿ ಹಚ್ಚುವ ಕೆಲಸ ನಡೆಯುವುದು. ಪ್ರತಿವರ್ಷ ಈ ಹಬ್ಬದ ಸಮಯದಲ್ಲಿ ದೇವತೆಗೆ ನೈವೇದ್ಯಕ್ಕಾಗಿ ಬಲಿಕೊಡುವ ಕೆಲಸವನ್ನು ಪ್ರತಿ ಕುಟುಂಬವೂ ಮಾಡುತ್ತದೆ. ಆದ್ದ ರಿಂದಾಗಿ ಈ ವರ್ಷದ ಹಬ್ಬಕ್ಕೆ ಹಳೆಯ ಆಚಾರವಿಚಾರಗಳನ್ನೇ ಪ್ರಜೆಗಳು ಅನುಸರಿಸದೆ ಇರುತ್ತಿಲ್ಲ.

ಅಪತ್ತು ಆಕಾಶದ ತುಂಬ ಮಬ್ಬಿನ ಮೋಡಗಳ ಪರಸೆ ನಡೆದಿತ್ತು, ಮಧ್ಯಾಹ್ನದ ನಂತರ ಮಂಜು ತಟಗುಟ್ಟುವುದು ಪ್ರಾರಂಭವಾಯಿತು. 'ಫ್ಲಂ' ಹೂವಿನ ದಳ ಗಳು ಚೂರುಚೂರಾಗುವಂಥ ಮಂಜಿನ ಮಳೆ, ' ಲೂಜೆನ್ ' ಊರೆಲ್ಲ ಗಾಳಿ ಯಿಂದ, ಮಂಜಿನ ಮಳೆಯಿಂದ ತುಂಬಿಬಿಟ್ಟಿತು. ನಾನು ಮಾಮನ ಕೋಣೆ ಸೇರುವ ಹೊತ್ತಿಗೆ ಇಡೀ ಮನೆ ಎಂಬೋ ಮನೆ ಮಂಜಿನಲ್ಲಿ ಮುಣುಗಿ ಹೋಗಿ ಅರಳೆಗುಡ್ಡದಂತೆ ಕಾಣಿಸುತ್ತಿತ್ತು. ಆ ಕೋಣೆ ಪ್ರಕಾಶಮಾನವಾಗಿತ್ತು. ದೀರ್ಘಾ ಯುಷ್ಯವನ್ನು ಕುರಿತು ಆಶಿಸುವಂಥ ಕೆಂಪು ಅಕ್ಷರಗಳಿದ್ದ ಹಲಗೆಯೊಂದು ಗೋಡೆ ಗಂಟಿಕೊಂಡಂತೆ ತೂರಾಡುತ್ತಿರುವುದು. ಆ ಹಲಗೆ ಮೇಲೆ ಟಾವೋವಾದ ಋಷಿ ' ಚೆನ್-ಟುವಾನ್ ' ಸೂಕ್ತಿಯೊಂದು ಬರೆಯಲ್ಪಟ್ಟಿದೆ. ಕಾಗದಗಳ ಕಟ್ಟೊಂದು ಮನೆಯ ನಗಂಡಿ ಮೇಲೆ ಬಿದ್ದಿರುವುದು. ಮತ್ತೊಂದು ಹಲಗೆ ಇನ್ನೊಂದು ಕಡೆ ತೂಗಾಡುತ್ತಿರುವುದು. ಅದರ ಮೇಲೆ ' ಸೂತ್ರಗಳನ್ನು ಅರ್ಥಮಾಡಿ ಕೊಂಡಾಗ ಮಾನಸಿಕ ಶಾಂತಿ ಲಭಿಸುತ್ತದೆ ' ಎಂಬುದಾಗಿ ಇರುವುದು, ಏನೂ ತೋಚದೆ ನಾನು ಕಿಟಕಿ ಕೆಳಗೆ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಪುಸ್ತಕಗಳನ್ನು ಅಚ್ಚು ಕಟ್ಟಾಗಿ ಜೋಡಿಸಬೇಕೆಂದು ನಿರ್ಧರಿಸಿ ಅತ್ತ ಹೊರಟೆನು. ಒಂದು ಆಶ್ಚರ್ಯ ವೆಂದರೆ ' ಕಾಂಗ್ ಸೀ ಸಿಘಂಟು ' ; ಚಿಯಾಂಗ್ ಎಂಗ್‌ನ ತತ್ವಶಾಸ್ತ್ರದ ಗ್ರಂಥ ಗಳು, ಕನ್‌ಫ್ಯೂಷಿಯಸ್‌ನ ಮೇಲೆ ಸಮೀಕ್ಷೆ ನಡೆಸಿದ ಪುಸ್ತಕಗಳು ಮೊದಲಾ ದವು ಎಲ್ಲ ಬಿದ್ದಿರುವವು. ಮೂರು ಆರಾದರೂ ಚಿಂತೆ ಇಲ್ಲ: ನಾಳೆ ಹೋಗೇ ತೀರಬೇಕೆಂದು ನಿರ್ಧರಿಸಿದೆ.

ಅದೂ ಅಲ್ಲದೆ ಆ ದಿನ ಷಿಯಾಂಗ್‌ಲಿನ್ ಹೆಂಡತಿಯನ್ನು ಬೇಟಿ ಮಾಡಿದ ಫಲ ವಾಗಿ ನನ್ನೊಳಗೆ ಅಶಾಂತಿಯ ಹೊಗೆ ಆಡಿತು. ನಿನ್ನೆದಿನ ಮದ್ಯಾಹ್ನವೇ ನಾನು ಆಕೆಯನ್ನು ಬೆಟ್ಟಿಯಾದದ್ದು. ಆ ಊರಿಗೆ ಪೂರ್ವ ದಿಕ್ಕಿಗಿರುವ ಗೆಳೆಯ

ನೊಬ್ಬನನ್ನು ಬೆಟ್ಟಿಯಾಗಬೇಕೂ ಅಂತ ನಾನು ಆಕಡೆ ಹೊರಟಿದ್ದಾಗ ಆಕೆ ನದಿಯ ತೀರದಲ್ಲಿ ನನ್ನನ್ನು ಸಂಧಿಸಿದಳು. ಆಕೆ ನನ್ನಕಡೆ ದೃಷ್ಟಿ ಕೇಂದ್ರೀಕರಿಸಿದ್ದರಿಂದಾಗಿ ಇನ್ನೇನು ಆಕೆ ನನ್ನನ್ನು ಮಾತಾಡಿಸುವಳೆಂದು ನಾನು ಯೋಚಿಸಿದೆ. ಆ ಊರಲ್ಲಿನ ಯಾರಲ್ಲೂ ಆಕೆಯಲ್ಲಾಗಿರುವಷ್ಟು ಬದಲಾವಣೆ ಆಗಿಲ್ಲ. ಸಿಕ್ಕು ಗಟ್ಟಿದ ಮುಖ. ಕೇವಲ ಐದು ವರ್ಷದ ಹಿಂದೆಯಷ್ಟೆ ಕೆಲವು ಬಿಳಿಗೂದಲು ಗಳಿದ್ದ ಆಕೆಯ ತಲೆ ಈಗ ಪೂರ್ತಿ ಬೆಳ್ಳಗಾಗಿಬಿಟ್ಟಿರುವುದು. ಆಕೆಯ ವಯಸ್ಸು ನಲವತ್ತು ದಾಟಿರಲಿಕ್ಕಿಲ್ಲ. ಆಕೆ ಕೆತ್ತಿದ ಶಿಲ್ಪದಂತೆ ಗೋಚರಿಸಿದಳು. ಆಕೆಯ ಮುಖದ ಮೇಲೆ ಹಿಂದೆ ಕಂಡುಬರುತ್ತಿದ್ದ ವಿಷಾದ ಛಾಯೆ ಇಲ್ಲ. ಇನ್ನೂ ಹೊರಳಾಡುವ ಗುಡ್ಡೆಗಳ ಕಣ್ಣುಗಳಿಂದಾಗಿ ಆಕೆಯ ದೇಹದಲ್ಲಿ ಜೀವವಿದೆ ಎಂದು ಗುರುತಿಸಬಹುದು. ಆಕೆಯ ಒಂದು ಕೈಯಲ್ಲಿ ಪುಟ್ಟಿ ಇದೆ. ಆ ಪುಟ್ಟಿಯೊಳಗೆ ಖಾಲಿ ಬಟ್ಟಲಿದೆ. ಇನ್ನೊಂದು ಕೈಯಲ್ಲಿ ದೇಹದ ಆಸರೆಗೊಂದು ಬಿದಿರಿನ ಕೋಲಿರುವುದು. ನೋಡಿದರೆ ಬಿಕ್ಷುಕಿಯಂತೆ ಕಾಣುವಳು. ಆಕೆ ಬಂದು ನನ್ನಲ್ಲಿ ಹಣ ಯಾಚಿಸಬಹುದೆಂದು ನಾನು ಕ್ಷಣ ಹೊತ್ತು ಹಾಗೇ ನಿಂತಿದ್ದೆ.

"ಅಂದಹಾಗೆ ವಾಪಾಸು ಬಂದು ಬಿಟ್ಟಿರೇನು?" ಮೊದಲೇ ನನ್ನನ್ನು ಆಕೆ ಈ ರೀತಿಯಾಗಿ ಪ್ರಶ್ನಿಸಿದಳು.

"ಹೌದು"

"ಒಳ್ಳೆಯದು, ಚೆನ್ನಾಗಿ ಓದಿಕೊಂಡಿರೋ ವಿದ್ಯಾವಂತರು. ಒಳ್ಳೆ ಪ್ರಪಂಚ ಜ್ಞಾನ ಕೂಡ ಇದೆ. ನಿಮ್ಮಹತ್ರ ಒಂದು ಕೇಳಬೇಕೆಂದುಕೊಂಡಿರುವೆ." ನಿರ್ಜೀವವಾಗಿದ್ದ ಆಕೆಯ ಕಣ್ಣುಗಳಲ್ಲಿ ಬೆಳಕು ಒಂದು ಕ್ಷಣ ಕೋರೈಸಿತು.

ಆಕೆ ಯಾವತ್ತೂ ಈ ರೀತಿ ಕೇಳಲಾರಳೆಂದೇ ನಿರ್ಧರಿಸಿದ್ದ ನಾನು ಆಶ್ಚರ್ಯದಿಂದ ಅಲ್ಲಿ ನಿಂತು ಬಟ್ಟೆ.

"ಅದೇನೆಂದ್ರೆ" ಆಕೆ ಮುಂದೆ ಎರಡು ಹೆಜ್ಜೆ ಇಟ್ಟು: ಧ್ವನಿತಗ್ಗಿಸಿ ಯಾವುದೋ ರಹಸ್ಯ ಹೇಳುತ್ತಿರುವಂತೆ ಪಿಸುಪಿಸು ನುಡಿದಳು.

"ಮನುಷ್ಯ ಸತ್ತನಂತರ ದೆವ್ವ ಆಗ್ತಾನಂತಿರಾ?" ಆಕೆಯ ದೃಷ್ಟಿಯನ್ನು ಎದುರಿಸಲು ನನ್ನಿಂದ ಸಾಧ್ಯವಾಗಲಿಲ್ಲ. ಅಂದುಕೊಂಡಂಥ ಪರೀಕ್ಷೆ ಬಂದಾಗ; ಉಪಾಧ್ಯಾಯರು ವಿದ್ಯಾರ್ಥಿಯ ಎದುರಿಗೇ ನಿಂತು ಪ್ರಶ್ನೆಗಳಿಗೆ ಉತ್ತರ ಬರೆ ಅಂದಾಗ ವಿದ್ಯಾರ್ಥಿಯ ದೇಹದಲ್ಲಿ ನಖಶಿಖಾಂತ ನಡುಗು ಹುಟ್ಟುವುದಲ್ಲ— ಅಂತ ನಡುಗು ನನ್ನಲ್ಲೂ ಹುಟ್ಟಿತು. ಈ ಭೂತದ ಅಸ್ತಿತ್ವದ ಬಗ್ಗೆ ನಾನು ಯಾವತ್ತೂ ಯೋಚಿಸಿದವನೇ ಅಲ್ಲ. ಅಂದಮೇಲೆ ಇಂಥ ಕ್ಲಿಷ್ಟ ಪರಿಸ್ಥಿತಿಯಲ್ಲಿ ಆಕೆಗೆ ನಾನು ಯಾವ ಸಮಾಧಾನ

ನೀಡಲಿ? ಒಂದುಕ್ಷಣ ಈ ರೀತಿ ಯೋಚಿಸಿದೆ. "ಇಲ್ಲಿ ಇರೋ ಎಲ್ಲರಿಗೂ ಇಂಥ ಒಂದ ಲ್ಲಾ ಒಂದು ನಂಬಿಕೆ ಇದ್ದೇಇದೆ. ಇಂಥ ಒಂದು ನಂಬಿಕೆ ಬಗ್ಗೆ ಈಕೆಗೆ ಅನುಮಾನ ಬಂದಿರುವುದು. ಆಕೆಯ ನಂಬಿಕೆಯನ್ನೇ ಸಮರ್ಥಿಸುತ್ತ ಉತ್ತರಿಸಿದರೆ ಹೇಗೆ" ಅಂತ.

"ದೆವ್ವ ಆದ್ರೂ ಆಗಬಹುದ್ದು" ಹೆದರಿ ಉತ್ತರಿಸಿದೆ.
"ಅಂದಮೇಲೆ ನರಕ ಇದ್ದೇ ಇರಬೇಕು ಅಲ್ವೆ!"
"ಏನು ನರಕವೋ" ಆಶ್ಚರ್ಯದಿಂದ ಬೆಚ್ಚಿದೆ.

"ನರಕಾನೊ? ತರ್ಕದಿಂದ ನೋಡಿದಾಗ ಇರಬಹುದೂ ಅಂತ ಅನ್ನಿಸ್ತದೆ. ನರಕ ಇದ್ದಿರಬೇಕಾದ ಅವಶ್ಯಕತೆ ಇಲ್ಲ. ನರಕದ ಬಗ್ಗೆ ನಾವ್ಯಾಕೆ ತಲೆ ಕೆಡಿಸಿಕೊಳ್ಳುವದು" ಅಂತ ಸ್ಪಷ್ಟವಾಗಿ ನುಡಿದೆ. "ಒಂದು ಕುಟುಂಬದ ಎಲ್ಲಾ ಸದಸ್ಯರು ಸತ್ತ ನಂತರ ಮತ್ತೆ ಪರಸ್ಪರ ಭೆಟ್ಟಿಯಾಗುವರೆಂದು ಇದರ ಅರ್ಥವೋ" ಅಂತ ಆಕೆ ಕೇಳಿದಳು.

"ಚೆನ್ನಾಗಿದೆ. ಅವರು ಒಬ್ಬರಿಗೊಬ್ಬರು ಕಲೆಯುವರೋ ಇಲ್ಲವೋ.. ಅನಾ......" ಆಗಾಗಲೇ ನಾನು ಬಹು ದೊಡ್ಡ ಮೂರ್ಖನೆಂದು ಖಾತ್ರಿಪಡಿಸಿಕೊಂಡಿದ್ದೆ. ನನ್ನ ಅನುಮಾನಗಳೂ, ಆಲೋಚನೆಗಳೂ, ಇವೆಲ್ಲ ಆ ಮೂರು ಪ್ರಶ್ನೆಗಳ ಮುಂದೆ ತಲೆಎತ್ತಿ ನಿಲ್ಲದೆ ಕುಸಿದವು. ಒಮ್ಮೆ ನನ್ನ ನಂಬಿಕೆಗಳನ್ನು ಪಕ್ಕಕಿಟ್ಟು ಅಷ್ಟಕ್ಕು ಮೊದಲು ನಾನು ಹೇಳಿದ್ದಕ್ಕೆ ವ್ಯತಿರಿಕ್ತವಾಗಿ ಹೇಳಬೇಕೆಂದು ನಿರ್ಧರಿಸಿದೆ. "ಈ ವಿಷಯದ ಬಗ್ಗೆ ನನಗೆ ಅಷ್ಟಕ್ಕಾಗಿ ಗೊತ್ತಿಲ್ಲ...ನಿಜವಾಗಿಯೂ ದೆವ್ವ ಪಿಶಾಚಿಗಳ ಬಗೆಗೆ ಒಂದಿಷ್ಟೂ ನನಗೆ ತಿಳಿಯದು" ಅಂದುಬಿಟ್ಟೆ. ಆಕೆಯು ಮುಂದೆ ಕೇಳಲಿರುವ ಪ್ರಶ್ನೆಗಳ ಉಪಟಳದಿಂದ ತಪ್ಪಿಸಿಕೊಳ್ಳಬೇಕೆಂದೇ ನಾನು ಈ ರೀತಿ ಹೇಳಬೇಕಾಯಿತು. ತುಂಬ ಅವಸರದಿಂದ ನಾನು ಸರಸರ ನಡೆದು ಮಾವನ ಮನೆ ಸೇರಿಕೊಂಡೆನು. ಮನೆ ಸೇರುವ ಹೊತ್ತಿಗೆ ಮನಸ್ಸು ಅಶಾಂತಿಯ ಉಗ್ರಾಣವಾಗಿಬಿಟ್ಟಿತ್ತು. ಮನಸ್ಸು ತನ್ನ ಪಾಡಿಗೆ ತಾನು ಆಲೋಚಿಸ ತೊಡಗಿತ್ತು. ನನ್ನ ಉತ್ತರದಿಂದ ಆಕೆಗೆ ಯಾವ ಅಪಾಯ ಆಗಲಿಕ್ಕಿಲ್ಲವಲ್ಲ!?.. ಊರಿನ ಸರ್ವರೂ ಸಡಗರದಿಂದ ಹಬ್ಬ ಆಚರಿಸುತ್ತಿರುವ ಸಂದರ್ಭದಲ್ಲಿ ಆಕೆಗೆ ಒಂಟಿತನ ಕಾಡುತ್ತಿದ್ದೀತು? ಅಥವಾ ಮತ್ತಾವುದಾದರೂ ಕಾರಣ ಇರಬಹುದೆ ? ಆ ಕಾರಣದಿಂದಾಗಿ ಆಕೆಯ ಬದುಕಿನಲ್ಲಿ ಈಕ್ಷಣ ಏನಾದರೂ ಸಂಭವಿಸಿದರೆ ? ಮುಂದೆ ನಡೆಯಲಿರುವುದನ್ನು ಯೋಚಿಸುವ ಶಕ್ತಿ ಆ ಮುದುಕಿಗೆ ಇದ್ದೀತಾ ? ಆಕೆಯ ಬದುಕಿನಲ್ಲಿ ನಡೆಯಬಹುದಾದ ಯಾವುದೇ ಸುಘಟನೆಗಾಗಲೀ; ದುರ್ಘಟನೆಗಾಗಲೀ ನಾನೇ ಒಂದುರೀತಿಯಲ್ಲಿ ಜವಾಬ್ದಾರಿದಾರ ? ಹೀಗೆ ಯೋಚಿಸುತ್ತ ನಾನು ನನ್ನಷ್ಟಕ್ಕೆ ನಕ್ಕೆನು. ಕೆಲವು ಮೇಧಾವಿಗಳು ತನ್ನನ್ನು ಹುಚ್ಚನೆಂದು ಕರೆಯುತ್ತಿರುವಲ್ಲಿ ಸ್ವಲ್ಪಾದರೂ ಸತ್ಯಾಂಶವಿರಲಿಕ್ಕೇ ಬೇಕು. ಮೊದಲನೆಯ ಉತ್ತರದಲ್ಲಿ ನಾನು ಸ್ಪಷ್ಟವಾಗಿ ಹೇಳಿಬಿಟ್ಟಿರುವೆನು.

ನನ್ನಿಂದ ಖಚಿತವಾಗಿ ಹೇಳಲಿಕ್ಕಾಗುತ್ತಿಲ್ಲ ಅಂತ. ಇದರಿಂದಾಗಿ ಮುಂದೇನಾದರೂ ದುರ್ಘಟನೆ ಜರುಗಿದಲ್ಲಿ ಅದಕ್ಕೂ ನನಗೂ ಯಾವ ಸಂಬಂಧವಿರುವುದಿಲ್ಲ.

“ನನ್ನಿಂದ ಖಚಿತವಾಗಿ ಹೇಳಲಾಗುತ್ತಿಲ್ಲ” ಎಂಥ ಉಪಯೋಗಕರವಾದ ವಾಕ್ಯ ಇದು. ಒಂದಿಷ್ಟು ಅನುಭವ ದ್ರವ್ಯ ಇರವ ಇಪತ್ತಿನ ಕೆಲವು ಯುವಕರು ಸಾಮಾಜಿಕ ಸಮಸ್ಯೆಗಳನ್ನು ತಂತಮ್ಮ ತಲೆಮೇಲೆ ಹೊತ್ತುಕೊಂಡು ಪರಿಹರಿಸಬೇಕೆಂದು ಒದ್ದಾಡುತ್ತಲೇ ಇರುತ್ತಾರೆ. ಆ ನಂತರ ಅಲ್ಪಸ್ವಲ್ಪ ಹೆಚ್ಚುಕಡಿಮೆಯಾದಲ್ಲಿ ಅವರು ಅಪವಾದಗಳಿಗೆ ಗುರಿಯಾಗದೆ ಇರುವುದಿಲ್ಲ. ಖಚಿತವಾಗಿ ಹೇಳಲಾಗುವುದಿಲ್ಲ ಎಂಬ ಈ ಪವಾಡ ಸದೃಶವಾದ ವಾಕ್ಯ ಒಂದು ನೆನಪಿನಲ್ಲಿಟ್ಟುಕೊಂಡು ಬಿಟ್ಟರೆ ಸಾಕು; ಯಾರು ಎಂಥ ಅಪಾಯದಿಂದ ಎಂಥ ಅಪವಾದಗಳಿಂದ ಬೇಕಾದರೂ ಪಾರಾಗಿಬಿಡಬಹುದು. ಬಿಚ್ಚುಗತ್ತಿಯಂಥ ವಾಕ್ಯ ಅದು. ಆ ವಾಕ್ಯದ ಉಪಯೋಗದ ಬಗ್ಗೆ ನನಗಂತೂ ಚನ್ನಾಗಿ ಅರ್ಥವಾಗಿದೆ.

ಆ ರಾತ್ರಿ ಪರ್ಯಂತರ ವಿಶ್ರಾಂತಿ ತೆಗೆದುಕೊಳ್ಳುವುದರ ಮೂಲಕ ಆ ವಾಕ್ಯವನ್ನು ಮರೆತುಬಿಡಬೇಕೆಂದು ಸಾವಿರ ಸಾರಿ ಪ್ರಯತ್ನಿಸಿ ನೋಡಿದೆ, ಪ್ರಯತ್ನಿಸಿದಷ್ಟು ಜಿಗುಣೆಯಂತೆ ಕವುಚಿ ಬಿಟ್ಟುಕೊಂಡಿರುವುದು ಆ ವಾಕ್ಯವು. ಅಂದರೆ ಅಸಂಭವನೀಯವಾದ ಘಟನೆ ಎಂದೂ ನಡೆಯದೇ ಇರಬಹುದು; ಅಲ್ಲವೆ ? ಆ ಭಯಂಕರವಾಗಿ ಮಂಜು ಸುರಿಯುತ್ತಿರುವ ಸಮಯದಲ್ಲಿ; ಆ ಕತ್ತಲೆಯ ಕೋಣೆಯಲ್ಲಿ ನನ್ನನ್ನು ಈ ಆಲೋಚನೆಗಳು ನನ್ನನ್ನು ಕವುಚಿಕೊಂಡು ಹಿಂಸಿಸತೊಡಗಿದವು. ಮರುದಿನವೇ ಇಲ್ಲಿಂದ ಕಾಲುಕೀಳಬೇಕೆಂದು ನಿಶ್ಚಯಿಸಿಬಿಟ್ಟಿರುವೆ.

ಪೂಸಿಂಗ್ ಹೊಟೆಲ್ಲಿನಲ್ಲಿ ಕೇವಲ ಒಂದೇ ಒಂದು ಡಾಲರ್‌ಗೆ ಒಂದು ದೊಡ್ಡ ಮೀನಿನ ರೆಕ್ಕೆ ಸಿಕ್ಕುತ್ತಿತ್ತು. ಈಗ ಹಾರುವ ಮೀನಿನ ದರ ಹೆಚ್ಚಿದ್ದರೂ ಹೆಚ್ಚಿರಬಹುದು. ಮೀನಿನ ರೆಕ್ಕೆ ತಿನ್ನಲು ತುಂಬಾ ರುಚಿ ಇರುತ್ತಿದ್ದವು. ಆ ದಿನಗಳಲ್ಲಿ ನಾನು ಸ್ನೇಹಿತರ ಜೊತೆ ಕೂತು ಚಪ್ಪರಿಸುತ್ತಿದ್ದೆನು. ಈಗ ಒಂಟಿಯಾಗಿ ಹೋಗಿಯಾದರೂ ಮೀನಿನ ರುಚಿ ನೋಡಿಯೇ ತೀರಬೇಕೆಂದು ನಿರ್ಧರಿಸಿದೆ. ಮರುದಿನ ಹೋಗಿಯೇ ತೀರಬೇಕೆಂದು ಮಾಡಿರುವ ನಿರ್ಧಾರವನ್ನು ಬದಲಾಯಿಸುವ ಪ್ರಶ್ನೆಯೇ ಇಲ್ಲ. ಏನಕೇನ ಪ್ರಕಾರೇಣ ಹೋಗಿಯೇ ತೀರಬೇಕು. ಯಾವುದು ನಡೆಯಬಾರದೆಂದು ನಿರ್ಧರಿಸಿರುತ್ತೇನೋ ಅದು ನಡೆಯದೆ ಬಿಡುವುದಿಲ್ಲ. ಇದು ನನ್ನ ಅನುಭವವ್ಯಾಪ್ತಿಯ ವಿಷಯ. ಇದು ಕೂಡ ನಡೆದೇ ಬಿಟ್ಟರೆ ಎಂಬ ಭಯ ಮೂಡಿ ಒಂದು ಕ್ಷಣಾ ಗಡಗಡ ನಡುಗಿದೆ. ಅವತ್ತು ಸಂಜೆ ಒಳಗಿನ ಕೋಣೆಯಲ್ಲಿ ಯಾರೋ ಏನೋ ಮಾತಾಡಿಕೊಳ್ಳುತ್ತಿದ್ದದು ನನ್ನ ಕಿವಿಗೆ ಬಿದ್ದಿರುವುದು, ಆ ಕೆಲವು ನಿಮಿಷಗಳ ನಂತರ ಅವರ ಮಾತುಗಳು ನಿಂತುಹೋಗಿ ಮಾವನ ಮಾತುಗಳು ಮಾತ್ರ ಕೇಳಿಸಿದ್ದಂತೂ

ನಿಜ. "ಎಂಥ ಸಮಯವನ್ನು ಆಯ್ದುಕೊಂಡಿರುವುದು ನೋಡು ? ಮತ್ತೆ. ಈಗ ಆಕೆ ಬೆಟ್ಟದೆನು ಕೊಂಡಿರೋ ವಿಷಯ ಇದರಿಂದಾಗಿ ನಿಜ ಆಗಿ ಬಿಡುವುದರಿಂದ ?" ನಾನು ಮೊದಮೊದಲು ಆಶ್ಚರ್ಯಚಕಿತನಾದೆನು. ಆನಂತರ ನಾನು ಮಾನಸಿಕ ಆಂದೋಲನಕ್ಕೆ ಗುರಿಯಾದೆನು. ಅವರು ನನ್ನ ಕುರಿತು ಮಾತಾಡುತ್ತಿರಲಿಕ್ಕಿಲ್ಲ ವಲ್ಲ ಎಂದೂ ಆಲೋಚಿಸತೊಡಗಿದೆನು. ನಂತರ ಇಣುಕಿ ನೋಡಿದೆನು, ಅಲ್ಲಿ ಯಾರೂ ಕಂಡುಬರಲಿಲ್ಲ. ನೌಕರ ಟೀ ಕೊಡಲೆಂದು ಬರುವವರೆಗೂ ಈ ವಿಷಯ ಕುರಿತು ತಿಳಿದುಕೊಳ್ಳುವ ಅವಕಾಶ ನನಗೆ ಸಿಕ್ಕಲಿಲ್ಲ.

"ಲೂರವರಿಗೆ ಯಾರಮೇಲೆ ಅಷ್ಟೊಂದು ಸಿಟ್ಟು ?" ಅಂತ ಪ್ರಶ್ನಿಸಿದೆ.

"ಇನ್ಯಾರ ಮೇಲೆ ಷಿಯಾಂಗ್‌ಲಿನ್ ಹೆಂಡತಿಯ ಮೇಲೆ" ಕಡ್ಡಿ ಮುರಿದಂತೆ ಉತ್ತರಿಸಿದ ಆತ.

"ಷಿಯಾಂಗ್‌ಲಿನ್ ಹೆಂಡತಿಯ ಮೇಲೋ ? ಯಾಕಂತೆ ?" ಎಂದು ನಾನು ಮತ್ತೆ ಪ್ರಶ್ನಿಸಿದೆ.

"ಸತ್ತುಹೋಯ್ತಂತೆ"

"ಹ್ಹಾ! ಸತ್ತುಹೋಯ್ತಾ!" ಒಂದು ಕ್ಷಣ ನನ್ನ ಹೃದಯದ ಬಡಿತ ನಿಂತುಬಿಟ್ಟಿತು. ಬಹುಶಃ ನನ್ನ ಮುಖದ ಬಣ್ಣಗಳೂ ಬದಲಾಗಿದ್ದಿರಬಹುದು. ತಲೆ ತಗ್ಗಿಸಿ ನಿಂತಿರುವ ನೌಕರ ನನ್ನ ವಿವರ್ಣದ ಮುಖ ಗಮನಿಸಲಿರಲಿಕ್ಕಿಲ್ಲ. ಸ್ವಲ್ಪ ಹೊತ್ತಿನಲ್ಲಿ ಚೇತರಿಸಿಕೊಂಡು ಮತ್ತೆ ಕೇಳಿದೆ.

"ಯಾವಾಗ ಸತ್ತು ಹೋದಳು ಆಕೆ"

"ಯಾವಾಗಂತೀರೋ ? ನಿನ್ನೆ ರಾತ್ರಿಯೋ : ಇವತ್ತೋ ನನಗೆ ಸರಿಯಾಗಿ ತಿಳಿಯದು"
"ಹೇಗೆ ಸತ್ತು ಹೋದಳು ?"

"ಹೇಗೆ ಸತ್ತಳೆಂದು ಕೇಳುತ್ತಿರುವಿರೋ? ಬಡತನದಿಂದಾಗಿ." ಮೆತ್ತಗೆ ಪ್ರಶ್ನೆಗೆ ಉತ್ತರಿಸಿ ತಲೆ ಎತ್ತಿ ನೋಡದೆಯೇ ನೌಕರ ಅಲ್ಲಿಂದ ಕದಲಿದನು.

ನನ್ನ ಬಾಯಿ ಒಣಗಿತು. ಮೈಯೊಳಗೆ ಕಂಪನ ಶುರುವಾಯಿತು. ನೌಕರ ಹೇಳಿದ ಪ್ರಕಾರ ಆಕೆ ಸತ್ತದ್ದು ಬಡತನದಿಂದಲೋ ಅಥವಾ ನಾನು ಖಚಿತವಾಗಿ ಹೇಳುವುದಿಲ್ಲ ಎಂದು ಹೇಳಿದ್ದ ವಾಕ್ಯದಿಂದಾಗಿಯೋ ಎಂದು ಯೋಚಿಸುತ್ತ ಭಯವಿಹ್ವಲನಾದೆನು, ನಾನೊಬ್ಬ ಅಪರಾಧಿ ಎಂಬ ಭಾವನೆ ಮೂಡಿ ಸಂಕಟ ಶುರುವಾಯಿತು.

ರಾತ್ರಿ ಊಟ ಮಾಡುವಾಗ ಮೆಲ್ಲಗೆ ಮಾತಾಡುವಂತೆ ಮಾವ ಸೂಚಿಸಿದ ಮತ್ತು ಸ್ವತಃ ತಾನು ಷಿಯಾಂಗ್–ಲಿನ್ ಹೆಂಡತಿಯ ಬಗ್ಗೆ ಮೆಲುದನಿಯಲ್ಲಿ ಮಾತಾಡಿದ.

ಆಕೆಯ ಬಗೆಗೆ ಕೇಳಬೇಕೂ ಅಂತ ನನಗೂ ಅನ್ನಿಸಿತು. ಮಾಮ ಮೊದಲೇ ಕಂದಾಚಾರಿ ಆಧುನಿಕ ಕನ್‌ಫ್ಯೂಷಿಯಸ್ ಎಂದು ಹೆಸರು ಪಡೆದಿರುವವ. ದೆವ್ವ–ಪಿಶಾಚಿಗಳು ಪ್ರಕೃತಿಯ ದ್ವಂದ್ವ ಶಕ್ತಿಗಳ ಪ್ರತಿ ರೂಪಗಳು ಎಂದು ಗಾಢವಾಗಿ ನಂಬಿರುವವನು. ಹೊಸ ವರ್ಷದ ಶುಭ ಸಂದರ್ಭದಲ್ಲಿ ಸಾವಿನ ಬಗ್ಗೆ ರೋಗರುಜಿನದ ಬಗ್ಗೆ ಮಾತಾಡುವುದೂ ಒಳ್ಳೆಯದಲ್ಲ ಎಂದು ನಂಬಿರುವ ಮೂಢ ನಂಬಿಕೆಯ ವ್ಯಕ್ತಿ. ಆದ್ದರಿಂದ ಪ್ರಶ್ನಿಸುವುದು ಸರಿಯಲ್ಲ ಎಂದು ಸುಮ್ಮನಾದೆನು. ಅಂತರಾಳದಿಂದ ಎದ್ದ ಪ್ರಶ್ನೆಗಳನ್ನು ನಾಲಗೆಯ ಪ್ರದೇಶದಲ್ಲಿ ನುಂಗಿಹಾಕಿಬಿಟ್ಟೆನು. ಆತನ ಗಂಭೀರ ಮುಖ ನೋಡಿದರೆ ನನ್ನ ಹಾಜರಿ ಆತನಿಗೆ ಇಷ್ಟವಿರದೆ ಇರಬಹುದೆಂದುಕೊಂಡೆ. ಆತಗೆ ಖುಷಿಯಾಗಲೀ ಅಂತ ನಾನು ನಾಳೆ ಊರಿಗೆ ಹೊರಡುತ್ತಿರುವುದಾಗಿ ಹೇಳಿದೆ. ನನ್ನನ್ನು ಇಲ್ಲಿಯೇ ಉಳಿದುಕೊಳ್ಳುವಂತೆ ಆತ ಅಷ್ಟಾಗಿ ಒತ್ತಾಯಪಡಿಸಲಿಲ್ಲ. ನಂತರ ನಾವಿಬ್ಬರೂ ಮಾತಿಲ್ಲದೆಯೇ ಊಟ ಮುಗಿಸಿದೆವು.

ಚಳಿಗಾಲದಲ್ಲಿ ಹಗಲು ತುಂಬ ಕಡಿಮೆ. ಅಷ್ಟೊತ್ತಿಗಾಗಲೇ ಊರು ಮಂಜಿನ ಮಬ್ಬಿನಿಂದ ತುಂಬಿಬಿಟ್ಟಿರುವುದು. ಹಗಲಲ್ಲಿ ರಾತ್ರಿಯ ಕಪ್ಪು ಕವಿಯುತ್ತಿರುವುದು ಎಂದುಕೊಂಡೆ. ದೀಪಗಳ ಬೆಳಕಿನಲ್ಲಿ ಮನೆಗಳೊಳಗೆ ಗಲಾಟೆ ಇರಬಹುದಿದ್ದರೂ ಬೀದಿಗಳಲ್ಲಿ ಜನಸಂಚಾರವೇ ಇಲ್ಲ. ಬೀಳುತ್ತಿರುವ ಮಂಜಿನ ಸದ್ದು ನನ್ನಲ್ಲಿ ಒಂಟಿತನವನ್ನು ಉದ್ದೀಪಿಸುತ್ತಿರುವುದು. ಒಂಟಿತನ ನೆನಪುಗಳು ದಾಳಿ ನಡೆಸಿದವು. ಎಣ್ಣೆದೀಪದ ಹಸಿರು ಬೆಳಕಲ್ಲಿ ಕೂತು ಗದ್ದಕ್ಕೆ ಕೈಹಚ್ಚಿ ಆಲೋಚಿಸ ತೊಡಗಿದೆ. ಪಾಪ. ಆಕೆಯಲ್ಲಿ ಜನ ಬಡತನವನ್ನು ದೃಷ್ಟಿಸಿದರು. ಬಡತನಕ್ಕೆ ನೀರೆರೆದರು, ಗೊಬ್ಬರ ಹಾಕಿದರು, ಮಣ್ಣಲ್ಲಿ ಕೊಳೆತು ಹೋಗೆಂದು ಆಶಿಸಿದವರು ಜನ. ಜೀವನವನ್ನು ಗಾಢವಾಗಿ ಅನುಭವಿಸುವ ಜನ ಆಕೆ ಬದುಕಲು ಯಾಕೆ ಅನುವು ಮಾಡಿಕೊಡಲಿಲ್ಲ. ಆಕೆ ಸಾಯುವುದನ್ನೇ ಅವರು ಯೋಚಿಸಿದ್ದಿರಬೇಕು ಆಕೆ ಸತ್ತು ಅವರಿಗೆ ನೆಮ್ಮದಿ ಕಲ್ಪಿಸಿದಳು ಪ್ರಸ್ತುತ ಸಮಾಜದಲ್ಲಿ ಮನುಷ್ಯನನ್ನು ಮನುಷ್ಯನೆಂದು ಗುರುತಿಸದ ಅವರೆಲ್ಲ ದೆವ್ವ ಪಿಶಾಚಿಗಳೇ ಸರಿ. ನನ್ನಲ್ಲಿ ಒಂದೇ ಸಮನೆ ಬುದುಬುದುಮುತ್ತಿರುವ ಆಲೋಚನೆಗಳಂತೆ ಹೊರಗಡೆ ಮಂಜು ಒಂದೇ ಸಮನೆ ಸುರಿಯುತ್ತದೆ. ಅತಿಯಾಗಿ ಆಲೋಚಿಸುವುದರ ಪರಿಣಾಮವಾಗಿ ಮೈಎಲ್ಲ ಜಡವಾಗುತ್ತಿರುವುದರ ಅನುಭವ.

ಆಕೆಯ ಬದುಕಿನ ಬಗ್ಗೆ ಕಿವಿಯಗಲಕ್ಕೆ ಕೇಳಿದ್ದ ಕೆಲವು ನೆನಪುಗಳು ಮೂಡಿದವು. ಕಣ್ಣೆನಗಲದಲ್ಲಿ ನಡೆದಿದ್ದ ಕೆಲವು ಘಟನೆಗಳು ನೆನಪಿಗೆ ಬಂದವು.

ಅಸಲು ಆಕೆಯ ಸ್ವಾಸ್ಥಿಗ್ರಾಮ ಲೂಜೆನ್ ಅಲ್ಲ. ಆ ಒಂದು ಚಳಿಗಾಲದ ಸಮಯದಲ್ಲಿ ಕೆಲಸದಾಳುವನ್ನು ಬದಲಿಸಬೇಕೆಂದು ಮಾಮ ಯೋಚಿಸುತ್ತಿದ್ದಾಗ 'ವುಯ್' ಎಂಬ

ಹೆಸರಿನ ಬ್ರೋಕರ್ ಹೆಂಗಸು ಆಕೆಯನ್ನು ಕರೆದುಕೊಂಡು ಬಂದು ಪರಿಚಯಿಸಿದ್ದು ನೆನಪಿದೆ. ಆಕೆಯ ತನ್ನ ತಲೆಯ ಜಿಡ್ಡುಗಟ್ಟಿದ್ದ ಕೂದಲನ್ನು ಬಟ್ಟೆ ತುಂಡಿನಿಂದ ತುರುಗಟ್ಟಿದ್ದು ನನ್ನ ಕಣ್ಣುಗಳಲ್ಲಿ ಚಿತ್ರವಾಗಿ ನಿಂತಿದೆ. ಕಪ್ಪುಬಣ್ಣದ ಲಂಗ, ಮೇಲೊಂದು ನೀಲಿಬಣ್ಣದ ಜಾಕೆಟ್ ಧರಿಸಿದ್ದ ಆಕೆಯ ವಯಸ್ಸು ನಾನು ನೋಡಿದ್ದಾಗ ಸುಮಾರು ಇಪ್ಪತ್ತಾರು ವರ್ಷ ಇದ್ದೀತು. ಬೆಳ್ಳಗಿನ ಮುಖದಲ್ಲಿ ಗುಲಾಬಿ ವರ್ಣದ ಪುಟ್ಟಕಣ್ಣುಗಳ ಆಕೆಯನ್ನು ಜಿಯಾಂಗ್‌ಲಿನ್ ನ ಹೆಂಡತಿಯೆಂದು ಪರಿಚಯಿಸಿದಳು. ಲಿನ್ ರವರ ಮಗಳ ಮನೆ ಪಕ್ಕದಲ್ಲಿ ಆಕೆಯ ವಾಸಸ್ಥಾನವಿರುವುದೆಂದು ಆಕೆ ಹೇಳಿದಳು. ಗಂಡನ ಅಗಲಿಕೆಯ ನಂತರ ಆಕೆ ಅವರಿವರ ಮನೆಯಲ್ಲಿ ಕೆಲಸ ಮಾಡುತ್ತ ಹೊಟ್ಟೆ ಹೊರೆದುಕೊಳ್ಳುತ್ತಿರುವುದಾಗಿಯೂ 'ಪ್ರಯ್' ಪರಿಚಯಿಸಿದಳು. ಮಾವ ಕಣ್ಣು ಚಿಕ್ಕದು ಮಾಡಿಕೊಂಡನು. ಆಕೆ ವಿಧವೆಯಾಗಿರುವುದರಿಂದ ಮಾವ ಆಕೆಯೊಂದಿಗೆ ವೈಹಿಕ ಸಂಬಂಧ ಬೆಳೆಸಲಾರನೆಂದು ಅತ್ತೆಗೆ ಅರ್ಥವಾಗಿ ಹೋಯಿತು. ಆಕೆಯ ಸೌಜನ್ಯಪೂರ್ಣ ನಡೆನುಡಿ ಎಲ್ಲರಿಗೂ ಇಷ್ಟವಾಯಿತು. ಬಲಿಷ್ಟವಾದ ಕಾಲು ಕೈಗಳು ಆಕೆಗಿದ್ದುದರಿಂದ ಒಳ್ಳೆ ಕೆಲಸದಾಳು ಸಿಕ್ಕಿತೆಂದು ಎಲ್ಲರೂ ಹಿಗ್ಗಿದರು. ಚೌಕಾಸಿ ಮಾಡದೆ ಮಾವ ಆಕೆಯನ್ನು ಕೆಲಸಕ್ಕಿಟ್ಟುಕೊಂಡನು. ವಿಶ್ರಾಂತಿ ಎಂಬುದು ತನ್ನ ಪಾಲಿಗೆ ಯಾತನಾಮಯ ಎಂದುಕೊಂಡಿರುವ ರೀತಿಯಲ್ಲಿ ಆಕೆ ಬೆಳಗಿನಿಂದ ರಾತ್ರಿಯವರೆಗೆ ಒಂದೇ ಸಮನೆ ಕೆಲಸ ಮಾಡುತ್ತಿದ್ದುದು ನನಗಿನ್ನೂ ಸ್ಪಷ್ಟವಾಗಿ ನೆನಪಿದೆ. ಆದ್ದರಿಂದಾಗಿ ಆಕೆಗೆ ಪ್ರತಿ ತಿಂಗಳು ಐನೂರು ಕೊಡುವುದಾಗಿ ನಿರ್ಧರಿಸಿದ್ದರು.

ಸರ್ವೆಸಾಮಾನ್ಯವಾಗಿ ಆಕೆಯನ್ನು ಜಿಯಾಂಗ್‌ಲಿನ್ ನ ಹೆಂಡತಿ ಎಂದು ಕರೆಯುತ್ತಿದ್ದರೆ ವಿನಃ ಆಕೆಯ ನಿಜವಾದ ಹೆಸರ ಬಗ್ಗೆ ಊರಿನ ಯಾರೂ ಅಷ್ಟಾಗಿ ನಿಗಾ ವಹಿಸಲಿಲ್ಲ. ಆಕೆ ಯಾರೊಂದಿಗೂ ಹೆಚ್ಚಾಗಿ ಮಾತಾಡುತ್ತಿರಲಿಲ್ಲ. ಯಾರಾದರೂ ಏನಾದರೂ ಕೇಳಿದಾಗ ಆಕೆ ಸಂಕ್ಷಿಪ್ತವಾಗಿ ಉತ್ತರಿಸುತ್ತಿದ್ದಳು. ಆ ಹನ್ನೆರಡು ದಿನಗಳ ನಂತರ ಆಕೆಗೊಬ್ಬ ಗಯ್ಯಾಳಿ ಅತ್ತೆ; ಕಟ್ಟಿಕಡಿಯುವ ಒಬ್ಬ ಹತ್ತುವರ್ಷ ವಯಸ್ಸಿನ ಮೈದುನ ಇರುವುದಾಗಿ ತಿಳಿಯಿತು. ಆಕೆಯ ಗಂಡ ಕೂಡ ಕಟ್ಟಿ ಕಡಿಯುವನೇ ಆಗಿದ್ದನಂತೆ. ಆತ ವಯಸ್ಸಿನಲ್ಲಿ ಆಕೆಗಿಂತ ಹತ್ತು ವರ್ಷ ಚಿಕ್ಕವನಿದ್ದನಂತೆ. ಹಿಂದುಳಿದ ಜಿಲ್ಲೆಗಳಲ್ಲಿ ಯುವತಿಯೊಬ್ಬಳನ್ನು ಹತ್ತು ಹನ್ನೊಂದು ವರ್ಷ ವಯಸ್ಸಿನ ಹುಡುಗನಿಗೆ ಕೊಟ್ಟು ಮದುವೆ ಮಾಡುವುದು ಸರ್ವೇ ಸಾಧಾರಣವಾದ ಸಂಗತಿ. ಹೆಂಡತಿಯ ಶ್ರಮವನ್ನೂ ಶಕ್ತಿಯನ್ನೂ ಗಂಡನ ಕಡೆಯವರೆಲ್ಲ ದೋಚಿ ಬದುಕುತ್ತಿರುವವರು. ಇಂಥ ಎಷ್ಟೋ ವಿವರಗಳನ್ನು ಆಕೆಯ ಬಾಯಿಯಿಂದ ಕೇಳಿ ತಿಳಿದರು ಆ ಊರಿನ ಪ್ರಜೆಗಳು.

ದಿನಗಳು ಒಂದೊಂದಾಗಿ ಭೂತಕಾಲ ಸೇರಿಕೊಳ್ಳುತ್ತಿವೆ. ಆಕೆ ಎಂದಿನಂತೆ ಕಷ್ಟಪಟ್ಟು ಕೆಲಸ ಮಾಡುತ್ತಿದ್ದಳು. ತಟ್ಟೆಗೆ ಏನು ಹಾಕಿದ್ರೂ ಸರಿಯೇ ಆಕೆ ಮಾರು

ನುಡಿಯದೆ ತಿನ್ನುತ್ತಿದ್ದಳು. ಎಂದೂ ಆಕೆ ಸುಮ್ಮನೆ ಕುಳಿತು ಕೊಳ್ಳುತ್ತಲೇ ಇರುತ್ತಿರಲಿಲ್ಲ. ಊ ಮನೆಯಲ್ಲಿ ಕೆಲಸದ ಹೆಂಗಸು ಗಂಡಸಿಗಿಂತ ಹೆಚ್ಚು ಕೆಲಸ ಮಾಡಬಲ್ಲಳು ಎಂದು ಎಲ್ಲರೂ ಮಾತಾಡಿಕೊಳ್ಳುತ್ತಿದ್ದರು. ಆ ಹೊಸವರ್ಷದ ಹಬ್ಬಕ್ಕೆ ಕೋಳಿಗಳನ್ನೂ; ಬಾತುಗಳನ್ನೂ ಅಚ್ಚುಕಟ್ಟಾಗಿ ಕೊಯ್ದು ಮಾಂಸವನ್ನು ಕುದಿಯುವ ನೀರಿನಲ್ಲಿ ಶುಭ್ರವಾಗಿ ತೊಳೆದು ದೇವತೆಯ ನೈವೇದ್ಯಕ್ಕೆಂದು ಬೇಯಿಸಿದಳು. ಆಕೆಯಿಂದಾಗಿ ಆ ಹಬ್ಬದ ಗಜಿಬಿಜಿ ದಿನದಂದು ಅಡುಗೆಗೆಂದು ಮತ್ತೊಬ್ಬ ಆಳನ್ನು ನೇಮಿಸಿ ಕೊಳ್ಳುವುದು ತಪ್ಪಿಹೋಯಿತು. ಕ್ರಮ ಕ್ರಮವಾಗಿ ಆಕೆಯ ಮುಖದಲ್ಲಿ ಮುಗುಳ್ನಗೆಯು ಪ್ರವೇಶವಾಯಿತು. ಮುಖ ಮಾಂಸದಿಂದ ತುಂಬಿಕೊಂಡಿತಲ್ಲದೆ ಬೆಳ್ಳಗೆ ಕಂಗೊಳಿಸತೊಡಗಿತು.

ಹೊಸ ವರ್ಷದ ಹಬ್ಬದ ನಂತರ ಆಕೆ ನದಿಯಿಂದ ಅಕ್ಕಿ ತೊಳೆದುಕೊಂಡು ಬಂದುದಲ್ಲದೆ ತಾನು ನದಿಯ ಬಳಿ ಒಬ್ಬ ಮನುಷ್ಯನನ್ನು ನೋಡಿದುದಾಗಿ ಹೇಳಿದಳು. ಆತ ತನ್ನವರ ಪೈಕಿ ಒಬ್ಬನಾಗಿರುತ್ತಾನೆಂದು ಹೇಳಿದಳು, ಆತ ತನ್ನನ್ನು ಮಾತಾಡಿಸಲೆಂದೇ ಅಲ್ಲಿಗೆ ಬಂದಿದ್ದಿರಬಹುದೆಂದು ಹೇಳಿದ ಆಕೆ, ಅತ್ತೆ ಭಯದಿಂದ ಕೇಳಿದ ಯಾವ ಪ್ರಶ್ನೆಗೂ ಉತ್ತರಿಸಲಿಲ್ಲ.

ಇದನ್ನು ಕೇಳಿಸಿಕೊಂಡು ಕೆಂಡವಾದ ಮಾವ "ಇದು ಒಳ್ಳೆ ಕೆಲಸವಲ್ಲ, ಈಕೆ ಮನೆ ಮಠ ಬಿಟ್ಟು ಓಡಿ ಬಂದಿರೋಳಾಗಿರಬೇಕು" ಅಂದ.

ಕೆಲವೇ ಸಮಯದ ನಂತರ ಈ ಊಹೆ ನಿಜವೆಂದು ತಿಳಿಯಿತು.

ಕೇವಲ ಹದಿನೈದು ದಿನಗಳಲ್ಲಿ ಎಲ್ಲರೂ ಈ ವಿಷಯವನ್ನು ಮರೆತುಬಿಟ್ಟರು.

ಒಂದು ದಿನ ಮಧ್ಯಾಹ್ನ ಬ್ರೋಕರ್ ವುಯ್ ಹೆಂಗಸೊಬ್ಬಳೊಂದಿಗೆ ಬಂದು ಈಕೆ ಕೆಲಸದಾಕೆಯ ಅತ್ತೆ ಎಂದು ಪರಿಚಯಿಸಿದಳು. ಹಳ್ಳಿಯ ಹೆಂಗಸಿನಂತೆ ಕಂಡುಬಂದ ಆಕೆ ತಿಂದುಂಡು ದಷ್ಟವಾಗಿದ್ದಳು. ಉಭಯ ಕುಶಲ ಪ್ರಶ್ನೆಗಳ ವಿನಿಮಯದ ನಂತರ ಆಕೆ ಹೇಳಿದಳು–ನಿಮ್ಮ ಮನೆಯಲ್ಲಿ ಕೆಲಸ ಮಾಡ್ತಿರೋ ನನ್ನ ಸೊಸೆಯನ್ನು ಕರೆದುಕೊಂಡು ಹೋಗಲು ಬಂದಿರುವೆನು ಅಂತ. ಈ ವಸಂತ ಋತುವು ಪ್ರಾರಂಭವಾಗುತ್ತಿರುವ ಸಮಯದಲ್ಲಿ ಮನೆಯಲ್ಲಿ ತುಂಬ ಕೆಲಸ ಬೊಗಸೆಗಳಿವೆ ಎಂದು ಹೇಳಿದಳು. ಚಿಕ್ಕ ಚಿಕ್ಕ ಹುಡುಗರುಪ್ಪಡಿ ಮತ್ತು ಕೆಲವು ಹಣ್ಣು ಹಣ್ಣು ಮುದುಕರು ವಿನಃ ಮನೆಯಲ್ಲಿ ಮತ್ತಾರೂ ಇಲ್ಲವೆಂದು ಹೇಳಿದಳಲ್ಲದೆ ಈ ರೀತಿ ತೊಂದರೆ ಕೊಡುತ್ತಿರುವ ತನ್ನನ್ನು ಕ್ಷಮಿಸಿರೆಂದೂ ಹೇಳಿದಳು.

ಆಕೆಯ ಅತ್ತೆಯವರೇ ಖುದ್ದ ಕರೆದೊಯ್ಯಲು ಬಂದಿರುವರೆಂದಮೇಲೆ ಆಕೆಯನ್ನು ಉಳಿಸಿಕೊಳ್ಳಲು ನಾವು ಎಷ್ಟರವರು ಎಂದು ಹೇಳಿದರು ಮಾವ. ಲೆಕ್ಕ ಹಾಕಲಾಗಿ

ಕೆಲಸವಾಕೆಗೆ ಒಟ್ಟು ಬರಬೇಕಾದದ್ದು ಹದಿನೈದು ನೂರಾ ಐವತ್ತು ಎಂದು ತಿಳಿಯಿತು. ಆಕೆ ತನ್ನ ಸ್ವಂತ ಖರ್ಚಿಗೇ ಅಂತ ಒಂದು ದಮ್ಮಡಿ ಖರ್ಚು ಮಾಡಿದ್ದು ಕಾಣೆನು. ಅತ್ತೆ ಹಣವನ್ನು ಆಕೆಯ ಕೈಗೆ ಒಪ್ಪಿಸಿದಳು. ಆಕೆ ಅತ್ತೆ ಮಾವರಿಗೆ ಧನ್ಯವಾದಗಳನ್ನು ಹೇಳಿದಳು,

ಅಕ್ಕಿ ತೊಳೆದುಕೊಂಡು ಬರಲು ಷಿಯಾಂಗ್‌ಲಿನ್ ಹೆಂಡತಿ ಇನ್ನೂ ಹೊರಡಲಿಲ್ಲವಲ್ಲ ಎಂದು ಅತ್ತೆಗೆ ಆಶ್ಚರ್ಯ. ಪ್ರಾಯಶಃ ಆಕೆಗೆ ಹಸಿವೆಯಾಗಿರಬೇಕು, ಆದಕ್ಕೆ ಅಡುಗೆ ಮನೆ ಕಡೆಗೆ ಆಕೆಯ ಗಮನ ಹೊರಳಿತು.

ಅಕ್ಕಿಯ ಪುಟ್ಟಿಗಾಗಿ ಎಲ್ಲರ ಹುಡುಕಾಟ ಪ್ರಾರಂಭವಾಯಿತು. ಅತ್ತೆ ಅಡುಗೆಮನೆ, ಮೊಗಸಾಲೆ, ಮಲಗುವ ಕೋಣೆ ಎಲ್ಲ ಹುಡುಕಿದಳು. ಆದರೂ ಆಕೆಯ ಸುಳಿವು ಸಿಕ್ಕ ಲಿಲ್ಲ. ಆಕೆಗಾಗಿ ನದಿಯ ಬಳಿ ಹುಡುಕಲೆಂದು ಮಾವ ಹೋದ. ತೀರದಲ್ಲಿ ಅಕ್ಕಿ, ಕಾಯಿಪಲ್ಲೆ ಎಲ್ಲ ಅಲ್ಲಿ ಕಂಡು ಬಂದವು. ಅಲ್ಲಿಯ ಜನರ ಹೇಳಿಕೆಯ ಪ್ರಕಾರ ಬಿಳಿ ಬಟ್ಟೆಯ ಗುಡಾರದ ದೋಣಿಯೊಂದು ಬಂದಿತ್ತಂತೆ, ಆದರೆ ಅದರೊಳಗೆ ಇದ್ದವರ ಬಗ್ಗೆ ಅಲ್ಲಿಯ ಯಾರಿಗೂ ಮಾಹಿತಿ ಇರಲಿಲ್ಲ. ಒಂದು ರೀತಿ ಹೇಳಬೇಕೆಂದರೆ ಅಲ್ಲಿಯ ಬಹಳಷ್ಟು ಮಂದಿಗೆ ದೋಣಿಯ ಬಗ್ಗೆ ಗಮನವಿರಲೇ ಇರಲಿಲ್ಲ. ದೋಣಿಯಿಂದ ಬಂದ ಒಂದಿಬ್ಬರು ಅಕ್ಕಿ ತೊಳೆಯಲೆಂದು ಬಂದಿದ್ದ ಷಿಯಾಲಿಂಗ್ ಲಿನ್ ಹೆಂಡತಿ ಯನ್ನು ಗುಡಾರಕ್ಕೆ ಎಳೆದೊಯ್ದರೆಂದು ಪ್ರತ್ಯಕ್ಷದರ್ಶಿಯೊಬ್ಬ ಹೇಳಿದನು. ಆಕೆ ಕಿರುಚಿದ್ದನ್ನು ಅತ್ತದ್ದನ್ನು ತಾನು ಸ್ಪಷ್ಟವಾಗಿ ಕೇಳಿಸಿಕೊಂಡಿದ್ದಾಗಿ ಮತ್ತೊಬ್ಬ ಹೇಳಿದನು. ನಂತರ ನಿಶ್ಶಬ್ದ ಆವರಿಸಿತಂತೆ. ಆಮೇಲೆ ದೋಣಿಯಿಂದ ಹೆಂಗಸರಿಬ್ಬರು ಹೊರಗೆ ಬಂದರು. ಒಬ್ಬಾಕೆ ಹೊಸಬಳು, ಮತ್ತೊಬ್ಬಾಕೆ ವುಯ್ ಎಂಬ ಮುದಿ ಹೆಂಗಸು. ಕೆಲವರು ದೋಣಿಯಲ್ಲಿಣುಕಿ ನೋಡಿದಾಗ ಅವರಿಗೇನು ಕಾಣಿಸಲಿಲ್ಲವಂತೆ, ಬಹುಶಃ ಆಕೆಯನ್ನು ಅಲ್ಲಿ ಎಲ್ಲೋ ಬಿಗಿಯಾಗಿ ಕಟ್ಟಿದ್ದಿರಬಹುದೆಂದು ಕೆಲವರು ತರ್ಕಿಸಿದರು.

"ಇದು ವಿತ್ತಷ್ಟು ಅವಮಾನಕರ ವಿಷಯ!..." ಅಂದ ಮಾವ.

ಅವತ್ತು ಮಧ್ಯಾಹ್ನದ ಅಡುಗೆಯನ್ನು ಆತ್ತೆಯೇ ಮಾಡಿದಳು. ಊಟದ ನಂತರ 'ವುಯ್' ತಿರುಗಿ ಬಂದಳು.

'ಎಂಥ ಅಪಮಾನ' ಮಾವ ಸಿಟ್ಟಿನಿಂದ ಕಂಪಿಸಿದ.

"ಏನೆಂದು ಕೊಂಡಿರುವಿ ? ಮತ್ತೆ ವಾಪಾಸು ಬರ್ಲಿಕ್ಕೆ ಎಷ್ಟು ಧೈರ್ಯ" ಎಂದು ಒಂದೇ ಸಮನೆ ಬಯ್ಯತೊಡಗಿದಳು ಅತ್ತೆ.

"ನೀನೇ ಆಕೆಯನ್ನು ಇಲ್ಲಿ ಕೆಲಸಕ್ಕೆ ಸೇರಿಸಿ ಮತ್ತೆ ಆಕೆಯನ್ನು ಅಪಹರಿಸಲಿಕ್ಕೆ ಸಹ ಕರಿಸಿದಿಯಾ! ನೋಡಿದ ನಾಲ್ಕು ಮಂದಿ ನಿನ್ನ ಬಗ್ಗೆ ಏನು ಮಾತಾಡಿಕೊಳ್ತಾರೆ: ನಮ್ಮ ಮುಖಕ್ಕೆ ಮಸಿ ಬಳೀಬೇಕಂತ ಮಾಡಿದ್ದಿಯಾ ?"

"ಅಯ್ಯೋ ನೀವು ನನ್ನನ್ನ ತಪ್ಪು ತಿಳಿದುಕೊಂಡಿರುವಿರಿ. ಆಕೆಯೇ ಕೆಲಸಕ್ಕೆ ಸೇರಿಸೂ ಅಂತ ದುಂಬಾಲು ಬಿದ್ದಿದ್ದಳು, ಆಕೆ ತನ್ನತ್ತೆಗೆ ಹೇಳದೆ ಬಂದಿರುವುದು ನನಗಾದರೂ ಏನು ಗೊತ್ತು ? ಮೊದಲೇ ನಾನು ಮುದುಕಿ. ಬುದ್ಧಿ ಇಲ್ಲದ ಕೆಲಸ ಮಾಡಿದೀನಿ. ನನ್ನಿಂದ ನಿಮಗೆ ತುಂಬ ತೊಂದರೆಯಾಗಿದೆ. ನೀವು ಒಳ್ಳೆಯವರಾಗಿರುವುದರಿಂದ ಸರಿ ಹೋಯ್ತು. ಈ ಸಾರಿ ಪೂರ್ವಾಪರ ವಿಚಾರಿಸಿ ಒಳ್ಳೆ ಕೆಲಸದ ಹೆಂಗಸನ್ನು ಕರ್ಕೊಂಡು ಬಂದು ನನ್ನ ತಪ್ಪು ತಿದ್ದಿಕೊಳ್ತೀನಿ"

"ಇನ್ನಾದರೂ......" ಅಂದ ಮಾವ.

ನಂತರ ಯಾರೊಬ್ಬರೂ ಷಿಯಾಂಗ್‌ಲಿನ್ ಹೆಂಡತಿ ಬಗ್ಗೆ ಹಚ್ಚಿಕೊಳ್ಳು ವುದನ್ನು ಬಿಟ್ಟರು, ಕ್ರಮೇಣ ಆಕೆಯ ನೆನಪು ಮಾಸಿ ಹೋಯಿತು.

ಷಿಯಾಂಗ್ ಲಿನ್ ಆಗಾಗ್ಗೆ ನೆನಪಿಗೆ ಬರುತ್ತಿದ್ದುದು ಅತ್ತೆಗೆ ಮಾತ್ರ. ಯಾಕಂದರೆ ಆನಂತರ ಬಂದ ಕೆಲಸದವರ ಕೈ ಬಾಯಿ ಶುದ್ಧ ಇರುತ್ತಿರಲಿಲ್ಲ. ಕೆಲಸದ ಮೇಲೆ ಅಶ್ರದ್ಧೆ ತೋರಿಸುವುದು: ಅನ್ನ ಕದಿಯುವುದು ಇಂಥದ್ದು ಮಾಡುತ್ತಿದ್ದರು. ಯಾರೊಬ್ಬರೂ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಲೇ ಇರಲಿಲ್ಲ.

"ಈಗ ಆಕೆ ಹೇಗಿದ್ದಾಳೋ ?" ಅಂತ ಅತ್ತೆ ಅಂದುಕೊಳ್ಳುತ್ತಿದ್ದಳು. ಆಕೆ ತನ್ನ ಬೆನ್ನ ಹಿಂದೆಯೇ ಇರುವಂತೆ ಒಮ್ಮೊಮ್ಮೆ ಅತ್ತೆ ಭಾವಿಸುತ್ತಿದ್ದಳು. ಹೊಸ ವರ್ಷದ ಹಬ್ಬದ ಹೊತ್ತಿಗೆ ಆಕೆಯ ಆಶೆಯನ್ನು ಅತ್ತೆ ಬಿಟ್ಟು ಬಿಟ್ಟಳು. ಮೊದಲ ತಿಂಗಳ ಕೊನೆವಾರದಲ್ಲಿ ವುಯ್ ಮತ್ತೆ ಬಂದಳು. ನಿಮ್ಮೆಲ್ಲರ ದರ್ಶನ ತೆಗೆದು ಕೊಂಡು; ಶುಭಾಕಾಂಕ್ಷೆಗಳನ್ನು ಹೇಳಲೆಂದು ಬಂದುದಾಗಿ ಹೇಳಿದಳು ವುಯ್. ಕೆಲವು ದಿನಗಳ ಹಿಂದೆಯಷ್ಟೆ ವುಯ್ ತನ್ನಮ್ಮನ ಮನೆಯಲ್ಲಿ ಸ್ವಲ್ಪಕಾಲ ಇದ್ದು ಬಂದುದಾಗಿ ಹೇಳಿದಳು. ಆದಕ್ಕೆ ತಡ ಆಯ್ತಂತೆ. ಹೀಗೆ ಸಾಗಿದ್ದ ಅವರ ಸಂಭಾಷಣೆಯ ಮಧ್ಯೆ ಅಕಸ್ಮಿಕವೆಂಬಂತೆ ಷಿಯಾಂಗ್ ಲಿನ್ ಹೆಂಡತಿಯ ಪ್ರಸ್ತಾಪ ಬಂದಿತು,

"ಆಕೆಯ ವಿಷಯೋ !... ಆಕೆ ನಿಜಕ್ಕೂ ಅದೃಷ್ಟದ ಹೆಂಗಸು. ಆಕೆಯ ಅತ್ತೆ ಇಲ್ಲಿಗೆ ಬರುವ ಮೊದಲೇ 'ಹೋ' ಗ್ರಾಮದಲ್ಲಿರುವ 'ಹೋ' ಕುಟುಂಬದ ಆರನೆಯ ಮಗನಿಗೆ ತನ್ನ ಸೊಸೆಯನ್ನು ಕೊಟ್ಟು ಮದುವೆ ಮಾಡುವುದಾಗಿ ಮಾತು ಕೊಟ್ಟಿದ್ದಳಂತೆ. ಸೊಸೆಯು ಬರುತ್ತಲೇ ಆಕೆಯನ್ನು ಮದುಮಗಳ ಕುರ್ಚಿ

ಯಲ್ಲಿ ಕುಂಡ್ರಿಸಿ 'ಹೋ' ಗ್ರಾಮಕ್ಕೆ ಕಳಿಸಿ ಬಿಟ್ಟಳು"......ವುಯ್ ತುಂಬ ಉತ್ಸಾಹ ದಿಂದ ಹೇಳುತ್ತಿದ್ದಳು.

"ಒಳ್ಳೆಯವಳು...ಒಳ್ಳೆ ಅತ್ತೆಯಂತಿರುವಳು" ಎಂದು ಅತ್ತೆ ತುಂಬ ಆಶ್ಚರ್ಯದಿಂದ ನುಡಿದಳು. "ಆಕೆ ನಿಮ್ಮಷ್ಟು ಒಳ್ಳೆಯ ಹೆಂಗಸಲ್ಲ ಬಿಡಿ. ನಿಮಗಿರೋ ದೊಡ್ಡ ಮನಸ್ಸು ಆಕೆಗಿಲ್ಲ. ಗುಡ್ಡ ಕಣಿವೆಯಲ್ಲಿ ವಾಸಿಸುತ್ತಿರೋ ನಮ್ಮಂಥೋರಿಗೆ ಇದೇನು ದೊಡ್ಡ ವಿಷಯವಲ್ಲ. ಆಕೆಗೊಬ್ಬ ಚಿಕ್ಕ ವಯಸ್ಸಿನ ಮೈದುನನೊಬ್ಬ ಇರು ವನು. ಆತನಿಗಿನ್ನೂ ಮದುವೆಯಾಗಿಲ್ಲ. ಷಿಯಾಂಗ್‌ಲಿನ್‌ಳ ಮದುವೆ ಮಾಡದಿದ್ದ ರೆಲ್ಲಿ ಆತನ ಮದುವೆಗೆ ದುಡ್ಡು ಬರುತ್ತಿತ್ತು." (ಚೈನಾದ ಫ್ಯೂಡಲ್ ವ್ಯವಸ್ಥೆಯ ರೈತರ ಕುಟುಂಬಗಳಲ್ಲಿ ಸ್ತ್ರೀಯ ಶ್ರಮಶಕ್ತಿಗೆ ಬೆಲೆ ಹೆಚ್ಚು. ಆದ್ದರಿಂದ ಗಂಡು ಕನ್ಯಾಶುಲ್ಕ ಕೊಡುವವರ ಮೂಲಕ ಹೆಣ್ಣನ್ನು ಕೊಂಡುಕೊಳ್ಳಬೇಕಿತ್ತು.) ಆಕೆ ನಿಜ ವಾಗಿಯೂ ಸಮರ್ಥ ಹೆಂಗಸೇ ಸರಿ, ತನ್ನೂರಿನವರಿಗೇ ಸೊಸೆ ಕೊಟ್ಟರೆ ದುಡ್ಡು ಅಷ್ಟೊಂದು ಬರುತ್ತಿರಲಿಲ್ಲ ಎಂದೇ ಆ ಮುದುಕಿ ಲೆಕ್ಕಹಾಕಿ 'ಹೋ' ಗ್ರಾಮದವ ರಿಗೆ ಕೊಟ್ಟು ಹಣ ಎಣಿಸಿಕೊಂಡಿತು. ಆ ಬೆಟ್ಟ ಪ್ರದೇಶವಲ್ಲಿ ಹೆಣ್ಣುಗಳ ಸಂಖ್ಯೆ ಕಡಿಮೆ ಇರುವುದರಿಂದ ಹಣ ಕೇಳಿದಷ್ಟು ಎಣಿಸುತ್ತಾರೆ ಬಿಡಿ. ಈ ಮದುವೆಯಿಂದ ಆ ಮುದುಕಿ ಎಣಿಸಿಕೊಂಡಿದ್ದೆಷ್ಟು ಗೊತ್ತಾ! ಐವತ್ತು ಸಾವಿರ. ಅದೇ ಹಣದಲ್ಲಿ ಎರಡನೆ ಮಗನ ಮದುವೆ ಮುಗಿದು ಮೇಲೆ ಹತ್ತು ಸಾವಿರ ಉಳಿಯಿತು. ಆ ಮು ದುಕಿಯ ಬುದ್ಧಿವಂತಿಕೆ ಎಷ್ಟು ಅಂತ ನೀವೇ ಆಲೋಚಿಸಿರಿ".

'ಮದುವೆಯಾಗಲು ಷಿಯಾಂಗ್‌ಲಿನ್ ಹೆಂಡತಿ ಒಪ್ಪಿಕೊಂಡಳೇನು ?"

"ಒಪ್ಪುವುದು. ಒಪ್ಪಿಕೊಳ್ಳದೇ ಇರುವುದು ಅಸಲು ಪ್ರಶ್ನೆಯಲ್ಲ. ಯಾವ ಹೆಂಗ ಸಿಗೂ ಅಂತ ಸಂದರ್ಭದಲ್ಲಿ ಸುಮ್ಮನಿರುವುದಾಗುವುದಿಲ್ಲ ಬಿಡಿ. ಹಗ್ಗದಿಂದ ಕಾಲು ಕೈ ಕಟ್ಟಿ ವರನ ಮನೆಗೆ ಕರೆದೊಯ್ದು ಮದುವೆ ಮಂಟಪದಲ್ಲಿ ಕೂಡ್ರಿಸಿ, ಎಲ್ಲ ಶಾಸ್ತ್ರ ಮುಗಿದ ಮೇಲೆ ಆ ಮದುಮಕ್ಕಳನ್ನು ಕೋಣೆಯಲ್ಲಿ ತಳ್ಳಿ ಬೀಗ ಹಾಕಿಬಿಟ್ಟರು ನೋಡಿ. ಈ ದೌರ್ಜನ್ಯಕ್ಕೆ ಸೋತು ಬಿಟ್ಟಳು ಆಕೆ. ಆಕೆಗೆ ತನ್ನದೆಂಬುವ ವ್ಯಕ್ತಿತ್ವ ಇರುವುದರಿಂದಲೇ ಹಿಂಸೆಯನ್ನು ಪ್ರತಿಭಟಿಸಿದಳು. ನಿಜಕ್ಕೂ ಆಕೆ ದೊಡ್ಡ ಮನಸ್ಸಿನ ಹೆಂಗಸು. ಮೊದಲೇ ಗೌರವಾನ್ವಿತ ಕುಟುಂಬದಲ್ಲಿ ಹುಟ್ಟಿ ಬೆಳೆದಾಕೆ. ಈ ವಯಸ್ಸಿಗೆ ನಾನೂ ಎಷ್ಟು ಮಂದಿ ಹೆಂಗಸರನ್ನು ನೋಡಿಲ್ಲ. ಮತ್ತೆ ಮದುವೆ ಅಂದಾಗ ಕೆಲವು ವಿಧವೆಯರು ಅಳುತ್ತಾರೆ, ಕೆಲವರು ಆತ್ಮಹತ್ಯೆ ಮಾಡಿಕೊಳ್ತೀವಿ ಅಂತ ಬೆದರಿಕೆ ಹಾಕ್ತಾರೆ. ಮತ್ತೆ ಕೆಲವರು ಮೇಣದ ಬತ್ತಿಯನ್ನು ತುಂಡು ತುಂಡು ಮಾಡಿಬಿಡು ವರು. ಆದರೆ ಷಿಯಾಂಗ್‌ಲಿನ್ ಹೆಂಡತಿ ಹಾಗೆ ಪ್ರವರ್ತಿಸಲಿಲ್ಲವಂತೆ. ಆಕೆ ದಾರಿ ಯುದ್ದಕ್ಕೂ ಬಯ್ದುಳಂತೆ, ಅತ್ತಳಂತೆ, 'ಹೋ' ಗ್ರಾಮ ಸೇರುವ ಹೊತ್ತಿಗೆ ಆಕೆಯ

ಕಂಠ ಕೆಟ್ಟು ಬಿಟ್ಟಿತ್ತು, ಆಕೆಯ ಮೈದುನ ಮತ್ತಿಬ್ಬರು ಆಕೆಯನ್ನು ವಿವಾಹ ಮಂಟಪಕ್ಕೆ ಒಯ್ಯಲು ಪ್ರಯತ್ನಿಸಿ ವಿಫಲರಾದರು. ಅವರೆಲ್ಲ ಅತ್ತ ಇತ್ತ ನೋಡುತ್ತಿದ್ದಾಗ ಆಕೆ ಗೋಡೆಯೊಂದಕ್ಕೆ ತನ್ನ ತಲೆಯನ್ನು ಎರಡು ಭಾರಿ ಢೀ ಕೊಟ್ಟು ಕೊಂಡಳು. ಆಕೆಯ ಹಣೆಯಲ್ಲಿ ಎರಡು ಬುಗುಟೆಗಳು ಮೂಡಿ ರಕ್ತ ಹರಿಯಿತಂತೆ. ಎರಡು ಚಿಮುಟಿಗೆ ಬೂದಿ ತುರುಕಿದರೂ ರಕ್ತ ಸ್ರಾವ ನಿಲ್ಲಲಿಲ್ಲವಂತೆ. ಎರಡು ಕೋಳಿ ಪೊಟ್ಟೆ ಕಟ್ಟಿ ರಕ್ತ ಸ್ರಾವ ನಿಲ್ಲಿಸಲು ಪ್ರಯತ್ನಿಸಿ ವಿಫಲರಾದರು. ಎಲ್ಲರೂ ಕೂಡ ಆಕೆಯನ್ನು ಆ ಸ್ಥಿತಿಯಲ್ಲಿ ಮದುವೆ ಮಂಟಪದಲ್ಲಿ ಕೂಡ್ರಿಸಿದರಂತೆ. ಅಬ್ಬಾ! ಎಷ್ಟು ಭಯಂಕರವಾದ ದುರ್ಘಟನೆ ಇದು" ತಲೆ ತಗ್ಗಿಸಿ ಕೂತ ವುಯ್ ಮತ್ತೇನು ಹೇಳಲಾರದವಳಂತೆ ಕಂಡು ಬಂದಳು.

ನಂತರ ಏನಾಯ್ತು ? "ಅತ್ತೆ ಕೇಳಿದಳು."

"ನಂತರ ಆಕೆ ಓಡಿಹೋಗಲು ಇಷ್ಟಪಡಲಿಲ್ಲ ." ವುಯ್ ಕಣ್ಣುಗಳಿಂದ ದಿಟ್ಟಿಸಿ ಅಂದಳು.

"ಉಃ! ಆಮೇಲೆ !"

"ಮದುವೆ ಆದ ವರ್ಷಕ್ಕೆ ಗಂಡು ಮಗುವಿಗೆ ತಾಯಿಯಾದಳು ಈಗ ಆಕೆಯ ಮಗುವಿಗೆ ಎರಡು ವರ್ಷದ ವಯಸ್ಸಿರಬಹುದು. ನಾನು ಅಲ್ಲಿದ್ದಾಗ 'ಹೋ' ಗ್ರಾಮಕ್ಕೆ ಹೋಗಿ ಬರುತ್ತಿದ್ದವರು ಹೇಳುತ್ತಿದ್ದರು. ಅವರು ತಿಂದುಂಡು ಚೆನ್ನಾಗಿರುವುದಾಗಿ ಹೇಳುತ್ತಿದ್ದರು. ಆಕೆಗೆ ಅತ್ತೆ ಇಲ್ಲವಂತೆ, ಅವರಿಗೆ ಊಟ ತಿಂಡಿಗೆ ಬರ ಇಲ್ಲವಂತೆ. ಇಷ್ಟಕ್ಕೂ ಸ್ವಂತಮನೆ. ಆಕೆ ನಿಜಕ್ಕೂ ಅದೃಷ್ಟವಂತೆ".

ನಂತರ ನಮ್ಮ ಮಾವ ಆಕೆಯ ಬಗ್ಗೆ ಮತ್ತಾವ ಪ್ರಶ್ನೆಯನ್ನು ಹಾಕಲಿಲ್ಲ. ಇದಾದ ಎರಡು ವರ್ಷಗಳ ನಂತರ ಶಿಶಿರಋತು ಕಾಲದ ಒಂದು ದಿನ ಆಕೆ ಮಾವನವರ ಮನೆಯ ಬಾಗಿಲಲ್ಲಿ ನಿಂತಳು. ಆಕೆಯ ಬಗಲಲ್ಲಿದ್ದ ಬುಟ್ಟಿಯನ್ನು ಗೂಡಿನಲ್ಲಿಟ್ಟಳು, ಆಕೆ ತನ್ನ ತಲೆಗೆ ಬಿಳಿ ರಿಬ್ಬನ್ ಕಟ್ಟಿದ್ದಳು. ಆಕೆಯ ಕಣ್ಣುಗಳಲ್ಲಿ ಕಾಂತಿ ಇರಲಿಲ್ಲ, ಕಪ್ಪು ಬಣ್ಣದ ಲಂಗ ಮತ್ತು ನೀಲಿ ಬಣ್ಣದ ಜಾಕೆಟ್ ಹಾಕಿಕೊಂಡಿದ್ದ ಆಕೆಯನ್ನು ಮತ್ತೊಮ್ಮೆ ವುಯ್ ಕರೆದುಕೊಂಡು ಬಂದಿದ್ದಳು. ಆಕೆಯ ಪರಿಸ್ಥಿತಿ ಚೆನ್ನಾಗಿಲ್ಲವೆಂದು ನೋಡಿದರೆ ತಿಳಿಯುತ್ತಿತ್ತು. ನಡೆದದ್ದನ್ನೆಲ್ಲ ವುಯ್ ಅತ್ತೆಗೆ ಹೇಳಿದಳು.

"ಈಕೆ ತುಂಬ ದುರದೃಷ್ಟವಂತೆ, ಈಕೆಯ ಗಂಡನ ದಷ್ಟಪುಷ್ಟ ದೇಹವನ್ನು ನೋಡಿದವರ್‍ಯಾರೂ ಆತ ಟೈಫಾಯಿಡ್ ಜ್ವರದಿಂದ ಸಾಯ್ತಾನಂತ ಅಂದ್ಕೊಳ್ಳಲು ಸಾಧ್ಯ

ರಲಿಲ್ಲ. ಜ್ವರ ಮೊದಮೊದಲು ಉಗ್ರವಾಗಿರಲಿಲ್ಲ. ಕರಿದ ಪದಾರ್ಥಗಳನ್ನು ಯಥೇ
ಚ್ಛವಾಗಿ ತಿಂದ ಪರಿಣಾಮವಾಗಿ ರೋಗ ಉಲ್ಬಣಿಸಿತು. ಅದೃಷ್ಟವಶಾತ್ ಈಕೆ
ಒಬ್ಬ ಮಗನಿದ್ದನು. ಕೂಲಿನಾಲಿ ಮಾಡುತ್ತ ಕಟ್ಟಿಗೆ ಕಡಿದು ಹೇಗೋ ಒಟ್ಟಿನಲ್ಲಿ
ದೂಡುತ್ತ ಬಂದಳು. ಅಷ್ಟರಲ್ಲಿ ಈಕೆಯ ಮಗನನ್ನು ತೋಳಗಳು ಒತ್ತೊಯ್ದವಂತೆ.
ವಸಂತ ಋತುವಿನ ಸಮಯದಲ್ಲಿ ತೋಳಗಳು ಊರೊಳಕ್ಕೆ ಬರುತ್ತಾವೆಂದು ಎಂಥ
ದ್ದರೂ ನಂಬುವುದಿಲ್ಲ. ಈಗ ಈಕೆ ತನ್ನನ್ನು ತಾನು ಕಾಪಾಡಿಕೊಳ್ಳಬೇಕಿದೆ. ಈಕೆ
ಯ ಮೈದುನ ಈಕೆಯ ಮನೆಯನ್ನು ಆಕ್ರಮಿಸಿಕೊಂಡು ಈಕೆಯನ್ನು ಬೀದಿಗೆ ತಳ್ಳಿ
ಬಿಟ್ಟಿದ್ದಾನೆ. ಆದ್ದರಿಂದ ಈಕೆಗೆ ನೀವೇ ದಿಕ್ಕು; ನೀವೂ ಕೈ ಬಿಟ್ರೆ ಈಕೆ ಕೆರೇನೋ
ಬಾವಿನೋ ನೋಡಿಕೊಳ್ಳಬೇಕಾಗ್ತದೆ. ಈಕೆಯನ್ನು ಮತ್ತೆ ಕರೆದೊಯ್ಯಲು ಯಾರೂ
ಬರಲಾರರು. ನಿಮಗೀಗ ಒಬ್ಬ ಕೆಲಸದಾಳು ಬೇಕಾಗಿರುವುದರಿಂದ ಈಕೆಯನ್ನು
ನಿಮ್ಮಲ್ಲಿಗೆ ಕರೆತಂದಿರುವೆನು. ಎಷ್ಟಾದರೂ ಹೊಸಬರಿಗಿಂತ ಹಳಬರೇ ಎಷ್ಟೋ ವಾಸಿ"

"ನಿಜವಾಗಿಯೂ ನನಗೆ ಬುದ್ಧಿ ಇಲ್ಲ. ನಿಜವಾಗಿಯೂ..." ಷಿಯಾಂಗ್‌ಲಿನ್ ಹೆಂಡತಿ
ಮುಖವನ್ನೆತ್ತಿ ನುಡಿದಳು. ಮಂಜು ಸುರಿಯುತ್ತಿರುವಾಗ ಕಾಡಲ್ಲಿ ಏನೂ ಸಿಕ್ಕದೆ
ತೋಳಗಳು ಊರೊಳಕ್ಕೆ ನುಗ್ಗುವವೆಂದು ನಂಬಿದ್ದ ನನಗೆ ಅವು ವಸಂತ ಋತುವಿ
ನಲ್ಲೂ ಊರಲ್ಲಿ ಬರುವವೆಂದು ನನಗೆ ತಿಳಿದುದು ಬೆಳಿಗ್ಗೆ ಬಾಗಿಲು ತೆಗೆದು ಬಟ್ಟಿ
ಯಲ್ಲಿ ಚೆಕ್ಕೋತಗಳನ್ನು ಹಾಕಿ ಕಾಯುತ್ತ ಕೂತಿರು ಎಂದು ಆ-ಮಾವೋಗೆ ಹೇಳಿದ್ದೆ.
ಹೇಳಿದ ಕೆಲಸವನ್ನು ಸರಿಯಾಗಿ ಮಾಡುತ್ತಿತ್ತು ನಮ್ಮ ಹುಡುಗ. ನಾಲ್ಕು ಕಟ್ಟಿಗೆ
ಹಿಡಿದುಕೊಂಡು ಅಕ್ಕಿ ತೊಳೆದುಕೊಂಡು ಬಂದು ನೋಡುತ್ತೇನೆ. ಎಲ್ಲೂ ನನ್ನ ಮಗ
ಕಾಣಲೇ ಇಲ್ಲ; ಕೇಕೆ ಹಾಕಿದೆ, ಕೂಗಿದೆ, ಉತ್ತರವಿಲ್ಲ. ಒಳ-ಹೊರಗೂ ಎಲ್ಲೂ ಆ
ಮಾವೋ ಇರಲಿಲ್ಲ, ಚೆಕ್ಕೋತಗಳು ಚೆಲ್ಲಾಪಿಲ್ಲಿ ಬಿದ್ದಿದ್ದವು. ಎಂದೂ ಅವನು ಹೀಗೆ
ಬೇಜವಾಬ್ದಾರಿಯಿಂದ ವರ್ತಿಸಿರಲಿಲ್ಲ. ನಾಲ್ಕೂ ದಿಕ್ಕುಗಳನ್ನು ಹುಚ್ಚಿಯಂತೆ ಹುಡು
ಕಿದರೂ ಪ್ರಯೋಜನವಾಗಲಿಲ್ಲ. ನಾವಿದ್ದ ಓಣಿಯ ಜನ ಕಾಡು ಗುಡ್ಡ ಕಣಿವೆಯಲ್ಲಿ
ಹುಡುಕಲು ಹೋಗಿದ್ದರು. ಮಧ್ಯಾಹ್ನದ ಸುಮಾರಿಗೆ ಪೊದೆಯೊಂದರಲ್ಲಿ ಅವರಿಗೆ
ಮಗನ ಬೂಟೊಂದು ಸಿಕ್ಕಿತು. ತೋಳಗಳೇ ಆ-ಮಾವೋನನ್ನು ಒಯ್ದಿರಬೇಕೆಂದು
ಅವರಿಗೆ ಅರ್ಥವಾಯಿತು. ಗುಹೆಯ ಬಳಿ ನನ್ನ ಮಗನ ಶವದ ಚೂರುಗಳು ನಂತರ
ಸಿಕ್ಕವು. ಅವನ ಒಂದು ಕೈ ಮಾತ್ರ ನಾನು ಕೊಟ್ಟಿದ್ದ ಬುಟ್ಟಿಯನ್ನು ಗಟ್ಟಿಯಾಗಿ
ಹಿಡಿದುಕೊಂಡಿತ್ತು" ವಾಕ್ಯ ಪೂರ್ಣಗೊಳಿಸುವ ಮೊದಲೇ ಆಕೆ ಅಳತೊಡಗಿದಳು.

ಆಕೆಯನ್ನು ಕೆಲಸಕ್ಕೆ ಸೇರಿಸಿಕೊಳ್ಳುವುದೋ ಬೇಡವೋ ಎಂದು ಅದುವರೆವಿಗೂ
ಯೋಚಿಸುತ್ತಿದ್ದ ನನ್ನ ಅತ್ತೆ ಆಕೆಯ ದಾರುಣ ಕಥೆ ಕೇಳಿದ ನಂತರ ತನ್ನೆರಡೂ
ಕಣ್ಣಲ್ಲೂ ನೀರು ತುಂಬಿಕೊಂಡಳು. ಸರ್ವೆಂಟ್‌ದ ಕ್ವಾರ್ಟರ್ಸ್‌ಗೆ ಆಕೆಯನ್ನು ಕರೆ

ನೊಯ್ಯುವಂತೆ ಹೇಳಿ ತಾನು ಒಳಗೆ ಹೋದಳು. ಹಗಲಿಂದ ಭಾರ ಕಳೆದುಕೊಂಡವಳಂತೆ 'ವುಯ್' ಉದ್ದನೆಯ ಉಸಿರು ಬಿಟ್ಟಳು, ಷಿಯಾಂಗ್‌ಲಿನ್ ಹೆಂಡತಿ ಮೊದಲಿಗಿಂತ ಈಗ ಹೆಚ್ಚು ಸಹಾನುಭೂತಿ ಗಳಿಸಿಕೊಂಡಿದ್ದಳು. ತನ್ನ ಸಾಮಾನುಗಳೊಂದಿಗೆ ಪರಿಚಿತ ಜಾಗದ ಕಡೆ ಸಲೀಸಾಗಿ ನಡೆದಳು. ಆಪತ್ತಿನಿಂದ ಇಡೀ 'ಲೂಜೆನ್' ಗ್ರಾಮಕ್ಕೆ ಆಕೆ ಪ್ರೀತಿಯ ಕೆಲಸದವಳಾದಳು. ಆಕೆಯ ಇಷ್ಟು ದೊಡ್ಡ ಕತೆ ಕೇಳಿದ ಮೇಲೂ ಎಲ್ಲರೂ ಆಕೆಯನ್ನು ಷಿಯಾಂಗ್‌ಲಿನ್ ಹೆಂಡತಿಯೆಂದೇ ಕರೆಯುತ್ತಿದ್ದರು. ಆಕೆಯಲ್ಲಿ ಅನೇಕ ಬದಲಾವಣೆಗಳಾಗಿದ್ದವು. ಮೊದಲಿಗಿಂತ ಚುರುಕಾಗಿ ಕೆಲಸ ಮಾಡಲು ಆಕೆಯಿಂದ ಸಾಧ್ಯವಾಗುತ್ತಿರಲಿಲ್ಲ. ಆಕೆ ದುಡಿಯಲು ಅಸಮರ್ಥಳೆಂದು ಮಾವಗೂ ಅತ್ತೆಗೂ ತಿಳಿದು ಹೋಯಿತು. ಆಕೆಯ ಮುಖದ ತುಂಬ ವಿಷಾದದ ಛಾಯೆ ತುಂಬಿಕೊಂಡಿರುತ್ತಿತ್ತು. ಆಕೆಯ ಮುಖದಲ್ಲಿದ್ದ ಮುಗುಳ್ನಗೆ ಎಂದೋ ಮಾಯವಾಗಿಬಿಟ್ಟಿತ್ತು. ಮಾವಗೂ ಅತ್ತೆಗೂ ಆಕೆಯ ಕೆಲಸ ಕಾರ್ಯದ ಬಗ್ಗೆ ತೃಪ್ತಿ ಇರಲಿಲ್ಲ. ಕೆಲಸದ ಜೀತದಾಳು ಸಿಗುವುದು ದುರ್ಲಭವಾಗಿದ್ದರಿಂದ ಆಕೆಯನ್ನು ಕೆಲಸದಿಂದ ಬಿಡಿಸುವುದು ಅವರಿಗೆ ಬೇಕಿರಲಿಲ್ಲ. ಷಿಯಾಂಗ್‌ಲಿನ್ ಹೆಂಡತಿ ಬಗ್ಗೆ ತುಂಬಾ ಹುಷಾರಿರುವಂತೆ ಮಾವ ಅತ್ತೆಗೆ ಎಚ್ಚರಿಸಿದ. ಅವರು ಆಕೆಗೆ ಚಿಕ್ಕ ಪುಟ್ಟ ಕೆಲಸಗಳನ್ನಷ್ಟೆ ಹೇಳುತ್ತಿದ್ದರೇ ವಿನಃ ಜವಾಬ್ದಾರಿಯ ಕೆಲಸಗಳನ್ನು ವಹಿಸುತ್ತಿರಲಿಲ್ಲ. ಹೊಸ ವರ್ಷದ ನೈವೇದ್ಯ ತಯಾರಿಸಲು ಆಕೆಗೆ ಅವರು ಹೇಳುತ್ತಿರಲಿಲ್ಲ. ಗಲೀಜಾಗಿರುವ ನೈವೇದ್ಯವನ್ನು ಹಿರಿಯರು ಮುಟ್ಟುವವರಾಗಿರಲಿಲ್ಲ. ಆದ್ದರಿಂದ ನೈವೇದ್ಯವನ್ನು ಸ್ವತಃ ತಾವೇ ತಯಾರಿಸುತ್ತಿದ್ದರು.

ಹಿರಿಯರಿಗೆ ನೈವೇದ್ಯ ಇಡುವುದೊಂದು ದೊಡ್ಡ ಹಬ್ಬ ನಮ್ಮ ಮಾವನ ಮನೆಯಲ್ಲಿ. ಮೊದಮೊದಲು ಷಿಯಾಂಗ್‌ಲಿನ್ ಹೆಂಡತಿಗೆ ಈ ಹಬ್ಬ ತುಂಬ ಅಪರಿಚಿತವಾಗಿತ್ತು. ಆದರೆ ಈಗ ಆಕೆಗೆ ಹಬ್ಬದ ಸಮಯದಂದು ಮಾಡಲಿಕ್ಕೆ ಕೆಲಸಗಳೇ ಇರುತ್ತಿರಲಿಲ್ಲ. ಹಾಲಿನ ಮಧ್ಯ ಊಟದ ವ್ಯವಸ್ಥೆ ಹೇಗೆ ಮಾಡಬೇಕೆಂಬುದು ಆಕೆಗಿನ್ನೂ ಗೊತ್ತಿದೆ. ಮಾಂಸದ ತುಂಡುಗಳಿಗೆ ಚುಚ್ಚ ಬೇಕಿದ್ದ ಹುಲ್ಲಿನ ಕಡ್ಡಿಗಳನ್ನು ಕೆಳಕ್ಕಿಡುವಂತೆ ಅತ್ತೆ ಹೇಳಿದಳು. ಮೇಣದಬತ್ತಿಗಳನ್ನೂ ಆಕೆ ಮುಟ್ಟುವುದು ಅವರಿಗೆ ಬೇಕಾಗಿರಲಿಲ್ಲ. ಕೈ ತುಂಬ ಕೆಲಸವಿಲ್ಲದೆ ಆಕೆಗೆ ಆದಿನ ಕಳೆದು ಹೋಯಿತು.

ಊರಿನ ಎಲ್ಲರೂ ಆಕೆಯನ್ನು ಷಿಯಾಂಗ್‌ಲಿನ್ ಹೆಂಡತಿ ಎಂದೇ ಕರೆಯುತ್ತಿದ್ದರು. ಅವರ ಮಾತಿನ ಲಯ ಎಲ್ಲ ಮೊದಲಿನಂತೇ ಇರುವುದು. ಅವರ ಮಾತಿನಲ್ಲಿ ಕಾಣಿಸುತ್ತಿದ್ದ ಲೇವಡಿಯನ್ನು ಆಕೆ ಅಷ್ಟಾಗಿ ತಲೆಗೆ ಹಚ್ಚಿಕೊಳ್ಳುತ್ತಿರಲಿಲ್ಲ. ತನ್ನ ಮಗನನ್ನು ತೋಳ ತಿಂದ ಸಂಗತಿಯನ್ನು ಎಲ್ಲರೆದುರಿಗೆ ಹೇಳುವುದೆಂದರೆ ಆಕೆಗೆ ಎಂಥದೋ ತೃಪ್ತಿ. ಹಗಲೂ ರಾತ್ರಿ ಆಕೆಗೆ ಅದೇ ಧ್ಯಾನ.

ಯಾವುದೇ ಸಂಗತಿಯನ್ನು ಹೇಳುವ ಮೊದಲು ಆಕೆ 'ನಾನು ಬುದ್ಧಿ ಇಲ್ಲದವಳು' ಎಂಬ ಪಲ್ಲವಿಯೊಡನೆ ಪ್ರಾರಂಭಿಸುವಳು. 'ಅವನ ಕೈ ಆ ಬುಟ್ಟಿಯನ್ನು ಬಿಗಿಯಾಗಿ ಹಿಡಿದುಕೊಂಡಿತ್ತು' ಎಂಬ ಈ ವಾಕ್ಯದೊಡನೆ ಕಥೆಯನ್ನು ಮುಗಿಸುತ್ತಿದ್ದಳು. ಈ ದಾರುಣ ಕಥೆಯನ್ನು ಆಕೆಯ ಬಾಯಿಯಿಂದ ಕೇಳುತ್ತಾ ಕೇಳುತ್ತಾ ಕೆಲವರು ಗಹಗಹಿಸಿ ನಗುತ್ತಿದ್ದರು, ಮತ್ತೆ ಕೆಲವರು ಕಥೆ ಮುಗಿವ ಮೊದಲೇ ಎದ್ದು ಹೋಗುತ್ತಿದ್ದರು. ಕೆಲವು ಹೆಂಗಸರು ಆಕೆಯ ಕಡೆ ನಿರ್ಲಕ್ಷ್ಯ ದೃಷ್ಟಿ ಬೀರುವರು. ಕೆಲವು ಮುದಿಹೆಂಗಸರು ಆಕೆ ಕಥೆಯನ್ನು ಕೇಳಿ ಕೆಲವರಿಗೆ ಹೇಳುವರು, ಕೆಲವರು ತಂತಮ್ಮ ಕಣ್ಣುಗಳಲ್ಲಿ ತಪ್ಪದೆ ನೀರು ತುಳುಕಿಸುವರು.

ಬರುಬರುತ್ತಾ ಆಕೆ ತನ್ನ ಕತೆ ಕೇಳಿರೆಂದು ಕಾಣುವ ಪ್ರತಿಯೊಬ್ಬರ ಹಿಂದೆ ಮುಂಬಾಲು ಬೀಳುತ್ತಿದ್ದಳು. ಗೋಗೆರೆಯುತ್ತಿದ್ದಳು, ಆದರೆ ಜಿಯಾಂಗ್ ಲಿನ್ ಹೆಂಡತಿಯ ಈ ಕಥೆ 'ಲೂಜೆನ್' ಗ್ರಾಮದ ಪ್ರತಿಯೊಬ್ಬರಿಗೆ ಗೊತ್ತಾಗಿ ಹೋಗಿತ್ತಾದ್ದರಿಂದ ಮತ್ತೆ ಕೇಳುವ ಪ್ರಸಂಗವಿರಲಿಲ್ಲ.

'ನಾನು ನಿಜವಾಗಿಯೂ ಬುದ್ಧಿ ಇಲ್ಲದವಳು' ಎಂಬ ಪಲ್ಲವಿಯನ್ನು ಆಕೆ ಪ್ರಾರಂಭಿಸಿದ ಕೂಡಲೇ ಕೆಲವರು 'ಹೌದು ಮಂಜು ಸುರಿಯುವ ಕಾಲದಲ್ಲಿ ಬೆಟ್ಟ ಗುಡ್ಡಗಳಲ್ಲಿ ತೋಳಗಳು ಆಹಾರಕ್ಕಾಗಿ ಊರಕಡೆ ನುಗ್ಗಿ ಬರುತ್ತಾವೆಂದು ನಿನಗೆ ಗೊತ್ತು' ಎಂದು ಕತೆಯನ್ನು ಮಧ್ಯದಲ್ಲಿ ತುಂಡು ಮಾಡಿ ಹೋಗಿಬಿಡುತ್ತಿದ್ದರು. ಆಗ ಆಕೆಗೆ ದಿಕ್ಕೇ ತೋಚದಂತಾಗಿ ಅಷ್ಟದಿಕ್ಕುಗಳನ್ನು ನೋಡುತ್ತ ನಿಂತುಬಿಡುತ್ತಿದ್ದಳು. ತನ್ನ ಕಥೆಯ ಬಗ್ಗೆ ತಾನು ಸಮಯ ಸಿಕ್ಕಾಗಲೆಲ್ಲ ದೀರ್ಘಾಲೋಚನೆಗೆ ತೊಡಗುತ್ತಿದ್ದಳು. ಯಾರಾದರೂ ಚಿಕ್ಕ ಮಕ್ಕಳು ಕಂಡಾಕ್ಷಣ ತನ್ನ ಆ–ಮಾವೋನನ್ನು ನೆನಪಿಗೆ ತಂದುಕೊಳ್ಳುತ್ತಿದ್ದಳು. ಆ–ಮಾವೋ ಬದುಕಿದ್ದಲ್ಲಿ ಈ ವಯಸ್ಸಿನವನಿರುತ್ತಿದ್ದ ಎಂದುಕೊಂಡು . ಕಣ್ಣೀರು ತಂದುಕೊಳ್ಳುತ್ತಿದ್ದಳು.

ಆಕೆಯ ಆಶಾದಾಯಕ ಕಣ್ಣುಗಳನ್ನು ನೋಡಿದ ಚಿಕ್ಕ ಚಿಕ್ಕ ಹುಡುಗರು ಓಡಿ ಹೋಗಿ ತಂತಮ್ಮ ತಾಯಂದಿರ ಹಿಂದೆ ಅವಿತುಕೊಳ್ಳುತ್ತಿದ್ದರು. ಆದ್ದರಿಂದ ಆಕೆಗೆ ಸಿಟ್ಟು ಬರುತ್ತಿತ್ತು. ಕೆಲವು ತುಂಟ ಹುಡುಗರು 'ಓ ಜಿಯಾಂಗ್ ಲಿನ್ ಹೆಂಡತಿಯೇ, ನಿನ್ನ ಆ–ಮಾವೋ ಬದುಕಿದ್ದಲ್ಲಿ ಇಷ್ಟೆತ್ತರ ಇರುತ್ತಿದ್ದನಲ್ಲವೆ' ಎಂದು ತಮಾಷೆ ಮಾಡುತ್ತಿದ್ದರು. ಜನರು ತನ್ನನ್ನೂ, ತನ್ನ ಕಥೆಯನ್ನೂ ತುಂಬ ಅಸಹ್ಯದಿಂದ ನೋಡುತ್ತಿದ್ದಾರೆಂದು ಯೋಚಿಸಿದವಳಂತೆ ಆಕೆ ದಿನದ ಬಹುಪಾಲು ಮೌನದಿಂದಲೇ ಇರುತ್ತಿದ್ದಳು.

ಲೂಜಿನ್ ಗ್ರಾಮದಲ್ಲಿ ಹೊಸ ವರ್ಷದ ಹಬ್ಬವನ್ನು ಬಹು ಸಂಭ್ರಮದಿಂದ ಆಚರಿಸುತ್ತಾರೆ.

ಒಂದು ವರ್ಷದ ಕೊನೆ ತಿಂಗಳ ೩೦ ನೇ ತಾರೀಕಿನಿಂದ ಗಿಜಿಬಿಜಿ ಹೆಚ್ಚು. ಈ ಸಾರಿ ಮಾವನ ಮನೆಗೆ ಒಬ್ಬ ಕೆಲಸದಾಳನ್ನು ಸೇರಿಸಿಕೊಳ್ಳಲಾಗಿದೆ. ಮಾಡೋ ಕೆಲಸ ಸಾಕಷ್ಟಿದ್ದುದರಿಂದ 'ಅಮಾಲಿಯಾ' ಎಂಬ ಹೆಸರಿನ ಹೆಂಗಸನ್ನು ಕೆಲಸಕ್ಕೆ ಸೇರಿಸಿಕೊಂಡಿರುವರು. ಅಮಾಲಿಯಾ ಸಸ್ಯಾಹಾರಿ ಹೆಂಗಸು, ತಾನು ಕೋಳಿಗಳನ್ನು ಕೊಲ್ಲಲಾರೆಂದು ಹೇಳಿದಳು. ತಾನು ಕೇವಲ ಮಾಂಸವನ್ನು ಚೆನ್ನಾಗಿ ತೊಳೆಯಬಲ್ಲೆನೆಂದು ಹೇಳಿದಳು.

ಷಿಯಾಂಗ್‌ಲಿನ್ ಹೆಂಡತಿಗೆ ಕೈ ತುಂಬ ಕೆಲಸವಿರಲಿಲ್ಲ. ಆಕಡೆ ಈಕಡೆ ತಿರುಗುವುದಷ್ಟೆ ಆಕೆಯ ಕೆಲಸ . ಅಮಾಲಿಯಾ ನೈವೇದ್ಯದ ಪಾತ್ರೆಗಳನ್ನು ತಿಕ್ಕಿ ತಿಕ್ಕಿ ತೊಳೆಯುತ್ತಿದ್ದುದನ್ನು ನೋಡುತ್ತ ಕುಳಿತುಕೊಳ್ಳುತ್ತಿದ್ದಳು. ಸಣ್ಣಗೆ ಮಂಜು ಸುರಿಯಲಾರಂಭಿಸಿತು.

ಆಕಾಶದ ಶೂನ್ಯದ ಕಡೆ ನೋಡುತ್ತ ತಾನು ನಿಜವಾಗಿಯೂ ಬುದ್ಧಿವಂತಳಲ್ಲ ಎಂದೆನ್ನುತ್ತ ನಿಟ್ಟುಸಿರು ಬಿಡುತ್ತಿದ್ದಳು.

"ಷಿಯಾಂಗ್‌ಲಿನ್ ಹೆಂಡತಿ" ನೀನಲ್ಲಿಗೆ ಹೋಗಬಾರದಿತ್ತು. ನಿನ್ನ ಹಣೆ ಮೇಲಾಗಿರೋ ಗಾಯ ಅವತ್ತಿಂದೇನು ?" ಅಮಾಲಿಯಾ ನೋಡುತ್ತ ಅಂದಳು.

"ಆ ಅಹ್ಂ..." ಅಸ್ಪಷ್ಟವಾಗಿ ಉತ್ತರಿಸಿದಳು.

"ಇಷ್ಟಕ್ಕೂ ಯಾಕೆ ಒಪ್ಪಿಕೊಂಡೆ ?"

"ನಾನಾ ?!"

"ಹೌದು, ನೀನೇ. ನಿನಗೆ ಇಷ್ಟವಿದ್ದೀತು. (ಆದ್ದರಿಂದ ಒಪ್ಪಿಕೊಂಡಿರುತ್ತಿ) ಇಲ್ಲದಿದ್ದಲ್ಲಿ..."

"ನಿನಗೆ ಗೊತ್ತಿಲ್ಲಮ್ಮಾ, ಆತ ಕಲ್ಲಿನಂಥ ಮನುಷ್ಯ,"

"ಏನು ಹೇಳಿದರು ನಾನು ನಂಬುವುದಿಲ್ಲ, ಆತನ ಮೇಲೆ ನಿನಗೆ ಇಷ್ಟವಿದ್ದಿರಬೇಕು, ಆದ್ದರಿಂದ ಒಪ್ಪಿಕೊಂಡಿದ್ದೀ ಎಂದು ಅರ್ಥ."

"ಅದೇನಮ್ಮಾ ನೀನೇ ಸರಿಯಾಗಿ ನೋಡಬೇಕಿತ್ತು" ಅಮಾಲಿಯಾಗೆ ನಗು ತಡೆಯಲಾ

ಗಲಿಲ್ಲ. ಆಕೆಯ ಮುಖದಲ್ಲಿ ಆಕ್ರೋಟಾ ಕಾಯಿಯಂತೆ ಸುಕ್ಕುಗಳಿದ್ದವು. ಚಿಕ್ಕ ಕಣ್ಣುಗಳು ಆಕೆಯವು. ಅಮಾಲಿಯಾ ಆಕೆಯ ಕಣ್ಣುಗಳಲ್ಲಿ ಕಣ್ಣುಗಳನ್ನಿಟ್ಟು ನೋಡಿದಳು.

"ಷಿಯಾಂಗ್‌ಲಿನ್ ಹೆಂಡತಿ, ಅದು ಒಳ್ಳೆಯ ಸಂಬಂಧ ವಿರಲಿಕ್ಕಿಲ್ಲ" ಯಾವುದೋ ರಹಸ್ಯ ಹೇಳುತ್ತಿರುವಳಂತೆ ಹೇಳಿದಳು ಅಮಾಲಿಯಾ." ನೀನು ನಿನ್ನ ಎರಡನೆಯ ಗಂಡನ ಜೊತೆ ಎರಡು ವರ್ಷ ಸಂಸಾರ ನಡೆಸಿ ದೊಡ್ಡ ತಪ್ಪು ಮಾಡಿರುವಿ, ಮೇಲಿನ ಲೋಕದಲ್ಲಿ ನಿನ್ನ ಇಬ್ಬರು ಗಂಡಂದಿರ ಎರಡು ಭೂತಗಳು ನಿನಗಾಗಿ ಜಗಳ ಶುರುಮಾಡಿರುತ್ತವೆ. ಸತ್ತನಂತರ ನೀನು ಯಾರಬಳಿ ಇರಲು ಇಷ್ಟಪಡುತ್ತಿ. ಯಮನಿಗೆ ನಿನ್ನನ್ನು ಎರಡು ತುಂಡು ಮಾಡಿ ಇಬ್ಬರಿಗೂ ಹಂಚಬಲ್ಲನೇ ಹೊರತು ಅವನಿಗೆ ಬೇರೆ ದಾರಿ ಹೊಳೆಯಲಾರದು".

ಷಿಯಾಂಗ್‌ಲಿನ್ ಹೆಂಡತಿಗೆ ಭಯವಾಯಿತು. ಇದುವರೆಗೆ ಯಾರೂ ಇಂಥ ವಿಷಯ ಹೇಳಿರಲಿಲ್ಲ.

"ನೀನು ಇನ್ನು ಮೇಲಾದರೂ ಈ ವಿಷಯದ ಬಗ್ಗೆ ಮುಂಜಾಗ್ರತೆ ವಹಿಸುವದು ಚೆಲೋ; ರಕ್ಷಕ ದೇವರ ಗುಡಿಗೆ ಹೋಗಿ ನೀನೂ ಒಂದು ದೇವತೆಯನ್ನು ಕೊಂಡುಕೋ; ದೇವರೇ ಈ ಜನ್ಮದಲ್ಲಿ ಮಾಡಿರೋ ಪಾಪಗಳನ್ನು ಕ್ಷಮಿಸು, ಅಂತ ಬೇಡಿಕೋ, ಹೀಗೆ ಪಾಶ್ಚಾತ್ತಾಪಪಟ್ಟಲ್ಲಿ ನರಕದ ಹಿಂಸೆಗಳಿಂದ ನೀನು ತಪ್ಪಿಸಿಕೊಳ್ಳಬಹುದು",

ಇದಕ್ಕೆ ಉತ್ತರ ಕೊಡಲು ಆಕೆಗೆ ಸಾಧ್ಯವಾಗಲಿಲ್ಲ. ಬೆಳಗಾಗುವ ಹೊತ್ತಿಗೆ ಆಕೆಯ ಕಣ್ಣುಗಳು ಉಬ್ಬಿದ್ದವು. ಅಮಾಲಿಯಾ ಆಡಿದ್ದ ಮಾತುಗಳು ಆಕೆಯಲ್ಲಿ ಪರಿಣಾಮ ಉಂಟುಮಾಡಿದ್ದವು. ಬೆಳಗಿನ ಉಪಹಾರದ ನಂತರ ಆಕೆ ಊರ ಈಶಾನ್ಯ ದಿಕ್ಕಿಗೆ ಇರುವ ರಕ್ಷಕ ದೇವರ ಗುಡಿ ಕಡೆ ಹೋದಳು. ಪೂಜಾರಿಗಳಿಗೆ ಸವಿಸ್ತಾರವಾಗಿ ಹೇಳಿದಳು. ಆಕೆಯ ಕಣ್ಣುಗಳಿಂದ ನೀರು ಸುರಿಯುತ್ತಿರುವುದನ್ನು ನೋಡಿದ ಅರ್ಚಕರಿಗೆ ದಯೆಬಂದು ಕೊನೆಗೆ ಹನ್ನೆರಡು ಸಾವಿರಕ್ಕೆ ದೇವರ ವಿಗ್ರಹವನ್ನು ಮಾರಲು ಒಪ್ಪಿಕೊಂಡರು.

ಆ–ಮಾವೊನ ಬಗ್ಗೆ ಅಪಹಾಸ್ಯ ಮಾಡುತ್ತಿದ್ದ ಜನರಿಗೆ ಅಮಾಲಿಯಾ ಮತ್ತು ಷಿಯಾಂಗ್‌ಲಿನ್ ಹೆಂಡತಿ ಮಧ್ಯೆ ನಡೆದಿದ್ದ ಮಾತುಕಥೆ ಯಾವ ರೀತಿಯಲ್ಲೋ ತಿಳಿದು ಬಿಟ್ಟಿತು. ಈ ಹೊಸ ಸಂಗತಿಯನ್ನು ಪ್ರಸ್ತಾಪಿಸಿ ಆಕೆಯನ್ನು ಅಳಿಸತೊಡಗಿದರು. ಆಕೆಯ ಹಣೆಯ ಮೇಲಿರುವ ಗಾಯದ ಗುರುತೇ ಅವರ ಹಾಸ್ಯ ಪ್ರಜ್ಞೆಯನ್ನು ಉದ್ದೀಪಿಸಿತು.

"ಓ ಪಿಯಾಂಗ್‌ಲಿನ್ ಹೆಂಡತೀ, ಎರಡನೆಯ ಮದುವೆಗೆ ಯಾಕೆ ಒಪ್ಪಿಕೊಂಡೆ" ಎಂದು ಒಬ್ಬ ಜೋರಾಗಿ ಅರಚಿದ.

"ಏನೂ ಇಲ್ಲದೆಯೇ ತಲೆ ಒಡೆದುಕೊಂಡಳು" ಎಂದು ಇನ್ನೊಬ್ಬ ಅಂದ. ಈ ಯಾವ ಕಿಡಿಗೇಡಿ ಮಾತುಗಳಿಂದ ಆಕೆ ಸಿಟ್ಟಿಗೇಳಲೇ ಇಲ್ಲ. ತನ್ನನ್ನು ನಿಂದಿಸುವವರತ್ತ ನಿರ್ಲಿಪ್ತವಾಗಿ ನೋಡುತ್ತಿದ್ದಳು. ಆಕೆ ತನ್ನ ಪಾಡಿಗೆ ತಾನು ನೆಲಗುಡಿಸುವುದು, ಕಾಯಿಪಲ್ಲೆ ಹೆಚ್ಚುವುದು, ಅಡುಗೆ ಮಾಡುವುದು ಹೀಗೆ ಒಂದಲ್ಲಾ ಒಂದು ಕೆಲಸ ಮಾಡುತ್ತ ದಿನಗಳನ್ನು ಕಳೆಯುತ್ತಿದ್ದಳು. ಒಂದು ವರ್ಷದ ನಂತರ ಅತ್ತೆಯಿಂದ ತನಗೆ ಬರಬೇಕಾದ ಹಣ ಲೆಕ್ಕಮಾಡಿಸಿ ಇಸಿದುಕೊಂಡಳು. ಎಲ್ಲಾ ಒಟ್ಟು ಹನ್ನೆರಡು ಬೆಳ್ಳಿ ಡಾಲರ್ ಆಯಿತು. ರಜೆ ತೆಗೆದುಕೊಂಡು ಒಂದು ದಿನ ಊರ ಈಶಾನ್ಯ ದಿಕ್ಕಿನ ಕಡೆ ಹೋಗಿ ಬಂದಳು. ಆಕೆ ಬಂದನಂತರ ಆಕೆಯಲ್ಲಿ ಲವಲವಿಕೆ ಕಂಡಿತು. ಕಣ್ಣಲ್ಲಿ ಕಾಂತಿ ಕಾಣಿಸಿತು. ರಕ್ಷಕ ದೇವರ ಗುಡಿಯಲ್ಲಿ ತಾನೊಂದು ವಿಗ್ರಹವೊಂದನ್ನು ಕೊಂಡಿರುವುದಾಗಿ ಅತ್ತೆಗೆ ಹೇಳಿದಳು.

ಚಳಿಗಾಲದ ಹಬ್ಬದಲ್ಲಿ ಆಕೆ ಮೊದಲಿಗಿಂತ ಹೆಚ್ಚು ಕೆಲಸ ಮಾಡಿದಳು. ಅಮಾಲಿಯಾಳೊಂದಿಗೆ ಹಾಲಿನ ನಡುವೆ ನೈವೇದ್ಯದ ವ್ಯವಸ್ಥೆ ಮಾಡಲು ಹೋದಳು.

'ನೀನು ಅವುಗಳನ್ನು ಕೆಳಕ್ಕಿಡು' ಎಂದು ಅತ್ತೆ ಗಟ್ಟಿ ಧ್ವನಿ ತೆಗೆದು ಗದರಿಸಿದಳು. ಆಕೆಗೆ ಅವಮಾನವಾಯಿತು. ಆಕೆಯ ಮುಖ ವಿವರ್ಣವಾಯಿತು. ಆಕೆ ಇದ್ದ ಸ್ಥಿತಿಯಲ್ಲಿ ನಿಂತುಬಿಟ್ಟಳು. ಮಾವ ಮೇಣದ ಬತ್ತಿಗಳನ್ನು ಕೆಳಕ್ಕಿಡುವಂತೆ ಹೇಳಿದ ಮೇಲೆ ಆಕೆ ವಾಸ್ತವಕ್ಕೆ ತಿರುಗಿ ಅಲ್ಲಿಂದ ಹೊರಟು ಹೋಗಿದ್ದು.

ಕ್ರಮೇಣ ಆಕೆಯ ದೇಹ ದುರ್ಬಲವಾಯಿತು, ಆಕೆಯ ಕಣ್ಣುಗಳು ಆಳಕ್ಕಿಳಿದುಬಿಟ್ಟವು. ಚೈತನ್ಯ ಉಡುಗಿಹೋಯಿತು. ಬರುಬರುತ್ತಾ ಆಕೆಯಲ್ಲಿ ಧೈರ್ಯವೇ ಮಾಯವಾಯಿತು. ತನ್ನ ನೆರಳಿಗೇ ಹೆದರಿಬಿಡುವಷ್ಟು ಪುಕ್ಕಿಯಾದಳು. ಆಕೆ ದಿನದ ಪ್ರತಿ ಘಳಿಗೆಯನ್ನು ಹಗಲುಗನಸು ಕಾಣುವುದರಲ್ಲಿ ಕಳೆಯುತ್ತಿದ್ದಳು. ಹಗಲುಗನಸಿನ ಆಕೆಯ ಗಮನಕ್ಕೆ ಯಾರೂ ಬರುತ್ತಿರಲಿಲ್ಲ. ಕೊರೆದ ವಿಗ್ರಹದಂತೆ ಒಬ್ಬಳೇ ಕೂಡುತ್ತಿದ್ದಳು. ಈ ವ್ಯಸನದಲ್ಲಿ ಆಕೆಯ ತಲೆಯ ಕೂದಲು ಉದುರಿದವು, ಆಕೆಯ ನೆನಪಿನ ಶಕ್ತಿ ಉಡುಗಿಹೋಯಿತು.

"ಏನಾಯ್ತೋ ಈ ಪಿಯಾಂಗ್‌ಲಿನ್ ಹೆಂಡತಿಗೆ, ಈಕೆಯನ್ನು ಕೆಲಸಕ್ಕೆ ಸೇರಿಸಿಕೊಳ್ಳದಿದ್ದಲ್ಲಿ ಚೆನ್ನಾಗಿರುತ್ತಿತ್ತು" ಎಂದು ಆಕೆಯ ಕಿವಿಗೆ ಬೀಳುವಂತೆ ಅತ್ತೆ ಗೊಣಗುತ್ತಿದ್ದಳು.

ಆಕೆಯಲ್ಲಿ ಬದಲಾವಣೆಯಾಗಲಿಲ್ಲ. ಆಕೆಯಿಂದ ಉಪಯೋಗವಿಲ್ಲೆಂದು ಎಲ್ಲರಿಗೂ ತಿಳಿಯಿತು. ಕೆಲಸದಿಂದ ಬಿಡಿಸಿ 'ವೃಯರ್' ಮನೆಗೆ ಹೋಗೆಂದು ಒತ್ತಾಯಿಸಿದ್ದರೆಂದು ಹಿಂದೊಂದು ದಿನ ಲೂಜೆನ್‌ಗೆ ಹೋಗಿದ್ದಾಗ ತಿಳಿಯಿತು. ಆಕೆಯನ್ನು ಕಳಿಸಿರುತ್ತಾರೆಂಬುದು ನಿರ್ವಿವಾದ. ಆನಂತರ ಏನಾಯ್ತೆಂದು ಎಲ್ಲರಿಗೂ ತಿಳಿದೇಇದೆ. ಮಾವನ ಮನೆಯಿಂದ ಹೋದನಂತರ ಆಕೆ ಭಿಕ್ಷುಕಿಯಾದಳೋ ಅಥವಾ ವೃಯರ್ ಮನೆಗೆ ಹೋದನಂತರ ಬಿಕ್ಷುಕಿಯಾದಳೋ ತಿಳಿಯದು.

ಆ ವರ್ಷದ ಹಬ್ಬಕ್ಕೆ ಮಾವನ ಮನೆಯಲ್ಲಿ ಬಲಿ ಪೂರ್ತಿಯಾಗುತ್ತಲೇ ಪಟಾಕಿಯ ಸದ್ದು ಮುಗಿಲು ಮುಟ್ಟಿತು. ಬೆಳಗಿನಿಂದ ರಾತ್ರಿಯವರೆಗೆ ನನ್ನನ್ನು ಪೀಡಿಸಿತು ಈ ಉತ್ಸವದ ವಾತಾವರಣ. ಇಡೀ ಬಯಲು ಹೊಗೆಯಿಂದ ತುಂಬಿ ಬಿಟ್ಟಿತು. ಭೂ ಸ್ವರ್ಗದ ಸಮಸ್ತ ಋಷಿಗಳು ಧೂಪದೀಪದಿಂದ ಹೋಮಯಜ್ಞ ನೈವೇದ್ಯವನ್ನೂ ಸ್ವೀಕರಿಸಿದರು. ಆಕಾಶದ ತುಂಬ ನಡೆಯುತ್ತಿರುವ ಋಷಿಗಳು ತಪವರಿಸುತ್ತಿರುವರು ಅಂತ ನನಗೆ ಅನ್ನಿಸಿತು.

ಕನ್ನಡಕ್ಕೆ : ಕುಂ. ವೀರಭದ್ರಪ್ಪ

ಸರೋಜಿನಿ ಜಾಲವಾದಿ

ಬರಿದೆದೆ

ಕಸವ ತೆಗೆದೆ
ರಸವ ಬೆಳೆಯಬೇಕೆಂದು
ಹಸನು ಮಾಡಿದೆ ಹಸನು ಮಾಡಿದೆ
ಮಳೆಗಾಲವೇ ಹೋಯಿತಲ್ಲಾ !
ಮತ್ತೆ
ಉತ್ತಿದೆ, ಬಿತ್ತಿದೆ,
ಆದರೆ ಆರಿದ್ರಾ ಕೈ ಕೊಟ್ಟಿತಲ್ಲಾ!
ದರಿದ್ರಳಾದರೂ ಆಶೆ ಬಿಡಲಿಲ್ಲ
ಬಿತ್ತಿದೆ,
ಬೆಳೆಗಾಗಿ ಕಾಯ್ದೆ
ಮಳೆಯನ್ನು.
ಅಂತೂ ರೋಹಿಣಿ ಮಳೆಯಾಯ್ತು
ಬೆಳೆ ಬಂತು ಕೊಯ್ಲಿಗೆ.
ಆದರೆ
ಧಾಂಡಿಗರು ಬಂದು ಕೊಯ್ದೊದರಲ್ಲಾ
ನನ್ನೆದೆ ಬರಿದಾಯಿತಲ್ಲಾ !

ಅರವಿಂದ ಮಾಲಗತ್ತಿ

ಕೆಲವು ಗಿನ್ನೆಸ್ ದಾಖಲೆಗಳು

ಆಚರಿಸಿ ನೀವ್ ಆಚರಿಸಿ
ಸ್ವಾತಂತ್ರ್ಯೋತ್ಸವ ಗಣರಾಜ್ಯೋತ್ಸವ
ನೀವ್ ಆಚರಿಸಿ

ಬರೆದಿಡಿ ನೀವು ಬರೆದಿಡಿ
ಹೊನ್ನಕ್ಕರದಲಿ ವಜ್ರಫಲಕದಲಿ
ನೀವ್ ಬರೆದಿಡಿ

ಮಣ್ಣ ಕುಡಿಕೆಯಲಿ ನೀರ ಕುಡಿದವರ
ಹಾಲ ಹಲ್ಲಲಿ ಕಲ್ಲ ಕಡೆದವರ
ತೊಗಲು ಬಾಯಾಲೂ ತೊದಲು ನುಡಿದವರ
ಮಲ ತಿನ್ನಿಸಿ ಮೆರವಣಿಗೆ ಮಾಡಿದ
ಅಚ್ಚಳಿಯದ ಹೊಚ್ಚಸುರಿನ ಶಾಸನ
ಬರೆದಿಡಿ ನೀವ್ ಬರೆದಿಡಿ......

ಗೊದಲಿಕಟ್ಟಿ ಹಿಂಡಿ ಮೇಯುವರ
ಆರು ವರ್ಣಗಳ ಒಳಗೆ ತುಂಬಿಕೊಂಡು
ಖ್ಯಾವಿ ಬಣ್ಣವನು ಹೊರಗೆ ಇಟ್ಟವರು
ಬಟಾಬಯಲಿನಲಿ ಮಲೆಗಲ್ಲವ ಸುಟ್ಟು
ಬೆತ್ತಲೆ ಮಾಡಿ ಊರ ಮೆರೆಸಿದುದು
ಆಚರಿಸಿ ನೀವ್ ಆಚರಿಸಿ......

ಹಬ್ಬ-ಜಾತ್ರೆಗಳ ಕತ್ತಲೆ ತೊಳೆಯಲು
ರಾಗಿ ಮುದೆಗಳ ಜೋಳಗೂಡಾಗಳ ಸುಡಿಸಿಕೊಂಡವರು
ಹೊಲ–ಮನೆ ಹಕ್ಕನು ಬಾಯಲಿ ಕೇಳಿ
ಗುಡಿಸಲು–ಕೇರಿ–ಮೈದೊಗಲುಗಳ ನೇಣಕೊಟ್ಟವರು
ಕಳ್ಳಠಾಣೆಯಲಿ ಸುಳ್ಳ ಕೋರ್ಟಿನಲಿ ದಾಖಲಾಗದು.

ವಿಮರ್ಶಾವಿಧಾನಗಳೂ ಅವು ಒಡ್ಡುವ ಸಮಸ್ಯೆಗಳೂ

ಅರವಿಂದ ನಾಡಕರ್ಣಿ

ಭಾರತೀಯ ಸಾಹಿತ್ಯಪರಂಪರೆ ಮಹಾಕಾವ್ಯ ಖಂಡಕಾವ್ಯ ನಾಟಕ ಈ ಪ್ರಕಾರಗಳ ಮೂಲಕ ಪ್ರಮುಖವಾಗಿ ಬೆಳೆದುಬಂದಿದೆ. ಅಪರೂಪವಾಗಿ ಗದ್ಯಪ್ರಕಾರಗಳಿದ್ದರೂ ಅವು ಪರಂಪರೆಯಾಗಿ ಬೆಳೆದಂತಿಲ್ಲ. ನಮ್ಮ ವಿಮರ್ಶಾತತ್ವಗಳೂ ಕಾವ್ಯ ಮತ್ತು ನಾಟಕದ ಸುತ್ತ ಬೆಳೆಯಿತು. ಗದ್ಯಪ್ರಕಾರ ಹಾಗೂ ಲಿರಿಕಲ್ ಸಂಪ್ರದಾಯ ವಿಪುಲವಾಗಿ ಬೆಳೆಯುತ್ತಿರುವ ಆಧುನಿಕ ಯುಗದಲ್ಲಿ ಈ ಪ್ರಕಾರಗಳಂತೇ ಅವುಗಳ ವಿಮರ್ಶಾತತ್ವಗಳ ವಿಚಾರಗಳನ್ನೂ ಪಾಶ್ಚಾತ್ಯರಿಂದ ಪಡೆದದ್ದಾಗಿದೆ. ಪಾಶ್ಚಾತ್ಯರಲ್ಲಿ ಅನುಸರಿಸಿದ, ಅನುಸರಿಸುತ್ತಿರುವ ವಿಮರ್ಶಾಪಥಗಳು ಹಾಗೂ ಮೌಲ್ಯಮಾಪನದ ಮಾರ್ಗಗಳು ಸ್ಥೂಲವಾಗಿ ಹೀಗಿವೆ :

(೧) ನೈತಿಕತಾವಿಧಾನ (Moralistic). (೨) ಸಮಾಜ ಶಾಸ್ತ್ರೀಯ ವಿಧಾನ (Sociological) (೩) ಆಕೃತಿಪ್ರಧಾನ ವಿಧಾನ (Formalistic) (೪) ಮಾನಸ ಶಾಸ್ತ್ರೀಯ ವಿಧಾನ (Psychological) (೫) ಮೂಲರೂಪಾತ್ಮಕ ವಿಧಾನ (Archetypal).

ಸದ್ಯ ಇವು ಐದೂ ಬಳಕೆಯಲ್ಲಿವೆ. ಪ್ರತ್ಯೇಕವಾಗಿ ಅನ್ವಯಿಸಿದರೆ ಇವು ದೊಡ್ಡ ಸಮಸ್ಯೆಗಳನ್ನೇ ನಿರ್ಮಿಸುತ್ತವೆ. ಒಂದು ಉತ್ಕೃಷ್ಟ ಸಾಹಿತ್ಯ ಒಂದು ವಿಧಾನದಲ್ಲಿ ನಿರರ್ಥಕ ಎನಿಸಬಹುದು ಆದರೆ ಇನ್ನೊಂದು ವಿಧಾನದಲ್ಲಿ ಶ್ರೇಷ್ಠ ಎನಿಸಬಹುದು. ಆದರೆ ಅಷ್ಟಕ್ಕೇ ಆ ವಿಧಾನ ಸತ್ವಹೀನವಾಗುವುದಿಲ್ಲ. ಇವುಗಳ ಹಿನ್ನೆಲೆಯಾಗಿ ಅನೇಕ ದೃಷ್ಟಿಧೋರಣೆಗಳು ಆಗಾಗ ಬೆಳಕಿಗೆ ಬಂದು ಕ್ರಮೇಣ ಒಂದು ಕೇಂದ್ರ ಸೂತ್ರದ ಸುತ್ತ ಘನೀಭವಿಸಿ ಈ ಮಾರ್ಗಗಳು ಪ್ರಚಾರಕ್ಕೆ ಬಂದಿವೆ. ಈ ಎಲ್ಲ

ಮಾರ್ಗಗಳಿಗೂ ಪ್ರತ್ಯೇಕವಾಗಿ ವಕ್ತಾರರಿದ್ದಾರೆ. ಒಂದೊಂದು ಕಾಲಖಂಡಕ್ಕೆ ಒಂದೊಂದು ಪ್ರಬಲವಾಗಿ ಇನ್ನೊಂದು ಗೌಣವಾಗುವುದು ಸಾಹಿತ್ಯಚರಿತ್ರೆಯ ಅಂಶ. ಒಂದೇ ಒಂದು ವಿಧಾನ ಕೃತಿಯ ಹಲವು ನೋಟಗಳಲ್ಲಿ ಕೆಲವನ್ನೇ ಆಳವಾಗಿ ಅಭ್ಯಸಿಸಬಹುದು. ಆದರೆ ಸಮಗ್ರತೆಯನ್ನು ಅನ್ವೇಷಿಸಲಾರದು; ಕಾರಣ ಈ ಮಾರ್ಗ ಪ್ರತ್ಯೇಕವಾಗಿ ಅನುಸರಿಸುವವರಿಗೆ ಅದೇ ಮುಖ್ಯ ಎಂದು ಕಾಣಿಸಬಹುದು. ಅದೇ ಅವರ ವಾದವೂ ಆಗಿದೆ. ಇನ್ನೊಂದು ಮಾತೆಂದರೆ ಮೊದಲಿನ ಮೂರು ವಿಧಾನಗಳು ಕೃತಿಯ ಅಭ್ಯಾಸಕ್ಕೆ ಎಷ್ಟು ಅವಶ್ಯವೋ ಅಷ್ಟೇ ಅವು ಮೌಲ್ಯಮಾಪನಕ್ಕೂ ಅವೆ. ಕೊನೆಯ ಎರಡು ವಿಧಾನಗಳು ಕೃತಿಯ ಕೆಲವು ನೋಟಗಳ ಅಧ್ಯಯನಕ್ಕೆ ಕೃತಿಯ ಆಳವಿಸ್ತಾರದ ತಿಳಿವಳಿಕೆಗೆ ಸಹಾಯಕಾರಿ ಆಗಬಹುದು; ಆದರೆ ಮೌಲ್ಯಮಾಪನಕ್ಕೆ ಯೋಗ್ಯವೇ ಎಂಬುದು ಚರ್ಚಾಸ್ಪದವಾಗಿದೆ. ಈ ಮಾನದಂಡಗಳನ್ನು ಪ್ರತ್ಯೇಕವಾಗಿ ಪಾಶ್ಚಾತ್ಯರ ಸಾಹಿತ್ಯಕ್ಕೆ ಅನ್ವಯಿಸಿದಾಗ ಸಾಕಷ್ಟು ಸಮಸ್ಯೆಗಳನ್ನು ನಿರ್ಮಿಸಿವೆ: ಇನ್ನು ಭಾರತೀಯ ಸಾಹಿತ್ಯಕ್ಕೆ ಕಲ್ಲೋಲ ಉಂಟುಮಾಡುವ ಸಾಧ್ಯತೆ ಇದೆ. ಪ್ರಸ್ತುತ ಲೇಖನದಲ್ಲಿ ಇವುಗಳ ಸಂಕ್ಷಿಪ್ತ ಪರಿಚಯದೊಂದಿಗೆ ಇವು ಒಡ್ಡುವ ಸಮಸ್ಯೆಗಳ ಬಗ್ಗೂ ಮಾಹಿತಿ ನೀಡಿದ್ದೇನೆ.

(೧) **ನೈತಿಕತಾ ವಿಧಾನ:** ಮಾನವೀಯ ದುರ್ಬಲ ಚಿತ್ತ ಪ್ರವೃತ್ತಿಗಳಿಗೆ ಪ್ರೋತ್ಸಾಹನ ಸಿಗುವದೆಂದು ಕವಿಗಳನ್ನೇ ಪ್ಲೇಟೋ ಬಹಿಷ್ಕರಿಸಿದ್ದದ್ದು ಸರ್ವವಿದಿತವಾಗಿದೆ. ಅದರ ಹಿಂದೆ ಇದ್ದದ್ದು ಮಾನವನ ನೈತಿಕ ಉದ್ಧಾರದ ಕಳಕಳಿ. ಅಲ್ಲಿಂದ ಆಧುನಿಕ ಯುಗದವರೆಗೂ ಸಾಹಿತ್ಯದಲ್ಲಿ ನೈತಿಕತೆಯ ಮಹತ್ವ ಅನೇಕರು ಒಪ್ಪುತ್ತಲೇ ಬಂದಿದ್ದಾರೆ. ಹೊರೇಸನು ಕೃತಿಯ ಸೌಂದರ್ಯದೊಂದಿಗೆ ಅದರ ಉಪಯುಕ್ತತೆಯ ಬಗ್ಗೆ ವಾದಿಸಿದ. ಸಿಡ್ನಿ, ಜಾನಸನ್, ಆರ್ನಾಲ್ಡ ಇವರೆಲ್ಲ ಈ ಅಂಶವನ್ನು ಗಂಭೀರವಾಗಿಯೇ ಸ್ವೀಕರಿಸಿದರು. ಇವರಿಗೆಲ್ಲ ಹ್ಯಾಗೆ ಹೇಳಿದ್ದಾಗಿದೆ ಎಂಬುದರ ಜೊತೆ ಏನನ್ನು ಹೇಳಿದ್ದಾಗಿದೆ ಎಂಬುದು ಅದರ ಮಹತ್ವದೊಂದಿಗೆ ಮಾನ್ಯವಾಗಿತ್ತು. ೧೯ನೇ ಶತಮಾನದ ರೋಮ್ಯಾಂಟಿಕ್ ಚಳುವಳಿ ಹಾಗೂ ಪ್ರಕೃತಿವಾದ (Naturalism) ಗಳ ಪ್ರಹಾರಕ್ಕೂ ಬಗ್ಗದೇ ಈ ವಿಧಾನ ಈ ಶತಕದಲ್ಲಿ ನವಮಾನವತಾಪರ (Neohumanistic) ಧೋರಣೆಯಲ್ಲಿ ಮೊದಲು ಕಾಣಿಸಿಕೊಂಡಿತು. ಇದಕ್ಕೆ ಪಿ. ಇ. ಮೋರ್ ಮತ್ತು ಇರ್ವಿಂಗ್ ಬ್ಯಾಬಿಟ್ ಇವರು ಪ್ರಮುಖ ವಾಗ್ಮಿಗಳಾದರು. ಇವರು ಕೃತಿಯಲ್ಲಿ ಸೌಂದರ್ಯಗುಣಗಳೊಂದಿಗೆ ನೈತಿಕಗುಣಗಳನ್ನೂ ಅಪೇಕ್ಷಿಸಿದರು. ರೋಮ್ಯಾಂಟಿಕರ ಅನಿಯಂತ್ರಿತ ಅಹಂಭಾವ ಹಾಗೂ ವಿಪರೀತ ಅನುಕಂಪೆಯ ಧೋರಣೆಯಾಗಲೀ ಪ್ರಕೃತಿವಾದದವರ ಮನುಷ್ಯನ ಸ್ವತಂತ್ರ ಸಂಕಲ್ಪಶಕ್ತಿ ಹಾಗೂ ಹೊಣೆಗಾರಿಕೆಯನ್ನು ಅಲ್ಲಗಳೆಯುವ

ಧೋರಣೆಯಾಗಲೀ ಇವರಿಗೆ ಮಾನ್ಯವಿದ್ದಿಲ್ಲ. ಮಾನವನ ವೈಚಾರಿಕ ಹಾಗೂ ಅಭಿವೃತ್ತಿಗಳ (Attitudes) ಪ್ರಪಂಚದಲ್ಲಿ ಸಾಹಿತ್ಯ ಹುಟ್ಟುತ್ತದೆ ಆದ್ದರಿಂದ ಮಾನವನನ್ನು ಅದು ತಟ್ಟಿ ಪ್ರಭಾವಕ್ಕೊಳಗಾಗಿಸುತ್ತದೆ. ಮನುಷ್ಯನಲ್ಲಿ ವಿವೇಚನಾಶಕ್ತಿ (Reason) ಮತ್ತು ನೈತಿಕಪ್ರಜ್ಞೆ ಇದ್ದದ್ದರಿಂದಲೇ ಉಳಿದ ಪ್ರಾಣಿವರ್ಗಕ್ಕಿಂತ ಉಚ್ಚಸ್ತರದಲ್ಲಿ ಮಾನವನಿದ್ದಾನೆ. ಈ ಶಕ್ತಿಯಿಂದ ತನ್ನ ಭಾವಾವೇಶ (Passion) ಗಳನ್ನು ನಿಯಂತ್ರಿಸಿ ಮಾನಸಿಕ ಶಿಸ್ತು ಮತ್ತು ಸ್ಥಿರತೆ (Order) ಇವನ್ನು ಅವನು ಸಾಧಿಸಿಕೊಳ್ಳುತ್ತಾನೆ. ವಿವೇಕಬುದ್ಧಿ ವಿವೇಚನಾಶಕ್ತಿ ಇವು ಮನುಷ್ಯತ್ವದ ಚಿಹ್ನೆ. ಇಂಥ ಮಾನಸಿಕ ಸುಸ್ಥಿತಿಯನ್ನು ಪುರಸ್ಕರಿಸುವ ಸಾಹಿತ್ಯ ಉತ್ಕೃಷ್ಟ ಸಾಹಿತ್ಯ; ಸಾಹಿತ್ಯವಲ್ಲಿ ಶಿಸ್ತು ನಿಯಂತ್ರಣ ಇರಬೇಕು ಎಂದು ಇವರು ಅಪೇಕ್ಷಿಸಿದರು. ಆ ಪ್ರಕಾರ ಮನುಷ್ಯನ ಧರ್ಮನಿರಪೇಕ್ಷ ಆದರೂ ಗೌರವಯುತ ಪರಿಕಲ್ಪನೆಯನ್ನು ಕಟ್ಟಿದರು. ಆದರೆ ಈ ಶತಕದ ಆದಿಯಲ್ಲಿ ನೀತಿಸಿದ್ಧಾಂತಗಳ ಬಗ್ಗೆ ಸಂದೇಹ ಹಾಗೂ ಭಿನ್ನಾಭಿಪ್ರಾಯಗಳೂ ಹುಟ್ಟಿದವು. ಅವಕ್ಕೆ ಆಧುನಿಕ ಮಾನವಿಕ ವಿಜ್ಞಾನಗಳೂ ಹೊಸ ನಾಗರಿಕ ವ್ಯವಸ್ಥೆಗಳೂ ಕಾರಣವಾದವು. ಇದನ್ನು ಕಂಡ ಟಿ. ಎಸ್. ಎಲಿಯಟ್‌ನು ಯಾವ ನೀತಿ ಸಿದ್ಧಾಂತ ತನ್ನ ಸಮರ್ಥನೀಯತೆಯನ್ನು ಕಳಕೊಳ್ಳುತ್ತದೋ ಅದು ಜನಮಾನ್ಯತೆಗೆ ಪಾತ್ರವಾಗುವದಿಲ್ಲ. ಆದ್ದರಿಂದ ಧರ್ಮನಿರಪೇಕ್ಷ ಸಿದ್ಧಾಂತ ಜನರನ್ನು ಆಕರ್ಷಿಸುವದಿಲ್ಲ. ಧರ್ಮರೂಢ ನೈತಿಕತೆ ಜನರ ಹೃದಯ ಗೆಲ್ಲಬಹುದು ಎಂದು ಸಾರಿ ಧರ್ಮರೂಢ ನೈತಿಕತಾವಾದ (Religious Humanism) ವನ್ನು ಪ್ರತಿಪಾದಿಸಿದ. ವ್ಯಾಪರ ವಿಂಟರ್ಸ ಹಾಗೂ ಎಫ್. ಆರ್. ಲೀವಿಸ್ ಇವರೂ ಸಾಹಿತ್ಯದ ನೈತಿಕ ಗುರಿಯ ಬಗ್ಗೆ ತಮ್ಮ ಕಾಳಜಿ ತೋರಿಸಿದ್ದಾರೆ. ಆಕೃತಿ ಪ್ರಧಾನ ಮಾರ್ಗದವರಲ್ಲಿ ಕೆಲವರು ಈ ಕಾಳಜಿ ತೋರಿಸಿದ್ದಾರೆ.

ಇವರ ವಾದದ ಪ್ರಮುಖ ಅಂಶಗಳು ಹೀಗಿವೆ:

ವಿನಯ ಕ್ಲಾಸಿಕಲ್ ಗುಣ; ಅನಿಯಂತ್ರಿತ ಭಾವಾವೇಶ ಹಾಗೂ ಕಲ್ಪನೆ ಇವು ಅಹಂಭಾವದಲ್ಲಿ ಅಂತ್ಯವಾಗುವವು; ಇದೇ ರಾಷ್ಟ್ರಮಟ್ಟದಲ್ಲಿ ಒಣಜಂಭ ಸ್ವಪ್ರತಿಷ್ಠಾಪ್ರೀತಿ ಮಹತೋನ್ಮಾದ (Megalomania) ನಿರ್ಮಿಸುತ್ತಿದೆ. ಪ್ರತಿಭೆ (Genius) ಎಂದು ಕೊಳ್ಳುತ್ತ ಪ್ರಕೃತಿ ಸ್ವಭಾವದ ಹುಚ್ಚು ಹೊಳೆಯಲ್ಲಿ ಹರಿದಾಡುತ್ತ ಎಲ್ಲೋ ಹೋಗುವ ಆದಿಮ ಕಲ್ಪನೆಯನ್ನು ಇವರು ಮನ್ನಿಸುವದಿಲ್ಲ. ಬರೇ ದೈವದತ್ತ ಪ್ರತಿಭೆ ಇದ್ದರಾಗಿಲ್ಲ; ಅದನ್ನು ಯೋಗ್ಯ ರೀತಿಯಲ್ಲಿ ಬಳಸಬೇಕು. ಅದಕ್ಕಾಗಿ ನೈತಿಕ ಕಲ್ಪನೆಯ ಮೂಲಕ ಪ್ರಮಾಣಗಳನ್ನು ನೋಡಬೇಕು. ತನ್ನ ಪ್ರತಿಭೆಯನ್ನು ಮಾನವೀಕರಿಸಬೇಕು. ಅದು ಅನಿಯಂತ್ರಿತ ಪ್ರಕೃತಿಯಂತೂ ಆಗಲಾರದು. ಅಭಿರುಚಿ

ಇಸ್ದ ವಿಮರ್ಶಕ ಕೃತಿಯನ್ನು ಅದರ ಅಭಿವ್ಯಕ್ತಿ ಹಾಗೂ ಗ್ರಹಣಕ್ಕಿಂತ ಭಿನ್ನವಾದ ಒಂದು ಪ್ರಮಾಣಕದ ಬೆಳಕಿನಲ್ಲಿ ನೋಡಬೇಕು; ಈ ಪ್ರಮಾಣಕ, ನೈತಿಕ ಕಲ್ಪನೆಯ ಆಧಾರದ ಮೇಲೆ ಯಾವದು ಮಾನವೀಯ ಸಾಮಾನ್ಯ ಎಂದು ನೋಡುವದರಲ್ಲಿದೆ. ಉತ್ತಮ ವಿಮರ್ಶಕ ಇಂಥ ಪ್ರಮಾಣಕ ನಿರ್ಮಿಸಬಲ್ಲ. ಇಂಥಲ್ಲಿ ಕೃತಿಕಾರ ಹಾಗೂ ವಿಮರ್ಶಕರು ಹತ್ತಿರ ಬರಬಲ್ಲರು. ಅಭಿರುಚಿಯಿಲ್ಲದ ಕಲ್ಪನೆ ಗಾಯಟೆ ಕೂಡ ಹೇಳಿದ್ದ.

ಮಾನವ ತನ್ನಲ್ಲಿಯ ಚಿತ್ತಾವೇಗ (Impulse)ಗಳನ್ನು ತಡೆಹಿಡಿಯುವದರಲ್ಲಿ ತನ್ನ ನೈಜ ಸ್ವಾತಂತ್ರ್ಯ ತೋರಿಸುತ್ತಾನೆ. ಅಲ್ಲದೇ, ಅವುಗಳಿಗೆ ಶರಣಾಗತನಾಗುವದರಲ್ಲಿ ಅಲ್ಲ; ಮತ್ತು ಈ ವಿರೋಧ ಸಂಕಲ್ಪದಲ್ಲೇ ಮಾನವನ ನಾಗರೀಕರಣದ ನಿದರ್ಶನವಿದೆ. ತನ್ನ ಮಾನಸಿಕ ಪ್ರಕೃತಿಯ ಮಿತಿಗಳನ್ನು ಕಂಡುಕೊಂಡೇ ತನ್ನನ್ನು ಸುಧಾರಿಸಿಕೊಳ್ಳಬಲ್ಲ, ಹಾಗೂ ನಾಗರಿಕತೆಯ ಪೂರ್ಣತೆಗೆ ಮುಟ್ಟಬಲ್ಲ. ಯಾವ ಕೃತಿಯಲ್ಲಿ ಕಲ್ಪನೆ ಉದ್ದೇಶವಿಲ್ಲದೇ ಅಂಡಲೆಯುತ್ತಾ ಇರುವದೋ ಅದು ಒಳ್ಳೇ ಕೃತಿಯಲ್ಲ: ಸಂವೇದನಾತೀತ (Super Sensuous) ಸತ್ಯದ ಅನ್ವೇಷಣೆಯಲ್ಲಿ ಗಂಭೀರವಾಗಿ ತೊಡಗಿಸಿಕೊಂಡ ಕೃತಿ ಉಚ್ಚಮಟ್ಟದ ಕೃತಿ ಎನ್ನಬೇಕು. ಪರಿಣಾಮವಾಗಿ ಉಚ್ಚತರ ವಾಸ್ತವದ ಒಂದು ಕಲ್ಪನೆಯನ್ನು ನಿರ್ಮಿಸುವದು. ಇದು ವಿಸ್ತರಿಸುವ ಅನುಭಾವಕ್ಕಿಂತ ಎಷ್ಟೋ ಮಿಗಿಲಾದದ್ದು. ಅದರಲ್ಲಿ ನಿಯಂತ್ರಿತ ಹಾಗೂ ಮಾನವೀಕೃತ ತೀವ್ರತೆ ಇರುವದು. ನಮ್ಮ ಇಂದಿನ ಸಾಹಿತ್ಯದ ಹಾಗೂ ಜೀವನದ ಪ್ರಯೋಗಗಳು ಈ ದೃಷ್ಟಿಯ ಅಭಾವದಿಂದ ಕುಸಿದು ಹೋಗುವ ಗಂಡಾಂತರದಲ್ಲಿವೆ.

ಇದು ಬ್ಯಾಬಿಟ್ ಇವರ ಮಂಡನೆ. ಇನ್ನು ಧರ್ಮರೂಢ ಮಾನವತಾವಾದಿಯ ವಾದದ ಅಂಶಗಳನ್ನು ನೋಡೋಣ. ಇದರ ಪ್ರಮುಖ ವಕ್ತಾರ ಟಿ. ಎಸ್. ಎಲಿಯಟ್.

ಅವು ಹೀಗಿವೆ:

ಸಾಹಿತ್ಯ ವಿಮರ್ಶೆ ಪೂರ್ಣವಾಗಬೇಕಾದರೆ ಅದು ಖಚಿತವಾದ ನೈತಿಕ ಹಾಗೂ ಧಾರ್ಮಿಕ ನೆಲೆಯಿಂದ ಆಗಬೇಕು. ಭಿನ್ನಾಭಿಪ್ರಾಯ ವಿಪುಲವಾಗಿರುವಂಥ ಇಂದಿನ ಯುಗದಲ್ಲಿ ಈ ಕಲ್ಪನಾಮಯ ಕೃತಿಗಳನ್ನು ನೈತಿಕ ದೃಷ್ಟಿಕೋನದಿಂದ ಪರಿಶೀಲಿಸುವ ಅಗತ್ಯ ಹೆಚ್ಚೇ ಇದೆ. ಸಾಹಿತ್ಯದ ಶ್ರೇಷ್ಠತ್ವ ಬರೇ ಸಾಹಿತ್ಯಕ ಅಂಶಗಳಿಂದಲೇ ಅಳೆಯಲಾಗುವದಿಲ್ಲ. ಸಾಹಿತ್ಯದ ಮೌಲ್ಯ ಇಂದೂ ಮುಂದೂ ನೈತಿಕ ಪ್ರಮಾಣಕಗಳ ಮೇಲೇ ನಿರ್ಧರಿಸಲಾಗುವದು. ಪ್ರತಿ ಪೀಳಿಗೆ ತಾವು ಒಪ್ಪಿಕೊಂಡ ನೈತಿಕ ಮೌಲ್ಯ ಪ್ರಮಾಣಕಗಳ ಆಧಾರದ ಮೇಲೆ ಈ ಮಾಪನ ಮಾಡಬೇಕು, ಬಿಡೆಗೆ ಅವು ತಮ್ಮ ಆಚರಣೆಯಲ್ಲಿ ಅನುಸರಿಸಲಿ ಅನುಸರಿಸದೇ ಇರಲಿ. ಈ ಪ್ರಮಾಣಕ ಬವ

ಸಣೆಗೆ ಹೊಂದಿಕೊಳ್ಳುವದೆಂದರೆ ಮಾನವನ ಪೂರ್ಣತೆಯ ಒಂದು ನಿದರ್ಶನ ನ್ನುತ್ತಾರೆ ಜನ ; ಆದರೆ ಅದು ಯಾವ ಅಭಪ್ರ ತಳಹದಿಯ ಮೇಲೆ ಇಂಥ ನೈತಿ ತೆ ಇವೆ ಎಂಬುವದನ್ನು ತಿಳಿಯಲಾರರು. ಸಾಹಿತ್ಯ ಮತ್ತು ಧರ್ಮದ ಸಾಮಾನ್ಯ ಲೆ ಎಂದರೆ ವರ್ತನ; ಎರಡೂ ವರ್ತನವನ್ನು ಪ್ರಭಾವಿಸಬಲ್ಲವು. ಇಂದಿನ ಎಲ್ಲ ಸಾಹಿತ್ಯ ಧರ್ಮನಿರಪೇಕ್ಷತೆಯಿಂದ ಹಾಳಾಗಿದೆ: ಅದಕ್ಕೆ ಪ್ರಾಕೃತಿಕ ಮೇಲಿನ ಅತಿ ಪ್ರಾಕೃತಿಕದ ಅಗ್ರಗಣ್ಯತೆ ಕಂಡು ಬರುವದಿಲ್ಲ. ಯಾವದನ್ನು ಅಪೇಕ್ಷಿಸುತ್ತೇವೆಯೋ ಮತ್ತು ಯಾವದು ಅಪೇಕ್ಷಣೀಯವೋ, ಯಾವದು ಸ್ಥಿತಿಯೋ ಮತ್ತು ಯಾವದು ಆಗಬೇಕಾದ ಸ್ಥಿತಿಯೋ, ಇವೆಲ್ಲ ಒಟ್ಟಿಗೇ ಇರುವಂಥ ಸಾಹಿತ್ಯ ಬೇಕು.

೨ ಮಾನಸ ಶಾಸ್ತ್ರೀಯ :

ಈ ಶತಕದಲ್ಲಿ ಬೆಳೆದ ಮಾನಸಶಾಸ್ತ್ರ ಕಲೆಯ ಪ್ರಕ್ರಿಯೆಯ ಬಗ್ಗೆ ಸಾಕಷ್ಟು ಬೆಳಕು ನೀಡಿದೆ. ಮನುಷ್ಯನ ಮಾನಸ ಪ್ರಕೃತಿಯ ಬಗ್ಗೆ ಮಾನಸಶಾಸ್ತ್ರ ಕಂಡುಕೊಂಡ ಘಟಕಗಳು ಯಾವರೀತಿಯಲ್ಲಿ ಸಾಹಿತ್ಯನಿರ್ಮಾಣದಲ್ಲಿ ತೊಡಗಿಕೊಳ್ಳುತ್ತವೆ ಎನ್ನುವದೇ ಇಂದು ಪ್ರತ್ಯೇಕ ಅಧ್ಯಯನದ ಮಾರ್ಗವಾಗಿದೆ. ಆದರೆ ಅದು ಮೌಲ್ಯಮಾಪನಕ್ಕೆ ಪಕ್ಕಾಗುವದೋ ಎಂಬುದು ಚರ್ಚಾಸ್ಪದ. ಸಾಹಿತ್ಯಕೃತಿಯ ಬಗೆಗಿನ ತಿಳಿವಳಿಕೆ ಅದರಿಂದ ವಿಸ್ತರಿಸಬಹುದು ಅಷ್ಟೇ. ಶ್ರೇಷ್ಠತ್ವದ ಮಾಪನಕ್ಕೆ ಅದು ಉಪಯುಕ್ತವಾಗುವದಿಲ್ಲ.

ಈ ಅಧ್ಯಯನದಲ್ಲಿಯ ಮೂರು ಪ್ರಮುಖ ಪ್ರಭಾವಗಳೆಂದರೆ (೧) ಫ್ರಾಯಿಡ್ (೨) ಎಡ್ಲರ್ (೩) ಯುಂಗ್. ಫ್ರಾಯಿಡ್ ಸ್ವಪ್ನಗಳ ಅರ್ಥಗ್ರಹಣದ ಮೇಲಿನ ಸಿದ್ಧಾಂತ ಪುಸ್ತಕ ರೂಪದಲ್ಲಿ ಬರುವತನಕ ಸಾಹಿತ್ಯದ ಪ್ರಕೃತಿವಾದ (Naturalism) ಮನುಷ್ಯನನ್ನು ಪರಿಸರದ ಅಥವಾ ಅವನ ಪ್ರಕೃತಿಯ ಬಲಿ ಎಂದೇ ತೋರಿಸುತ್ತಿತ್ತು. ಈಗ ಅದಕ್ಕೆ ಫ್ರಾಯಿಡ್‌ನ ವೈಜ್ಞಾನಿಕ ಆಧಾರ ಸಿಕ್ಕಿತು. ಮನುಷ್ಯ ತನ್ನ ಪ್ರಕೃತಿಯ ಕಾಮುಪಾಂಭಾಯುಕ್ತ ಅಗತ್ಯಗಳಿಗೆ ಅಥವಾ ಸಮಾಜದ ನಿರೋಧ (Repression) ಗಳಿಗೆ ಬಲಿಯಾಗುತ್ತಾನೆ; ಮನುಷ್ಯ ಹುಟ್ಟಾ ಕೆಟ್ಟವನಲ್ಲದಿದ್ದರೂ ಅವನು ರೋಗಿ. ಇದರ ವಿಪರೀತ ಬಳಕೆ ರೋಮ್ಯಾಂಟಿಕ್‌ರೂ ವಾಸ್ತವವಾದಿಗಳೂ ಮಾಡಿ ಅದನ್ನೇ ನಾಟ್ಯೀಕರಿಸಿ ಕೃತಿ ರಚಿಸಿದರು. ಅದರಂತೆ ಆಲ್ಫ್ರೆಡ್ ಎಡ್ಲರ್‌ನ ಕೀಳರಿಮೆ (Inferiority Complex) ಸಿದ್ಧಾಂತ ಹಾಗೂ ಕಾರ್ಲ ಯುಂಗ್‌ನ ಸಾಮೂಹಿಕ ಸುಪ್ತಪ್ರಜ್ಞೆ (Collective Unconscious) ಯ ಸಿದ್ಧಾಂತ ಇವು ಅನುಭವದ ತಿಳಿವಳಿಕೆಯನ್ನು ವಿಸ್ತರಿಸಿದವು. ಯುಂಗ್‌ನ ಸಿದ್ಧಾಂತವಂತೂ ಮೂಲರೂಪ (Archetypal) ದ ಅಧ್ಯಯನಕ್ಕೆ ಎಡೆಮಾಡಿಕೊಟ್ಟಿದೆ. ಇದೇ ಪ್ರತ್ಯೇಕ ವಿಭಾಗವಾಗಿ ಲೇಖನದ ಕೊನೆಯಲ್ಲಿದೆ.

ಫ್ರಾಯಿಡ್‌ನ ಸಿದ್ಧಾಂತದಿಂದ ೧೯ನೇ ಶತಕದವರೆಗಿದ್ದ ಸಭ್ಯತೆ ಕುಲೀನತೆ ಪರಿಶುದ್ಧತೆ ಮಿತಭಾಷಿತ್ವ ಇತ್ಯಾದಿ ಸದ್ಗುಣಗಳ ತಳದ ಅನಾರೋಗ್ಯಕರ ನಿರೋಧಗಳೇ ಕಂಡುಬಂದು ಅವುಗಳ ಹಿಂದಿನ ಪಾವಿತ್ರ್ಯ ಅಥವಾ ದೈವತ್ವದ ಛಾಯೆ ನಷ್ಟವಾಯಿತು. ಒಂದು ಕಡೆ ನಡೆದ ನವಮಾನವತಾವಾದಿಗಳ ಮೌಲ್ಯಪ್ರತಿಪಾದನೆಗೆ ಗದೆ ಬಿದ್ದಂತಾಯಿತು. ಈ ಹಿನ್ನೆಲೆಯಲ್ಲಿ ಮಾನಸಶಾಸ್ತ್ರದ ಸಿದ್ಧಾಂತಗಳು ಬೆಳಕಿಗೆ ಬಂದು ಸಾಹಿತ್ಯದಲ್ಲಿ ಅವುಗಳ ಬಳಕೆಯಾಗಬೇಕೆಂಬ ಉತ್ಸಾಹದ ಬೇಡಿಕೆ ಬಂತು. ಇದು ಮೂರು ಸ್ತರಗಳಲ್ಲಿ ಬೆಳಕು ಚೆಲ್ಲಲು ಸಹಾಯಕವಾಯಿತು.

(೧) ಸೃಷ್ಟಿ ಕ್ರಿಯೆಯನ್ನು ಚರ್ಚಿಸಲು ಖಚಿತಭಾಷೆ ಸಿಕ್ಕಿತು. ರಿಚರ್ಡ್ಸ್‌ನ ಪ್ರಕಾರ, ಕಲಾಕೃತಿಯ ಪ್ರೇರಣೆಯಿಂದ ಓದುಗರಲ್ಲಿ ವಿಶಿಷ್ಟ ಹಾಗೂ ಸುಸಂಗತಾ ಸ್ಪಂದನ ನಿರ್ಮಿತವಾಗುತ್ತದೆ; ಅದು ಕೃತಿಕಾರ ಮತ್ತು ಓದುಗರ ಸುಪ್ತಪ್ರಜ್ಞೆಯ ಸಂಬಂಧವ ಮೇಲೆ ಆಧಾರಿತವಾದದ್ದು. ಇದು ಕೃತಿಯ ವಿಶ್ಲೇಷಣೆಗೆ ಮಾರ್ಗದರ್ಶಕವಾಗಬಹುದು.

(೨) ಕಲೆ ಮತ್ತು ಕಲಾವಂತ ಇವು ಸ್ವಪ್ನ ಮತ್ತು ಮನೋರೋಗಿಯಂತಿವೆ. ಕೃತಿ ನಿರ್ಮಾಣದಲ್ಲಿ ಕೃತಿಕಾರ ತನ್ನ ರೋಗವನ್ನು ಕಳಚಿಕೊಳ್ಳುತ್ತಾನೆ. ವಿಮರ್ಶಕ ಮನೋರೋಗದ ತಜ್ಞನಾಗಿ ಕೃತಿಯನ್ನು ವ್ಯಾಧಿಯ ಚಿಹ್ನವಾಗಿ ಕಾಣುತ್ತಾನೆ. ಕೃತಿಯಲ್ಲಿ ಕಲಾವಂತನ ಸುಪ್ತಪ್ರಜ್ಞೆಯ ನಿರೋಧ ಹಾಗೂ ಚಾಲನಶಕ್ತಿ ಕಾಣುವದೇ ವಿಮರ್ಶಕನ ಕಾರ್ಯ. ಅದಕ್ಕಾಗಿ ಸಾಹಿತಿಯ ಜೀವನವಿವರಗಳೂ ಅವಶ್ಯಕವಾಗಬಹುದು.

೩) ಪಾತ್ರಗಳ ವರ್ತನ ತಿಳಿದುಕೊಳ್ಳಲು ಅನುಕೂಲವಾಗುತ್ತದೆ. ಈ ಪಾತ್ರಗಳಲ್ಲಿಯ ಸುಪ್ತಪ್ರಜ್ಞೆಯ ಅಭಿಪ್ರೇರಣೆ (Motivation) ಗಳ ಪ್ರರೂಪಗಳನ್ನು ಅರಸುತ್ತಾನೆ. ಅನಂತರ ಅವರ ಮುಖಾಂತರ ಅವುಗಳ ವರ್ತನ ಕ್ರಿಯೆ ಅರ್ಥೈಸಿಕೊಳ್ಳಲು ಹವಣಿಸುತ್ತಾನೆ.

ಈ ಮೂರೂ ವಿಧಾನಗಳಿಗೆ ಮಾನಸಶಾಸ್ತ್ರ ತುಂಬ ಸಹಾಯಕವಾಗುತ್ತದೆ. ಇವು ಸಾಕಷ್ಟು ಸಮಸ್ಯೆಗಳನ್ನು ಒಡ್ಡುತ್ತವೆ ಆದ್ದರಿಂದ ವಿರೋಧಗಳು ಇವೆ. ಅವನ್ನು ಹೀಗೆ ಸಂಕ್ಷಿಪ್ತವಾಗಿ ಸಂಗ್ರಹಿಸಬಹುದು:

(ಅ) ಕಲಾಕೃತಿ ಸ್ವಪ್ನಕ್ಕಿಂತ ತೀರ ಭಿನ್ನ. ಕನಸು ಕಾಣುವವ ನಿದ್ರಾವಸ್ಥೆಯಲ್ಲಿದ್ದು ಜಾಗ್ರತ ಪ್ರಜ್ಞೆಯ ಮೇಲೆ ಹಿಡಿತ ಇರಿಸಿಕೊಳ್ಳುವದಿಲ್ಲ. ಆದರೆ ಕೃತಿಕಾರ ತನ್ನ ಕೃತಿಯನ್ನು ಸೃಷ್ಟಿಸಿದಾಗ ಅದರ ಮೇಲೆ ಪೂರ್ಣ ಹಿಡಿತ ಇಟ್ಟುಕೊಂಡೇ

ಮಾಡುತ್ತಾನೆ. ಸ್ವಪ್ನ ಒತ್ತಾಯದ ತಪ್ಪೊಪ್ಪಿಗೆಯಾಗಬಹುದು ಆದರೆ ಕಲಾಕೃತಿ ಪ್ರಶಾಂತ ಸ್ಥಿಮಿತತೆಯಲ್ಲಿಯ ಅಭಿವ್ಯಕ್ತಿ.

(ಬ) ಈ ಶಾಸ್ತ್ರದಲ್ಲಿ ಮತಭಿನ್ನತೆ ಇರುವದರಿಂದ ಯಾವದೋ ಒಂದನ್ನು ಅನುಸರಿಸಿ ಸರಳೀಕರಣ ಮಾಡುವ ಸಾಧ್ಯತೆ ಇದೆ.

ಈ ವಿಧಾನದ ಪ್ರಮುಖ ವಾದ ಹೀಗಿದೆ:

(೧) ಸಾಹಿತಿ ತನ್ನ ಭಾವಸ್ಥಿತಿ (Moods) ಗಳೊಂದಿಗೆ ವಸ್ತುವಿನಲ್ಲಿ ವ್ಯಷ್ಟೀಕೃತ (Individuated) ನಾಗುತ್ತಾನೆ ಮತ್ತು ವಸ್ತುವಿನ ಸಂಘಟನೆಗಾಗಿ ಆಕೃತಿಯಲ್ಲಿ (Form) ಭಾವನೆಯೊಂದಿಗೆ ವ್ಯಷ್ಟೀಕೃತನಾಗುತ್ತಾನೆ. ಸಾಹಿತಿಯು ಭಾವಸ್ಥಿತಿಯ ಪ್ರಕಾರ ವಿವರಗಳನ್ನು ಅವನು ಚುನಾಯಿಸುತ್ತಾನೆ. ಅವೆಲ್ಲ ಒಂದು ಪ್ರತ್ಯೇಕ ಕೃತಿಯಲ್ಲಿ ವ್ಯಷ್ಟೀಕೃತವಾಗುತ್ತವೆ. ಅವನ್ನು ಬಾಹ್ಯೀಕರಿಸುವಾಗ ವಿವರಗಳ ಸಂಘಟನೆಯಲ್ಲಿ ಒಂದು ಆಕಾರ ಕಾಣುತ್ತಾನೆ. ಹೀಗೆ ಒಂದು ಭಾವನಿಕ ಆಕಾರ ಒಂದು ರಚನಾತ್ಮಕ ಆಕಾರಗಳಲ್ಲಿ ಸಾಹಿತಿ ವ್ಯಷ್ಟೀಕೃತನಾಗುತ್ತಾನೆ.

(೨ ಅ) ಮಾನವೀಯ ಕ್ರಿಯೆಗಳಲ್ಲಿ ಆತ್ಮಾಭಿವ್ಯಕ್ತಿಯ ನಿದರ್ಶನವಿದೆ. ಇವೆಲ್ಲ ಇಡೀ ಜನಾಂಗದ ಸ್ತರದಲ್ಲಿ ನಡೆಯುವಂಥವು. ಉದಾ: ಸಂಕಟದಲ್ಲಿ ಸ್ವಸಂರಕ್ಷಣೆ, ಕಿಶೋರತ್ವದಿಂದ ಪ್ರೌಢತ್ವದವರೆಗಿನ ಬೆಳವಣಿಗೆ–ಇತ್ಯಾದಿ ಮನುಕುಲಕ್ಕೆಲ್ಲ ಒಂದೇ ರೀತಿಯವು.

(೨ ಬ) ಇದರಲ್ಲೂ ಕೆಲವು ಸ್ವಂತ ವೈಶಿಷ್ಟ್ಯಗಳೂ ಸೇರಬಹುದು. ಎಲ್ಲರೂ ಒಂದೇ ರೀತಿಯಲ್ಲಿ ಪ್ರತಿಕ್ರಿಯೆ ನೀಡುತ್ತಾರೆ ಎಂತಲ್ಲ. ಉದಾ: ತಾರುಣ್ಯದ ಬೆಳವಣಿಗೆಯಲ್ಲಿ ಕೆಲವರಲ್ಲಿ ಧಾರ್ಮಿಕ ಪ್ರಜ್ಞೆ ಬೆಳೆದರೆ ಕೆಲವರಲ್ಲಿ ಕ್ರೌರ್ಯ ಭಾವುಕತ್ವ ಅಥವಾ ಮೌಲ್ಯದ್ವೇಷ ಬೆಳೆಯಬಹುದು. ಸ್ವಸಂರಕ್ಷಣೆಗಾಗಿ ಕೆಲವರು ಮಾತಿನಲ್ಲಿ ಕೆಲವರು ಕಾನೂನಿನಲ್ಲಿ ಕೆಲವರು ಆಯುಧಗಳಲ್ಲಿ ಹೀಗೆ ಪ್ರತ್ಯೇಕವಾಗಿ ತಮ್ಮ ಪ್ರತಿಕ್ರಿಯೆ ವ್ಯಕ್ತಗೊಳಿಸಬಹುದು.

೩) ಆತ್ಮಾಭಿವ್ಯಕ್ತಿ ಎಂದರೆ ಭಾವನೆಯ ನೇರ ಹೇಳಿಕೆಯಲ್ಲ, ಅದನ್ನು ಮೂಡಿಸುವದು. ಸಂವಹನ ಪರಿಣಾಮಕಾರಿಯಾಗಬೇಕೆಂಬುದೇ ಕೃತಿಕಾರನ ಗುರಿ. ಕಲೆಯಲ್ಲಿ ರೂಪಿಸಿಕೊಳ್ಳುವಾಗ ಮೂಲಭಾವನೆಗಳು ರೂಪಾಂತರ ಆಗುತ್ತವೆ. ಕಲೆ ಒಂದು ರೂಪಾಂತರ ಕ್ರಿಯೆ. ಮೂಲ ಭಾವನೆ ಕುದಿತದಲ್ಲಿದ್ದಾಗ ಕೃತಿಕಾರ ಅದರ ರೂಪಾಂತರ ಪ್ರತಿಕ್ರಿಯೆಯು ತಾಂತ್ರಿಕತೆಯಲ್ಲಿ ತೊಡಗಿರುತ್ತಾನೆ. ಕೃತಿಕಾರ ಒಂದು ಭಾವನೆ

ಯೊಂದಿಗೆ ಪ್ರಾರಂಭಿಸಿ ಅವನ್ನು ಒಂದು ತಾಂತ್ರಿಕತೆಯಲ್ಲಿ ರೂಪಾಂತರಿಸುವಾಗ ಅದೇ ಭಾವನೆ ಇತರರಲ್ಲಿ ಮೂಡುವಂತೆ ಮಾಡುತ್ತಾನೆ. ತನ್ನ ಭಾವನೆಯಲ್ಲಿಯ ಆಸ್ಥೆ ಅವನ್ನು ಮೂಡಿಸುವಲ್ಲಿ ಕೂಡಿಹೋಗುತ್ತದೆ. ಹೀಗೆ ಮಾಡುವಾಗ ಒಂದು ಭಾವಸ್ಥಿತಿಯನ್ನು ಒಂದು ಪ್ರತೀಕವಾಗಿ ಮಾರ್ಪಡಿಸುತ್ತಾನೆ.

ಈ ವಿಧಾನಕ್ಕೆ ಅನೇಕ ಪುರಸ್ಕರ್ತರುಗಳು ಇದ್ದಾರೆ. ಅವರಲ್ಲಿ ಕಾನ್ರಾಡ್ ಐಕೆನ್, ಮಾರ್ಕ್ಸ ಈಸ್ಟಮನ್, ಫ್ಲ್ಯಾನ್ಡರ್ಲ್, ರಾಬರ್ಟ ಗ್ರೇವ್ಸ್, ಹರ್ಬರ್ಟ ರೀಡ ಪ್ರಮುಖರು. ಅಲ್ಲದೇ ಈ ವಿಧಾನದಿಂದ ಪಾಶ್ಚಾತ್ಯಪುರಾಣ ಕಲ್ಪನೆಗಳ ಅಧ್ಯಯನವೂ ಹಾಗೂ ನಂತರದ ಸಾಹಿತ್ಯದಲ್ಲಿಯ ಪಾತ್ರವರ್ತನದ ಅಧ್ಯಯನವೂ ಸಾಕಷ್ಟು ಪುಷ್ಟವಾಗಿ ಬೆಳೆಯಿತು. ಕಾರ್ಲೈಲ್, ಮಾನ್, ಶೆರವುಡ್ ಎಂಡರಸನ್, ಜಾಯ್ಸ್, ಕ್ಯಾಥರೀನ್ ಮ್ಯಾನ್ಸಫೀಲ್ಡ, ಗ್ರಾಹಾಮ ಗ್ರೀನ್, ಡಿಲಾನ್ ಥಾಮಸ್ ಮೊದಲಾದವರ ಕೃತಿಯಲ್ಲಿ ಅದರ ಅಂಶಗಳನ್ನು ಕಾಣುವ ಯತ್ನ ಮಾಡಿದ್ದಾರೆ. ಆದರೆ ಈ ಸಿದ್ಧಾಂತದ ಆಧಾರದ ಮೇಲೇ ಪಾತ್ರ ರಚನೆ ಮಾಡುವದು ಉತ್ತಮ ಸಾಹಿತ್ಯವಾಗುವದಿಲ್ಲ.

೩ ಸಮಾಜ ಶಾಸ್ತ್ರೀಯ :

ಸಮಾಜಕ್ಕೂ ಕಲೆಗೂ ನಿಕಟ ಸಂಬಂಧವಿದೆ ಎಂಬುದು ಈ ಧೋರಣೆಯವರ ಮತ. ಕಲೆಗೆ ಸ್ಪಂದಿಸುವದು ಹೆಚ್ಚು ಆಳವಾಗಬೇಕಾದರೆ ಈ ಸಂಬಂಧಗಳನ್ನು ಪರಿಶೀಲಿಸಬೇಕಾಗುತ್ತದೆ. ಸಾಹಿತ್ಯಕೃತಿ ಕಾಲದೇಶಗಳ ಪರಿಧಿಯಲ್ಲಿ ರೂಢವಾದ ಸಾಹಿತಿಯ ಕಲಾಭಿವ್ಯಕ್ತಿ: ಮತ್ತದು ಸಮಾಜಾಭಿಮುಖಿಯಾಗಿರುತ್ತದೆ. ಒಬ್ಬ ಸಾಹಿತಿಯ ಸಮಕಾಲೀನ ಸಾಮಾಜಿಕ ಪರಿಸರ ಮತ್ತದಕ್ಕೆ ಅವನ ಸ್ಪಂದನ ಇವನ್ನು ಅಭ್ಯಸಿಸುವದು ಮುಖ್ಯವಾಗುತ್ತದೆ. ಎಡ್ಮಂಡ್ ವಿಲ್ಸನ್ ಮತ್ತು ಟೇಯ್ನ್ ಇವರು ಪ್ರಮುಖ ಪುರಸ್ಕರ್ತರುಗಳಾದರು. ಅನಂತರ ವಿಷ್ಟೋ ವಿದ್ವಾಂಸರು ಈ ವಾದದ ಪ್ರಚಾರಕರಾದರು. ಟೇಯ್ನನಂತೂ ಸಾಹಿತ್ಯ ಕ್ಷಣ ಜನಾಂಗ ಸಾಮಾಜಿಕ ಪರಿಸರದ ಪರಿಣಾಮ ಎನ್ನುತ್ತಾನೆ. ಈ ಸಮಾಜಶಾಸ್ತ್ರೀಯ ಧೋರಣೆಯಲ್ಲಿ ಒಂದು ವಿಪರೀತ ಮಾರ್ಗ ಎಂದರೆ ಮಾರ್ಕ್ಸಿಸ್ಟ ಮಾರ್ಗ. ವಾಸ್ತವವಾದಿಗಳ ಆಂದೋಲನದಲ್ಲಿ ಕಲೆ ಮತ್ತು ಸಾಮಾಜಿಕ ಮೌಲ್ಯಗಳ ಸಂಬಂಧ ಆಂತರಿಕವಾದದ್ದೆಂಬ ನಂಬಿಕೆ ಇದೆ. ಸಮಾಜಸ್ಥಿತಿಯ ಪರಿಣಾಮ ಸಾಹಿತಿಯ ಮೇಲೆ ಆಂತರಿಕವಾಗಿ ಆಗುತ್ತದೆಂದು ಇವರು ಧೃಡವಾಗಿ ನಂಬುತ್ತಾರೆ. ಅಮೇರಿಕಾದ ಹಲವಾರು ವಿಮರ್ಶಕರು ಇದಕ್ಕೆ ಅನುಯಾಯಿಗಳಾಗಿದ್ದಾರೆ. ಸಾಹಿತ್ಯ ಸಮಾಜಸ್ಥಿತಿಯ ಕನ್ನಡಿಯಂತಿದೆ ಎಂಬುದು ಇವರ ವಿಚಾರ. ಇಂಗ್ಲಂಡಿನಲ್ಲಿ ಮೂವತ್ತರ ದಶಕದಲ್ಲಿ ಆಡೆನ್, ಡೇ

ಲ್ಯೂಯಿಸ್, ಮೊದಲಾದ ಸುಪ್ರಸಿದ್ಧ ಸಾಹಿತಿಗಳು ಎಡಪಂಥೀಯ ಧೋರಣೆಯನ್ನು ಅನುಸರಿಸಿ ಬರೆದರು. ಆದರೆ ಆ ಮಾರ್ಗ ತೀರ ಇಕ್ಕಟ್ಟಿನದಾಗಿ ಅನಂತರ ಅವರೇ ಈ ಎಡಪಂಥೀಯ ಮಾರ್ಗವನ್ನು ನಿರಾಕರಿಸಿದರು. ಆದರೂ ಶ್ರೇಷ್ಠ ವಿಮರ್ಶಕರು ಸಾಹಿತ್ಯ ಮತ್ತು ಸಮಾಜಕ್ಕಿರುವ ಸಂಬಂಧವನ್ನು ಅದರ ಮಹತ್ವವನ್ನೂ ಅರಿತು ಸಾಮಾಜಿಕ ಸ್ಥಿತ್ಯಂತರಗಳ ವಾತಾವರಣದಲ್ಲಿ ಅದನ್ನು ಅರ್ಥೈಸಿಕೊಳ್ಳುತ್ತಾರೆ. ಮಾರ್ಕ್ಸವಾದದಂತಹ ಪ್ರತ್ಯೇಕ ಸಿದ್ಧಾಂತ ಇರಲಿ ಇಲ್ಲದೇ ಹೋಗಲಿ, ಕಲೆ ಸಾಹಿತಿ ಸಮಾಜ ಇವುಗಳ ನಿಕಟ ಸಂಬಂಧದ ಬಗೆಗಿನ ಧೋರಣೆ ಸಮಾಜಶಾಸ್ತ್ರೀಯ ಪಂಥವಾಗಿ ಪ್ರಬಲ ವಿಮರ್ಶಾವಿಧಾನವಾಗಿ ಉಳಿಯುವದು.

ಇದರ ವಾದ ಹೀಗಿದೆ:

ಸಮಾಜ ತನ್ನ ಕಾರ್ಯಾಗರ ಇಮಾರತು ಪ್ರಾಪಂಚಿಕ ಘನತ್ವದಿಂದ ಜನಮನದ ತಳದಲ್ಲಿ ನಿರಂತರವಾಗಿರುತ್ತದೆ. ಅದು ಪ್ರತಿಮನುಷ್ಯನಲ್ಲಿಯ ಅಜ್ಞಾತ ಸುಪ್ತ ಪ್ರಜ್ಞೆಯ ಬುದ್ಧಿಪ್ರಮಾಣವಲ್ಲದ (Irrational) ಚೇತನದಲ್ಲಿ ದೊಡ್ಡಪ್ರಮಾಣದ ಶಕ್ತಿಸಂಗ್ರಹವಾಗಿರುವದು. ಮಾನವನ ಇಡೀ ಅಸ್ತಿತ್ವದಲ್ಲಿಯ ಒಂದು ಚಂಚಲನಿಧಿಯಾಗಿ ಅವನ ಜಾಗೃತ ಜೀವನ ಕಾಣಿಸಿಕೊಳ್ಳುತ್ತದೆ. ಸಮಾಜ ಜಾಗೃತಾವಸ್ಥೆಯಲ್ಲಿ ಬದಲಾವಣೆಗಳನ್ನು ವಿರೋಧಿಸುತ್ತಲೇ ಇರುವದು ಮತ್ತು ಇಂಥ ಕಲ್ಪಿತ ವಿರೋಧ ಸಾಗುತ್ತಿದ್ದಾಗ್ಯೂ ಈ ಸಾಧಾರಣೀಕರಣಗಳ ತಳದಲ್ಲಿ ಪ್ರಾಪಂಚಿಕ ತಾಂತ್ರಿಕ ನೈಜ ಅಸ್ತಿತ್ವದ ವಿವರಗಳ ಬದಲಾವಣೆಗಳು ಘಟಿಸುತ್ತಲೇ ಇರುತ್ತವೆ. ಇದರಿಂದ ಉದ್ಭವಿಸಿದ ವ್ಯಕ್ತಿತ್ವದಲ್ಲಿಯ ಸಂಘರ್ಷವೇ ಸಮಾಜದ ಚಾಲನಶಕ್ತಿಯಾಗಿ ಕಲಾಕಾರ ಸಾಹಿತಿ ಪ್ರವಾದಿಗಳನ್ನೂ ನರರೋಗಿಗಳನ್ನೂ ಹುಟ್ಟಿಸುತ್ತದೆ. ಜೊತೆಗೆ ಸಕಲ ಅನಿಶ್ಚಿತತೆಗಳು ಬುದ್ಧಿಪ್ರಮಾಣ್ಯರಹಿತತೆಗಳು, ಚಿತ್ತಾವೇಗಗಳು (Impulse) ಥಕ್ಕನುದಯಿಸಿದ ತರ್ಕರಹಿತ ಭಾವನೆಗಳು ಸಕಲ ಆಮೋದಗಳು ಭೀಕರತೆಗಳು ಯಾವವು ಬದುಕನ್ನು ಅದು ಇದ್ದ ಸ್ಥಿತಿಗೆ ತರುತ್ತವೆಯೋ ಅವೆಲ್ಲ ಕೃತಿಕಾರರನ್ನು ಸಮ್ಮೋಹಿತಗೊಳಿಸಿ ನರರೋಗಿಗಳನ್ನು ಜೀವರಿಸುತ್ತವೆ. ಮನುಷ್ಯನ ಪ್ರಜ್ಞೆ ಮತ್ತು ಅವನ ಇರವು ಇವುಗಳಲ್ಲಿಯ ಅಂತರವೇ ಈ ಸುಖದುಃಖದ ಕಾರಣವಾಗಿ ಅದು ಸಮಾಜವನ್ನು ತಟ್ಟುತ್ತ ಬದುಕನ್ನು ಜೀವಂತವಾಗಿಸುತ್ತದೆ. ಮನುಷ್ಯನ ಇರವಿ (being) ನಿಂದ ವಿಚಾರ ಹೊಮ್ಮುತ್ತದೆ: ಸಮಾಜ ಸಂಬಂಧ ಬದಲಾಯಿಸಿ ಮನುಷ್ಯ ತನ್ನ ಪ್ರಜ್ಞೆ ಬದಲಾಯಿಸಿಕೊಳ್ಳಬಲ್ಲ ಮತ್ತು ಈ ಬದಲಾವಣೆ ಸಮಾಜ ಸಂಬಂಧದ ತಳಕ್ಕಿರುವ ನೈಜ ಅಸ್ತಿತ್ವದ ಒತ್ತಡದಿಂದಾಗುತ್ತದೆ. ಇದು ಪ್ರಮುಖ ವಕ್ತಾರರಾದ ಕ್ರಿಸ್ಟೋಫರ್ ಕಾಡ್‌ವೆಲ್ ಇವರ ವಿಚಾರ.

ರಶಿಯಾದಲ್ಲಿ ೧೯ ನೇ ಶತಮಾನದ ಅಂತ್ಯ ಹಾಗೂ ಈ ಶತಕದ ಆದಿಯಲ್ಲಿ ಸಾಮಾಜಿಕ-ವಾಸ್ತವತೆಯ (Socio realistic) ಧೋರಣೆ ಪ್ರಚಾರಕ್ಕೆ ಬಂತು. ಅದಕ್ಕೆ ಸುಪ್ರಸಿದ್ಧ ಚಿಂತಕ ಬೆಲೆನ್ಸ್ಕಿ ಹಾಗೂ ವಿಶ್ವವಿಖ್ಯಾತ ಲಿಯೋ ಟಾಲ್‌ಸ್ಟಾಯ ಇವರು ಪುರಸ್ಕರ್ತರಾದರು. ಪ್ರಕೃತಿವಾದವೂ ಸಮಾಜಾಭಿಮುಖಿಯಾದದ್ದಿತ್ತು. ಕೋಟೆಗಳು ಸರದಾರರು ರಾಜರು ಅತಿರಂಜಿತ ಪ್ರೇಮಕಥೆಗಳು ಇವೆಲ್ಲ ಹಿಂದಿನ ಪಾಳೆಯಗಾರೀ ವ್ಯವಸ್ಥೆಯ ಭ್ರಮಾತ್ಮಕ ಕಲ್ಪನೆಗಳು; ಅವು ಶ್ರಮಿಕ ವರ್ಗದವರ ಬದುಕನ್ನು ಕಂಡಿಲ್ಲ, ಎಂಬುದು ಇವರ ವಾದ. ಪ್ರಕೃತಿವಾದವೂ ಸಮಕಾಲೀನವಾದದ್ದನ್ನು ಸಾಮಾಜಿಕವಾಗಿ ನೀತಿಪರವಾದದ್ದನ್ನು ಕಂಡುಕೊಳ್ಳುತ್ತದೆ. ಬೆಲೆನ್ಸ್ಕಿ ಮತ್ತು ಟಾಲ್‌ಸ್ಟಾಯ್ ಇವರು ಇವಕ್ಕೆ ಸರಿಸಮಾನ ಧೋರಣೆಯನ್ನು ಸಾರಿ, ಅನುಭವಿಕ ವಾಸ್ತವವಾದ ಮತ್ತು ಸಾಮಾಜಿಕ ಪ್ರಸಕ್ತತೆ (Relevance) ಯ ಮೇಲೆ ಹೆಚ್ಚು ಒತ್ತು ಕೊಟ್ಟರು. ಬೆಲೆನ್ಸ್ಕಿ ಪ್ರಕಾರ ಶ್ರೇಷ್ಠ ಸಾಹಿತಿಗಳೆಂದರೆ–ಸಮಾಜ ಮತ್ತು ಉತ್ಕ್ರಾಂತಿ ಗಮನಿಸಿದವರು; ತಮ್ಮ ಕಾಲಖಂಡದ ಅಗತ್ಯಗಳನ್ನು ಅವಲೋಕಿಸಿದವರು: ತಮ್ಮ ಕಾಲಖಂಡದ ಶಕ್ತಿಚೇತನ (Zeitgist) ವ್ಯಕ್ತಗೊಳಿಸಿದವರು; ಸಮಕಾಲೀನರನ್ನು ಪ್ರತಿನಿಧಿಸಿದವರು. ವಿಮರ್ಶೆ ಸಾಮಾಜಿಕ ಅರ್ಥವಂತಿಕೆಯನ್ನು ವಿವರಿಸುವಂತಿರಬೇಕು. ಸಮಾಜ ರಚನೆಯ ಜೀವಂತ ನಿರೂಪಣೆಯಾಗಬೇಕು. ನಿರಂತರ ನೈತಿಕ ಅರ್ಥವಂತಿಕೆ ಇರಬೇಕು. ಟಾಲ್‌ಸ್ಟಾಯನ ಪ್ರಕಾರ ಕಲೆ ಆರೋಗ್ಯಕರವಾದ ಭಾವನಿಕ ಸೋಂಕು (Infection); ಆಯಾ ಕಾಲಖಂಡದ ನೈತಿಕ ಭಾವನೆಗಳನ್ನು ಸಂವಹನ ಮಾಡುವದೇ ಕಲೆಯ ಕಾರ್ಯ. ಪ್ರಗತಿಪರ ಸಮಕಾಲೀನ ಧಾರ್ಮಿಕ ಭಾವನೆಗಳೊಂದಿಗೆ ವಿಶ್ವಬಂಧುತ್ವಕ್ಕೆ ಸಂಬಂಧಿಸಿದಂತಿರಬೇಕು ಕಲೆ. ಗರ್ವ, ಲೈಂಗಿಕ ಒತ್ತಡ, ಗ್ಲಾನಿ ಮುಂತಾದ ದುರ್ಬಲ ಭಾವಗಳು ಉಚ್ಚವರ್ಗದವರ ಸುಖಾಪೇಕ್ಷೆಯ ಸಾಹಿತ್ಯವನ್ನು ಸಮರ್ಥಿಸುತ್ತವೆ: ಬಹುಸಂಖ್ಯಾಕ ಸಾಮಾನ್ಯರಲ್ಲಿ. ಈ ತತ್ವಗಳ ಆಧಾರದ ಮೇಲೆ ಮಧ್ಯಯುಗದ ಆಧುನಿಕ ದೊಡ್ಡ ಸಾಹಿತಿಗಳ ಕೃತಿಗಳನ್ನು ನಿರಾಕರಿಸಿದ. ಅವರಲ್ಲಿ ಮಿಲ್ಟನ್ ಶೇಕ್ಸಪೀಯರ್ ರಂಥ ಶ್ರೇಷ್ಠ ಸಾಹಿತಿಗಳೂ ಇದ್ದಾರೆ. (ನೋಡಿ : History of Literary Crticism : Wimset & Brooks.)

ಡಿ. ಬೋನಾಲ್ಡ ಎಂಬ ಚಿಂತಕರು ಹೀಗೆ ವಿಚಾರ ಮಂಡಿಸಿದ್ದಾರೆ–ಸಾಹಿತಿ ತನ್ನ ಕಾಲದ ಜೀವನವನ್ನು ಸಮಗ್ರತೆಯಲ್ಲಿ ಬಿಂಬಿಸಬೇಕು, ಅವನು ತನ್ನ ಕಾಲಖಂಡ ಹಾಗೂ ಸಮಾಜದ ಪ್ರತಿನಿಧಿಯಾಗಬೇಕು, ಸಮಕಾಲೀನ ಸಾಮಾಜಿಕ ಸಮಸ್ಯೆ ಸನ್ನಿವೇಶಗಳ ಅರಿವು ಇರಬೇಕು. ಸಾಹಿತಿ ಸಮಾಜದಿಂದ ಪ್ರಭಾವಿತನಾಗುತ್ತಾನೆ, ಅಂತೆಯೇ, ಸಮಾಜವನ್ನೂ ಪ್ರಭಾವಿಸಬಲ್ಲ. ಜನರು ಸಾಹಿತ್ಯದ ನಾಯಕ ನಾಯಿಕೆಯರ ಆದರ್ಶಗಳಂತೆ ತಮ್ಮ ಜೀವನ ಪ್ರರೂಪಿಸಿಕೊಳ್ಳಬೇಕು. ಸಾಹಿತ್ಯ

ಸಮಾಜ ಚರಿತ್ರೆಯಾಗಿಯೂ ಉಪಯುಕ್ತವಾಗಬಹುದು. ಸಾಮಾಜಿಕ ಅಭಿವೃತ್ತಿ (Attitudes)ಗಳ ಅಭ್ಯಾಸದಿಂದ ನೈತಿಕ ಹಾಗೂ ಧಾರ್ಮಿಕ ವಿಚಾರಗಳ ಅಭ್ಯಾಸವೂ ಆಗಬಹುದು. ಟೈನನ ಪ್ರಕಾರ ಮಾನವೀಯ ವ್ಯವಹಾರದ ಸ್ತರಗಳಲ್ಲೆಲ್ಲ ಆಂತರಿಕ ಸಂಬಂಧವಿದೆ. ಮಾನವೀಯ ಸೃಷ್ಟಿಯು ವಾತಾವರಣ ಶರೀರಸ್ಥಿತಿ ಮತ್ತು ಸಾಮಾಜಿಕ ಘಟಕಗಳಿಂದ ನಿರ್ಮಿತವಾಗುತ್ತದೆ. ಹೆಗೆಲ್‌ನ 'ಕಾಲಶಕ್ತಿ' ಎಂಬುದು ಇತಿಹಾಸದ ಚಾಲನಶಕ್ತಿಯಾಗಿದೆ. ಪ್ರತಿ ಕಾಲಖಂಡಕ್ಕೆ ಅದರದೇ ಆದ ಚಾಲನ ಶಕ್ತಿ ಇದೆ. ವಿವಿಧ ಸನ್ನಿವೇಶಗಳ ಹಿಂದಿನ ಈ ಚಾಲನಶಕ್ತಿ ಅರಿತುಕೊಳ್ಳುವದು ಚಿಂತನಶೀಲರ ಧರ್ಮವಾಗಬೇಕು. (ನೋಡಿ : Theory of Literature, Waren and Wellek.)

೪ ಆಕೃತಿ ಪ್ರಧಾನ ಮಾರ್ಗ : (Formalistic)

ಯಾವ ಧೋರಣೆಯಾಗಲಿ ಅತಿರೇಕಕ್ಕೆ ಹೋದರೆ ಅದಕ್ಕೆ ಪ್ರತಿಕ್ರಿಯೆ ಬಂದೇ ಬರುತ್ತದೆ. ವಿಕ್ಟೋರಿಯನ್ ನೈತಿಕ ಗಾಂಭೀರ್ಯ ಹಾಗೂ ಬ್ಯಾಬಿಟ್‌ಸ ನೈತಿಕತಾಪ್ರಧಾನ ಧೋರಣೆಗಳು, ಮಾರ್ಕ್ಸವಾದಿಗಳ ಎಡಪಂಥೀಯ ಸಾಮಾಜಿಕ ಮೌಲ್ಯಗಳು ಮಾನಸ ಶಾಸ್ತ್ರೀಯದವರ ಸಾಹಿತಿಯ ನರರೋಗ ಚಿಕಿತ್ಸಾಪರ ವಿಧಾನ, ಸಾಹಿತಿಯ ಚರಿತ್ರೆ ಹಾಗೂ ದೈಹಿಕ ಘಟಕಗಳಲ್ಲಿ ಆಸ್ಥೆ. ಇವೆಲ್ಲವುಗಳ ವಿರುದ್ಧ ಬಂದ ಪ್ರತಿಕ್ರಿಯೆಯೇ ಈ ಆಕೃತಿ ಪ್ರಧಾನ ಧೋರಣೆ. ಕವಿತೆ ಒಂದು ಸೌಂದರ್ಯಾನುಭೂತಿ. ಅದನ್ನು ಸೌಂದರ್ಯಾನುಭೂತಿಯಿಂದಲೇ ಸವಿಯಬೇಕೇ ಹೊರತು ಅದರಲ್ಲಿಯ ಸಾಮಾಜಿಕ ನೈತಿಕ ಧಾರ್ಮಿಕ ಮೌಲ್ಯ ಅಥವಾ ರಾಜಕೀಯ ವಿಚಾರಾಂಶಗಳ ಮೇಲಲ್ಲ. ಇವೆಲ್ಲ ಕವಿತೆಗೆ ಬಾಹ್ಯಾಂಶಗಳು. ಕಲೆ ಕಲೆಯಾಗಿದೆ ತತ್ವಗಳ ಮಂಡನೆಯಲ್ಲ. ಅದಕ್ಕೆ ಅದರದೇ ಆದ ಸ್ವತಂತ್ರ ಅಸ್ತಿತ್ವವಿದೆ. ವಸ್ತು ಮತ್ತು ಆಕೃತಿ ಒಂದರೊಳಗೊಂದು ಬೆರೆತಾಗ ಕವಿತೆಯಾಗುವದು. ಅದು ಇಡೀ ಆಕೃತಿಯಲ್ಲಿಯ ವಿವಿಧ ಅಂಶಗಳ ಆಂತರಿಕ ಸಂಬಂಧದಲ್ಲಿದೆಯೇ ಹೊರತು ಪ್ರತ್ಯೇಕ ಅಂಶಗಳ ಮೇಲಲ್ಲ. ಛಂದಸ್ಸು, ಪ್ರತಿಮೆ, ಭಾಷೆ, ಲಯ ಇತ್ಯಾದಿ ಆಕೃತಿಯ ಅಂಶಗಳೂ ವಿಷಯ, ಧಾಟಿ ಇತ್ಯಾದಿ ವಸ್ತುವಿನ ಅಂಶಗಳೂ ಜೊತೆಯಲ್ಲಿ ಕ್ರಿಯಾಶೀಲವಾದಾಗ ಕವಿತೆಯ ಅರ್ಥವಂತಿಕೆ ಹೊಮ್ಮುವದೇ ಹೊರತು ಪ್ರತ್ಯೇಕವಾಗಿ ಅಲ್ಲ. ಈ ಶತಕದ ಆದಿಯಲ್ಲಿ ಈ ಮಾರ್ಗಾವಲಂಬಿಗಳಾದ ಸಾಹಿತಿ ವಿಮರ್ಶಕರು ದೊಡ್ಡವರನ್ನು ಒಳಗೊಂಡು ಸಾಕಷ್ಟು ಜನ ಇದ್ದರು. ಆದರೂ ಇದಕ್ಕೂ ಮತಭೇದ ಹಾಗೂ ಪ್ರತಿಕ್ರಿಯೆ ಇದ್ದೇ ಇವೆ.

ಅ) ಆಲ್ಫ್ರೆಡ್ ಕಾಝಿನ್ ಪ್ರಕಾರ ಈ ವಿಧಾನದಲ್ಲಿ ಗುಂಪುಗಾರಿಕೆಯ

ಅಧಿಕಾರ ನಡೆಯುವ ಸಾಧ್ಯತೆ ಹೆಚ್ಚು. ಅದೊಂದು ಕ್ಲೀಷೆಯಾಗಿ ಗುಂಪಿಗೆ ಸೇರದಿದ್ದವರ ವಿರುದ್ಧ ಆಯುಧವಾಗುತ್ತದೆ.

ಬ) ಇದರಲ್ಲಿ ಒಂದೊಂದು ಪರಿಕಲ್ಪನೆಯ ಆಧಾರದ ಮೇಲೆ ನಿಷೇಧತ್ವ (Exclusiveness) ಕಾಣಿಸಿಕೊಳ್ಳುವದು. ಬ್ರೂಕ್ಸನ ಪೆರಡಾಕ್ಸ, ಎಂಪ್ಸನ್ನನ ಸಂದಿಗ್ಧತೆಗಳು (Ambiguities). ಟೇಟ್‌ನ ಕರ್ಷಣೆ (Tension) ರ್‍ಯಾನಸಮ್‌ನ ಅಂತರ್‍ರಚನೆ (Texture) ಹೀಗೆ ಒಂದೊಂದು ಪರಿಕಲ್ಪನೆಯೇ ಪ್ರಮುಖವಾಗಿ ಕ್ಲೀಷೆಯಾಗುವದು ಹೆಚ್ಚು. ಆದ್ದರಿಂದ ಲೀವಿಸ್ ಮುಂತಾದವರು ಕವಿತೆಯನ್ನು ಅದರ ಸಮಗ್ರತೆಯೊಂದಿಗೆ ಕಾಣದೇ ಭಾಗಶಃ ಕಾಣುವವರನ್ನು ಖಂಡಿಸುತ್ತಾರೆ.

ಕ) ಆರ್. ಪಿ. ಬ್ಲಾಕ್‌ಮೂರ ಎಂಬ ಸುಪ್ರಸಿದ್ಧ ಸಾಹಿತ್ಯ–ವಿಮರ್ಶಕ ಇನ್ನೊಂದು ತರಹದ ಪ್ರತಿಕ್ರಿಯೆ ತೋರಿಸಿದ್ದಾನೆ. ಈ ವಿಧಾನ ಬರೇ ತಾಂತ್ರಿಕ ಅಂಶಗಳನ್ನಷ್ಟೇ ಪತ್ತಿಹಿಡಿಯುತ್ತವೆ; ಆದಕಾರಣ ಎಲ್ಲ ಪ್ರಕಾರದ ಕವಿತೆಗಳನ್ನು ಸ್ಪರ್ಶಿಸಲಾರದು.

(ಡ) ಪ್ರಬಲವಾದ ಹಾಗೂ ಗಮನೀಯ ಪ್ರತಿಕ್ರಿಯೆ ಎಂದರೆ ಈ ವಿಧಾನ ಮನುಷ್ಯ ಬರೇ ಸೌಂದರ್ಯಾನುಭೂತಿಯ ಜೀವಿ ಎಂದಿಷ್ಟೇ ನಂಬುತ್ತದೆ. ಅವನ ಇತರ ಅನುಭೂತಿಗಳನ್ನೂ ಇದಕ್ಕಿಂತಲೂ ಮಿಗಿಲಾದ ಅನುಭೂತಿಗಳನ್ನೂ ನಿರಾಕರಿಸುತ್ತದೆ. ಸ್ವತಃ ಎಲಿಯಟ್‌ನೇ ಮೊದಲು ಈ ವಿಧಾನದ ಪುರಸ್ಕರ್ತನಾದರೂ ನಂತರ ನೈತಿಕತಾಪ್ರಧಾನ ಧೋರಣೆಗೆ ವಾಲಿದ; ಇದನ್ನು ಈ ಮೊದಲೇ ಹೇಳಿದ್ದಾಗಿದೆ.

ಅಮೇರಿಕಾದ ಚಿಕಾಗೋ ವಿಮರ್ಶಕರು ಈ ವಿಧಾನವನ್ನು ಸಾಹಿತ್ಯದ ಪ್ರತ್ಯೇಕ ಪ್ರಕಾರಕ್ಕೆ (Genres) ಪ್ರತ್ಯೇಕವಾಗಿ ಅನ್ವಯಿಸುವಂತೆ ನೋಡಬೇಕು. ಎಲ್ಲವನ್ನೂ ಒಂದೇ ಅಂಶದಿಂದ ನೋಡಲಾಗದು ಎಂದು ಸಾರಿದ್ದಾರೆ. ಕಾದಂಬರಿ, ನಾಟಕ, ಲಿರಿಕ್, ಮಹಾಕಾವ್ಯ ಇವೆಲ್ಲ ಅವಕ್ಕೇ ಅನ್ವಯಿಸುವಂಥ ಅಂಶಗಳಿಂದ ನೋಡಬೇಕು, ಆ ಸ್ಥಿತಿಯಲ್ಲಿ ಅವೆಷ್ಟು ಸಾಧಿಸಿವೆ ಎಂಬುದು ಮುಖ್ಯ ಎನ್ನುತ್ತಾರೆ. ಹೀಗೆ ನೋಡಿದ ನಂತರ ಈ ಚಿಕಾಗೋ ವಿಮರ್ಶಕರು ಸಾಮಾಜಿಕ, ಇತಿಹಾಸಿಕ, ನೈತಿಕ ನೋಟಗಳನ್ನು ಅಭ್ಯಸಿಸುವವನ್ನು ಮನ್ನಿಸುತ್ತಾರೆ.

ಈ ಆಕೃತಿಪ್ರಧಾನ ಮಾರ್ಗ ಪ್ರಾರಂಭದಲ್ಲಿ ಪಡೆದ ಪ್ರಾಸ್ಯತೆ ಇಂದು ಇದ್ದಂತಿಲ್ಲ. ಸಾಮಾಜಿಕ ನೈತಿಕ ಅಂಶಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಬಂದಿದೆ. ಆದಕಾರಣ ತಂತ್ರದಿಂದಲೇ ಓದುಗನನ್ನು ಸೆರೆಹಿಡಿವ ಆತುರ ಕಡಿಮೆಯಾಗಿ ಕಾವ್ಯ ತನ್ನ ಆಂತರಿಕ ವಕ್ರತೆಯನ್ನು ಬೆಳೆಯಿಸಿಕೊಂಡೂ ಮೇಲ್‌ಸ್ತರದ ತಾಂತ್ರಿಕ ಚಾತುರ್ಯದಿಂದ ಮುಕ್ತವಾಗುತ್ತಿದೆ. ಇದು ಗಮನಿಸಲೇಬೇಕಾದ ಅಂಶ.

೫ ಮೂಲ ರೂಪಾತ್ಮಕ ವಿಧಾನ : (Archetypal)

ಇವಕ್ಕೆ ಗುಣಚಿಹ್ನವಾದಾತ್ಮಕ (Totemistic), ವಿಧ್ಯಾತ್ಮಕ (Ritualistic) ಅಥವಾ ಪುರಾಣಾತ್ಮಕ (Mythological) ವಿಧಾನ ಎಂದೂ ಹೇಳುತ್ತಾರೆ. ಈ ವಿಧಾನದ ತಳಹದಿಯ ನಂಬಿಗೆ ಎಂದರೆ ಮಾನವನ ಸಾಂಸ್ಕೃತಿಕ ಕ್ರಿಯೆಗಳಲ್ಲಿ ಒಂದು ಮೂಲ ರೂಪವಾದ ಪ್ರರೂಪ ಇದ್ದೇ ಇರುತ್ತದೆ. ಅದು ಮಾನವತೆಗೆ ಆಳವಾದ ಅರ್ಥಪೂರ್ಣತೆಯುಮೂ ಆಕರ್ಷಣಶಕ್ತಿಯುಮೂ ಇದ್ದು ನಿರಂತರವಾಗಿ ವ್ಯಕ್ತವಾಗುತ್ತ ಇರುತ್ತದೆ. ಇದರ ವಿಧ್ಯಾತ್ಮಕ ನೋಟವನ್ನು ಸಾಂಸ್ಕೃತಿಕ ಮಾನವಶಾಸ್ತ್ರಜ್ಞ ಫ್ರೇಜರ್ ವಿವರವಾಗಿ ಸಂಕಲನಿಸಿ ವಿಚಾರ ಮಂಡಿಸಿದ್ದಾನೆ; ಕಾರ್ಲ್‌ಯುಂಗ್ ಇವನು ಮಾನವನ ಸುಪ್ತಚೇತನದ ಸಾಮೂಹಿಕ ಪಾತಳಿಯಲ್ಲಿ ಇತಿಹಾಸ ಪೂರ್ವದ ತಿಳಿವಳಿಕೆಯನ್ನು ನಾಗರಿಕ ಮಾನವ ಇಂದೂ ಇಟ್ಟುಕೊಂಡಿದ್ದಾನೆ. ಮತ್ತದನ್ನು ಪುರಾಣಗಳಲ್ಲಿ ವಕ್ರವಾಗಿ ವ್ಯಕ್ತಗೊಳಿಸುತ್ತಾ ಇರುತ್ತಾನೆ. ಈ ವಾದ ಪುರಾಣಗಳ ಸಪ್ರಮಾಣತೆಯನ್ನು ಸಿದ್ಧಗೊಳಿಸುವದಷ್ಟೇ ಅಲ್ಲದೇ ಸಮಾಜದ ಸಾಮೂಹಿಕ ಸ್ಮೃತಿಯಲ್ಲಿ ಅವರ ಜತನವಾಗುತ್ತದೆ ಎಂಬುದನ್ನು ಸಾರುತ್ತದೆ. ಇದು ಆಧುನಿಕ ಸಾಹಿತ್ಯದ ಮೇಲೆ ದಟ್ಟ ಪ್ರಭಾವ ಬೀರಿ ಈ ಶತಕದ ಅತಿರಥರೆಲ್ಲಾ ವಿಧ್ಯಾತ್ಮಕ ಪುರಾಣಾತ್ಮಕ ಅಭಿವ್ಯಕ್ತಿಯಲ್ಲಿ ತೊಡಗಿದರು. ಅವರಲ್ಲಿ ಎಲಿಯಟ್, ಯೇಟ್ಸ್, ಲಾರೆನ್ಸ್, ಜೇಮ್ಸ್‌ಜಾಯ್ಸ್, ರಾಬರ್ಟ್‌ಗ್ರೇವ್ಸ್ ಮೊದಲಾದವರು ಇದ್ದಾರೆ. ಇಂಥ ಕೃತಿಗಳನ್ನು ಅವುಗಳ ಪ್ರತೀಕಾತ್ಮಕ ಅರ್ಥದಲ್ಲಿ ಗ್ರಹಿಸಬೇಕಾಗುತ್ತದೆಯೇ ಹೊರತು ವಾಚ್ಯಾರ್ಥದಲ್ಲಿ ಅಲ್ಲ. ಪುರಾಣಗಳನ್ನು ವಾಚ್ಯಾರ್ಥದಲ್ಲಿ ಗ್ರಹಿಸಿ ಖಂಡಿಸುವ ಪ್ರವಾದ ಇಂದೂ ಆಗುತ್ತಿರುವದು ವಿಷಾದನೀಯ. ಅವು ವಿಶಿಷ್ಟ ಮೂಲಕಲ್ಪನೆಯ ರೂಪಾಂತರಿತ ಚಿತ್ರಗಳು ಎಂಬುದನ್ನು ತಿಳಿಯದೇ ಹೋದರೆ ಸಾಕಷ್ಟು ಅನರ್ಥಗಳಾಗುತ್ತವೆ. ಈ ಚಿತ್ರಗಳ ಪ್ರತೀಕಾತ್ಮಕ ಅರ್ಥದಲ್ಲೇ ಮೂಲ ಕಲ್ಪನೆಗಳನ್ನು ಗ್ರಹಿಸಬೇಕಾದದ್ದನ್ನು ಮರೆಯಬಾರದು. ಇನ್ನು ಮೂಲರೂಪಾತ್ಮಕ ವಿಧಾನದಲ್ಲೂ ವಿವಿಧ ದೃಷ್ಟಿಕೋನಗಳಿವೆ. ಫ್ರಾಯಿಡ್‌ನ ಸಿದ್ಧಾಂತದವರು ಈ ನಿಷೇಧ (Taboo) ಗಳು ನರರೋಗದ ಚಿಹ್ನೆಗಳೆಂದೇ ಭಾವಿಸಿದರು. ಯುಂಗ್‌ನ ಅನುಯಾಯಿಗಳು ಇದು ಜನಾಂಗದ ಜೀವಸತ್ವಾತ್ಮಕ ಪ್ರರೂಪಗಳು, ವ್ಯಕ್ತಿ ಅದನ್ನು ಪುನರುಚ್ಚರಿಸಿದಾಗ ಈ ಜನಾಂಗ ಪ್ರಜ್ಞೆಯ ಪಾತಳಿಯಲ್ಲಿ ಕ್ರಿಯಾಶೀಲನಾಗುತ್ತಾನೆಯೇ ವಿನಃ ಅದೊಂದು ನರರೋಗವಲ್ಲ. ಎರಿಕ್ ಫ್ರಾಂ ಇವರು ಅದು ತನ್ನಿಂದ ತನಗೇ ಬಂದ ಸಂದೇಶ, ಅಂತರಂಗದ ಘಟನೆಯನ್ನು ಬಹಿರಂಗದ ಘಟನೆಯಂತೇ ತಿಳಿಕೊಳ್ಳುವ ಗೂಢಭಾಷೆ. ಈ ದೃಷ್ಟಿಕೋನಗಳಿಂದ ವಿಮರ್ಶಕ ಈ ಎಲ್ಲ ಸತ್ಯಗಳನ್ನು ಅರಸುತ್ತಾನೆ, ಗ್ರಹಿಸುವ ಯತ್ನ ಮಾಡುತ್ತಾನೆ. ಈ ಪುರಾಣಗುಣಗಳ ಮೂಲಭೂತ ಸಾಂಸ್ಕೃತಿಕ ಪ್ರರೂಪಗಳನ್ನು ಅವುಗಳ ಆಯಾ ಸಂಸ್ಕೃತಿಯ ನಿರಂತರ

ತೆಯಲ್ಲಿ ಕಂಡುಕೊಂಡರೆ ಮತ್ತೆ ಹಳೇ ಪುರಾಣಗಳಿಗೆ ಹೋಗಬೇಕಾದದ್ದು ಮುಖ್ಯವಲ್ಲ ಎಂಬ ಒಂದು ವಿಚಾರವೂ ಇದೆ.

ಈ ವಿಧಾನದಲ್ಲಿ ಉಳಿದ ವಿಧಾನಗಳ ಅಂಶಗಳೂ ರೂಢವಾಗಿವೆ.

ಅ) ಆಕೃತಿಪ್ರಧಾನ ವಿಧಾನದಲ್ಲಿಯಂತೆ ಕೃತಿಯು ಒತ್ತಾದ ಅಧ್ಯಯನಕ್ಕೆ ಅನುವು ಮಾಡಿಕೊಡುತ್ತದೆ.

ಬ) ಸೌಂದರ್ಯಾನುಭೂತಿಗಿಂತ ಮಾನವತಾವಾದೀ ಕಾಳಜಿ ಹೆಚ್ಚು.

ಕ) ಕಲೆ ಮತ್ತು ಓದುಗರಲ್ಲಿಯ ಸಂಬಂಧಗಳಿಗೆ ಪ್ರಾಧಾನ್ಯತೆ.

ಡ) ಸಮಾಜಶಾಸ್ತ್ರೀಯ ಅಂಶ ಈ ವಿಧಾನದ ಜನಾಂಗದ ಸಾಂಸ್ಕೃತಿಕ ಮೂಲಭೂತ ಅಂಶದ ಅಧ್ಯಯನದಲ್ಲಿದೆ.

ಇ) ಅನ್ವೇಷಣೆಯಲ್ಲಿ ಐತಿಹಾಸಿಕ ದೃಷ್ಟಿ ಪ್ರಧಾನವಾದರೆ ಅದರ ನಿರಂತರತೆಯಲ್ಲಿ ಇತಿಹಾಸಾತೀತ ದೃಷ್ಟಿ ಪ್ರಧಾನವಾಗುತ್ತವೆ.

ಹೀಗೆ ಈ ಮೊದಲು ಹೇಳಿದ ಎಲ್ಲ ವಿಧಾನಗಳ ಕೆಲವು ಅಂಶಗಳನ್ನು ಈ ಮಾರ್ಗದಲ್ಲಿ ಕಾಣಬಹುದಾಗಿದೆ.

ಈ ವಿಧಾನಕ್ಕೂ ಕೆಲವು ತಕರಾರುಗಳಿವೆ.

೧) ಇದು ಸಾಹಿತ್ಯಾಂಶಗಳಿಗಿಂತ ಮಾನವಶಾಸ್ತ್ರೀಯ ಅಂಶಗಳಿಗೆ ಹೆಚ್ಚು ಗಮನ ಕೊಡುತ್ತದೆ.

೨) ಮೌಲ್ಯಮಾಪನಕ್ಕೆ ಈ ವಿಧಾನ ಉಪಯುಕ್ತವಾಗುವದಿಲ್ಲ.

೩) ವಿಮರ್ಶಕರು ತಮ್ಮ ಹೇಳಿಕೆಯಲ್ಲಿ ಸಪ್ರಮಾಣತೆಗಿಂತ ಹೆಚ್ಚಾಗಿ ಚಾತುರ್ಯ ತೋರಿಸುತ್ತಾರೆ. ಅಂಥ ನಿದರ್ಶನಗಳು ಸಾಕಷ್ಟಿವೆ.

೪) ಇದು ಇಂದಿನ ಮಾನವನು ಬುದ್ಧಿಪ್ರಾಮಾಣ್ಯತೆ ಉಳ್ಳವನು ಎಂಬ ವೈಜ್ಞಾನಿಕ ಪರಿಕಲ್ಪನೆಯನ್ನು ನಿರಾಕರಿಸುತ್ತದೆ.

೫) ಮಾನವಶಾಸ್ತ್ರ, ಮಾನಸಶಾಸ್ತ್ರದಲ್ಲಿಯಂತೇ ಮನಸ್ಸನ್ನು ಜಾಗೃತ–ಸುಪ್ತ ಭಿನ್ನಕ್ರಿಯೆಯ ಕಲ್ಪನೆಯನ್ನು ಒಪ್ಪದೇ, ಮಾನವ ಪುರಾತನ ಜನಾಂಗದ ಒಬ್ಬ ಸದಸ್ಯನನ್ನಾಗಿ ಕಂಡುಕೊಳ್ಳುತ್ತದೆ. ಆದರೆ ಮೂಲರೂಪಾತ್ಮಕ ವಿಧಾನ ಈ ಪುರಾತನ ಸದಸ್ಯತ್ವವನ್ನೇ ನಾಟ್ಯೀಕರಿಸುವ ಯತ್ನಗಳನ್ನು ಅಭ್ಯಸಿಸುತ್ತವೆ ಎಂಬುದು ಈ ವಿಧಾನದವರ ಮಂಡನೆ.

ಈ ಎಲ್ಲ ವಿಧಾನಗಳಲ್ಲದೇ ಮಿಕ್ಕ ಪರಿಕಲ್ಪನೆಗಳು ಇವೆಯಾದರೂ ಅವು ಒಂದಲ್ಲ ಒಂದು ಅಂಶದಲ್ಲಿ ಈ ಸ್ಥೂಲ ವಿಧಾನಗಳಲ್ಲಿ ವಿಲೀನವಾಗುತ್ತವೆ. ಈ ವಿಧಾನಗಳನ್ನು ಪಾಶ್ಚಾತ್ಯರಲ್ಲಿ ಹಿಂದಿನ ಇಂದಿನ ಎಲ್ಲ ಸಾಹಿತ್ಯಕ್ಕೆ ಭೇದ ಕಲ್ಪಿಸದೇ ಅನ್ವಯಿಸಿ ಮೌಲ್ಯಮಾಪನ ಮಾಡುವ ಯತ್ನ ಮಾಡಿದ್ದಾರೆ. ಯಾವದೇ ಒಂದೇ ವಿಧಾನವನ್ನು ಅನುಸರಿಸಿದರೆ ಅದು ಯಾವ ಅನಾಹುತ ಮಾಡಬಹುದೆಂದು ಟಾಲಸ್ಟಾಯನ ಯತ್ನದಿಂದ ಕಾಣಬಹುದು. ಇದೇ ರೀತಿ ಯಾವದೋ ಒಂದು ಪರಿಕಲ್ಪನೆಗೆ ಅಂಟಿಕೊಂಡು ಮೆಟಫಿಝಿಕಲ್ ಪಂಥದ ಕಾವ್ಯವನ್ನೇ ನಿಯೋ ಕ್ಲಾಸಿಕಲ್ ಪಂಥದವರು ನಿರಾಕರಿಸಿದ್ದನ್ನೂ, ರೋಮ್ಯಾಂಟಿಕರನ್ನು ಎಲಿಯಟ್ ನಿರಾಕರಿಸಿದ್ದನ್ನೂ, ಎಲಿಯಟನನ್ನು ವ್ಯಾವರ ವಿಂಟರ್ಸ ಮೊದಲಾದವರು ನಿರಾಕರಿಸಿದ್ದನ್ನೂ ಕಾಣಬಹುದು. ಒಂದೇ ಕೃತಿಯನ್ನು ಎಲ್ಲ ಅಥವಾ ವಿವಿಧ ವಿಧಾನಗಳಿಂದ ಅಭ್ಯಸಿಸಿ ನಂತರ ಮಾಪನ ಮಾಡಬಹುದು: ಇದು ಹೆಚ್ಚು ಆರೋಗ್ಯಕರವಾದದ್ದು. ಪ್ರತ್ಯೇಕವಾಗಿ ನೋಡಿದಾಗಿನ ಅಂಶಗಳನ್ನೆಲ್ಲ ಕೂಡಿಸಿ ಕೃತಿಯ ಸಮಗ್ರತೆಯನ್ನು ಕಟ್ಟಲು ಸಾಧ್ಯವಿದೆ: ಆದರೆ ಹಾಗೆ ಮಾಡುವಾಗ ಅದೇ ಪ್ರತ್ಯೇಕ ವಿಧಾನ ಪರಮ ಮಾನದಂಡ ಎಂದು ತಿಳಿಯಬಾರದು.

ಭಾರತೀಯ ಕಾವ್ಯ ಪರಂಪರೆಗೆ ಇವೆಲ್ಲ ಅನ್ವಯಿಸಿದರೆ ಯಾವ ಚಿತ್ರ ಬರಬಹುದು ? ಸಾಂಪ್ರದಾಯಿಕ ಕಾವ್ಯ, ಯಾವ ಭಾಷೆಯದೇ ಆಗಲಿ, ನೈತಿಕತಾ ವಿಧಾನ, ಇವುಗಳಲ್ಲಿ ಉಚ್ಚಸ್ತರಕ್ಕೆ ಏರಬಹುದು, ಕಾರಣ ನೈತಿಕತೆ ಪರಮಗುರಿ ಆದಂತೆ ಸೌಂದರ್ಯ ದೃಷ್ಟಿಯೂ ಆಗಿದೆ. ರಾಮಾಯಣ ಮಹಾಭಾರತ ದಂಥ ಕಾವ್ಯಗಳು ಎಲ್ಲ ವಿಧಾನಗಳಲ್ಲೂ ಉಚ್ಚಸ್ತರಕ್ಕೇರುವವು: ಕಾರಣ ಅವು ಇತಿಹಾಸ ಕಾವ್ಯವೂ ಹೌದು; ಪುರಾಣಾತ್ಮಕ ಕಾವ್ಯವೂ ಹೌದು. ಸಮಾಜ ಶಾಸ್ತ್ರೀಯ ಹಾಗೂ ಮೂಲರೂಪಾತ್ಮಕ ನೋಟಗಳು ಉಜ್ವಲ ರೂಪದಲ್ಲಿ ಕಂಡು ಬರುತ್ತವೆ. ಅದರಂತೇ ವಿವಿಧ ಪಾತ್ರಗಳ ವರ್ತನೆಯಲ್ಲಿ ಮಾನಸಶಾಸ್ತ್ರೀಯ ಅಂಶಗಳೂ ಇರುವದನ್ನು ಕಾಣಬಹುದು. ಇವುಗಳ ಅಭ್ಯಾಸ ಆಗಬೇಕಾಗಿದೆ ಎನಿಸುತ್ತದೆ. ಅವು ಆಯಾ ಕಾಲಖಂಡದ ಸಾಮಾಜಿಕ ರಾಜಕೀಯ ಕೌಟುಂಬಿಕ ಜೀವನ ಪದ್ಧತಿ ನಂಬುಗೆಗಳು, ಮೌಲ್ಯಗಳು. ನಡೆನುಡಿಗಳು ಇವನ್ನು ಬಿಂಬಿಸುತ್ತವೆ; ಅಲ್ಲದೇ ಈ ಜೀವನಾನುಭವಗಳ ಹಿನ್ನೆಲೆಯಲ್ಲಿ ಸಾರ್ವತ್ರಿಕ ಸಾರ್ವಕಾಲಿಕ ಮೌಲ್ಯಗಳ ಮಂಡನೆಯನ್ನೂ ಮಾಡುತ್ತವೆ. ಆದರೆ ಇವನ್ನೇ ಅನುಸರಿಸಿ ಬರೆದ ಸಾವಿರ ವರುಷಗಳ ನಂತರದ ಕೃತಿಗಳಲ್ಲಿ ಸಮಾಜಶಾಸ್ತ್ರೀಯ ಅಂಶಗಳನ್ನು ಅಥವಾ ಇತರ ಅಂಶಗಳನ್ನು ಕಾಣಬಹುದೇ ಇದು ಯೋಚಿಸಬೇಕಾದ ವಿಷಯ. ಆಧುನಿಕ ಯುಗದ ಮಟ್ಟಿಗೆ ಹೇಳುವದಾದರೆ ಆಕೃತಿಪ್ರಧಾನ ಧೋರಣೆಯವರ ಸಾಹಿತ್ಯಿಕ ಅಂಶಗಳನ್ನೂ ಸಮಾಜಶಾಸ್ತ್ರೀಯ ಧೋರಣೆಯವರ ಸಮಕಾಲೀನ ಜೀವನದ ವಾಸ್ತವಾಂಶಗಳನ್ನೂ

ಶ್ರೇಷ್ಠತ್ವಕ್ಕಾಗಿ ವಿಚಾರಮೂಲಗಳ ವೈವಿಧ್ಯ ವಿಸ್ತಾರ ಹಾಗೂ ಉದ್ಧಾರಕ ಗುಣಗಳನ್ನೂ ಆಪೇಕ್ಷಿಸಬಹುದು. ಲೌಕಿಕ ಜೀವನಾನುಭವಗಳು ಆರ್ಥಿಕ ಸಾಮಾಜಿಕ ರಾಜಕೀಯಸ್ತರದಲ್ಲಿ ಬರುತ್ತವೆಯಾದ್ದರಿಂದ ಸಾಹಿತ್ಯದ ಅನುಭವಗಳ ವಿವರಗಳಿಗೆ ಈ ತಳಹದಿಯ ಮಹತ್ವ ಇದೆಯೆಂಬುದನ್ನು ಮರೆಯಬಾರದು. ಅವು ಆಯಾ ಕಾಲಖಂಡದ ಸ್ಥಿತ್ಯಂತರಗಳಿಗೆ ಬದ್ಧವಾಗಿದ್ದು ಅಲ್ಲಿಂದ ಸಾರ್ವಕಾಲಿಕತೆಯ ಶೋಧದಲ್ಲಿ ಸ್ವತಂತ್ರವಾಗುವ ಹವಣಿಕೆಯಲ್ಲಿರಬಹುದು. ಪಾರಮಾರ್ಥಿಕ ಅನುಭವಗಳು ವೈಯಕ್ತಿಕ ಸ್ತರದಲ್ಲಿ ಬರುವಂಥವು ಆಗಿರುವದರಿಂದ ಅವುಗಳಿಗೆ ಸಾಮಾಜಿಕ ಪರಿಸರದ ಬದ್ಧತೆಯ ತೊಡಕು ಇರಲಾರದು.

ಈ ಮೊದಲೇ ಹೇಳಿದಂತೆ ಇದು ಒಂದು ಸಂಕ್ಷಿಪ್ತ ಪರಿಚಯಾತ್ಮಕ ಲೇಖನ. ಈ ಎಲ್ಲ ವಿಧಾನಗಳ ವಿಸ್ತೃತ ಚರ್ಚೆ ವಿದ್ವಾಂಸರಿಂದ ಆಗಬೇಕಾಗಿದೆ ಎಂದು ಎನಿಸುತ್ತದೆ.

ಆಧಾರ ಗ್ರಂಥಗಳು:

೧) (ಪ್ರಮುಖ) ಸಾಹಿತ್ಯವಿಮರ್ಶೆಯ ಐದು ಮಾರ್ಗಗಳು—ವಿಲ್ಬರ ಸ್ಕಾಟ್. ಕಾಲಿಯರ್ ಮ್ಯಾಕಮಿಲನ ಪ್ರಕಾಶನ ಲಂಡನ್.

Five Approaches To Literary Criticism—Wilbur Scott.

(2) History of Literary Criticism—Wimset aud Brooks

(3) Theory of Literature—Rene Wellek & Austin Warren.

ನೀಲಾ ಕಾ.

ಗೋಚರ

ಕಾರ್ಮೋಡ ದಟ್ಟೈಸಿದಾಗ,
ಬೆಳಗಾಗಿ ಮೇಘರಾಜ
ಮಳೆಯ ಸಂದೇಶ ತಂದಾಗ,
ನಡುವೆ ಸುಳಿವ
ಕೋಲ್ಮಿಂಚ ಪ್ರಭೆಯಲ್ಲಿ

ಸೂರಿಲ್ಲದ ಮನೆಗಳು
ಗೋಚರಿಸುತ್ತವೆ.

ಸರಜೂ ಕಾಟಕರ್

ದಿಲ್ಲಿ : ಮೂವತ್ತೈದು ಸಾಲುಗಳು

ಅಂಕುಶವಿಲ್ಲದ ಮದವೆತ್ತ ಆನೆಯಂತೆ
ಎದುರಾದವರನ್ನೆಲ್ಲ ದಿಲ್ಲಿ ಆಕಾಶಕ್ಕೆ ಹಾರಿಸುತ್ತದೆ

ಇಲ್ಲಿಯ ಪೂರ್ವ ಪಶ್ಚಿಮ ದಕ್ಷಿಣ ಉತ್ತರಗಳಲ್ಲಿ
ಗುಡಿ ಗುಂಡಾರಗಳು ಮಸೀದೆ ಚರ್ಚಗಳು

ಆದರೂ ಇಲ್ಲಿ ದೇವರ ಹೆಸರಿನಲ್ಲಿ
ರಕ್ತದ ನದಿಗಳೂ ಹರಿಯುತ್ತವೆ
ಇಲ್ಲಿ ಧರ್ಮ ಯಾವುದೆಂದು
ಇನ್ನೂ ನನಗೆ ಗೊತ್ತಾಗುತ್ತಿಲ್ಲ
ಇಲ್ಲಿ ಧರ್ಮವನ್ನು ಪ್ರತಿನಿತ್ಯ ಹರಾಜಿಗೆ ಹಾಕುತ್ತಾರೆ

ದಿಲ್ಲಿಯು
ಗಂಡಸು ಹೆಂಗಸಾಗುತ್ತಾನೆ
ಹೆಂಗಸು ಗಂಡಸಾಗುತ್ತಾಳೆ
ಹಿಜಡಾಗಳು ಗರ್ಭ ಧರಿಸಿ
ಪುತ ಪುತನೆ ಮಕ್ಕಳನ್ನು ಹೆತ್ತು
ರಸ್ತೆಗೆ ಒಗೆಯುತ್ತಾರೆ

ಇಲ್ಲಿ
ದಲಿತ ಕವಿತೆ ಬರೆದರೆ ಸನ್ಮಾನಿಸುತ್ತಾರೆ
ಅದೇ ಅವ ಮೋರ್ಚಾ ನಡೆಸಿದರೆ ಗುಂಡು ಹಾಕುತ್ತಾರೆ
ಧ್ವಜವನ್ನು ಅಂಡರ್‌ವೇರ್ ಮಾಡಿದವ
ಇಲ್ಲಿ ಸುಲಭವಾಗಿ ಪಾರಾಗುತ್ತಾನೆ
ಲೈಟಿಲ್ಲದ ಸೈಕಲ್ ಹಿಡಿದ ಪೋಲೀಸ್
ಸಸ್ಪೆಂಡಾಗಿ ಮನೆ ಹಿಡಿಯುತ್ತಾನೆ.

ದಿಲ್ಲಿಯ ಸೂರ್ಯ
ರಾತ್ರಿಯೂ ಉರಿಯುತ್ತಾನೆ
ಆದರೆ ಬೆಳಕು ಮಾತ್ರ ಕೆಲವರಿಗೇ ನೀಡುತ್ತಾನೆ
ಸಿರಿವಂತರೆಲ್ಲ ಈ ಬೆಳಕನ್ನು
ತಮ್ಮ ತಿಜೋರಿಗಳಲ್ಲಿ ಹಾಕಿಟ್ಟು ಬೀಗ ಜಡಿದಿದ್ದಾರೆ

ದಿಲ್ಲಿ ಇಪ್ಪತ್ತೊಂದನೆಯ ಶತಮಾನದ
ಭಾಷೆ ಮಾತನಾಡುತ್ತವೆ
ದಿಲ್ಲಿ ಹದಿನಾರನೆಯ ಶತಮಾನದ
ನಡಿಗೆ ನಡೆಯುತ್ತದೆ.

ದಿಲ್ಲಿ ಬಗ್ಗಿದರೆ
ಮ್ಮ ಮೇಲೆ ಸವಾರಿ ಮಾಡುತ್ತವೆ
ಹಿಡಿದಿಡಿದು ಒದ್ದರೆ
ಬಗ್ಗಿ ಸಲಾಂ ಹಾಕುತ್ತದೆ.

ವಿಕಾಸ

ಅಂತರ

ದಿನವಿಡೀ
ಬೆವರು ಸುರಿಸಿದ ನಂತರ
ಮನೆಗೆ ಮರಳಿ
ನನ್ನ ಸುಂದರ ನಯನವಾದ ಹೆರಳನ್ನು ಬಿಚ್ಚಿಸಿ
ನಿನ್ನ ತೊಡೆಯ ಮೇಲೆ ತಲೆಯಿರಿಸಿ
ನಿನ್ನ ಬೆರಳುಗಳಲ್ಲಿ
ನನ್ನ ಬೆರಳುಗಳನು ಸೇರಿಸಿ
ಹೃದಯದ ಹತ್ತಿರ ಇರಿಸಿದಾಗ
ಎದುರಿನ ಕಿಟಕಿಯ ಜಾಲಿಯಿಂದ

ದೂರಕ್ಕೆ ಹರಡಿರುವ
ನೀಲ ಆಕಾಶ ಕಾಣಿಸುತ್ತಿದೆ.
ನೀನು ಸೋತ–ಬೆವತ ಸ್ಥಿತಿಯಲ್ಲೂ
ಹುರುಪಿನಿಂದ
ಬೋಫರದ, ಜಾಫನದ
ರಾಜಕಾರಣದ ಹೊಸ ಡಾವ್
ಹೊಸ ಚೆಹರೆಗಳ, ಕೊನೆಗೆ
ದಾದರಿನವರೆಗೂ ನಿನ್ನ ಜೊತೆ ಕುಳಿತ ಸುಂದರಿಯ
ಸುದ್ದಿಯನ್ನೆ ಹೇಳುತ್ತಿರುತ್ತಿ
ಆಗ
ನೆಲ ಮುಗಿಲುಗಳ ನಡುವಿನ
ದಟ್ಟ ಅಂತರ
ದ ಅರಿವಾಗಿ
ಮನಸ್ಸು ಒಳಗೆಳೆದುಕೊಂಡು
ಅಂತರವನು ತುಂಬುವ
ಸೀಮಾರೇಖೆಯನು
ಹುಡುಕುತ್ತದೆ.

ಕೂಗು

ದೇವೇಂದ್ರಕುಮಾರ ಹಕಾರಿ

ಗೆಳೆಯ,

ನಮ್ಮ ಹಳೀ ಮನಿ ತೋಟ ಪಟ್ಟಿ
ನೋಡಿಯೇ ನೋಡುತ್ತೇನೆ ಮತ್ತೆ ಮತ್ತೆ ;
ನಮ್ಮ ಸುತ್ತ ಮುತ್ತಣ—ಬೇವು ಜಾಲೀ ಬಿಡು—
ತೇಗು ಮತ್ತೀ ಕೂಡ ಬರುತ್ತವೆ ಈಗ, ಬರೀ ಟೊಂಕಕ್ಕೆ.
ನಮ್ಮ ಹುಟ್ಟಿಗೂ ಮೊದಲೆ ಮುಗಿಲ ಜೊತೆ ಮಾತಾಡುತಿದ್ದ ಬೆಟ್ಟ,
ಅದಂತೂ ಕುತ್ತಿಗೆಗೇ ಬಂದು, ಬಿಗಿಗೊಳ್ಳುತ್ತಿದೆ ಕಬಂಧಹಸ್ತ.

ಮರೆತೆ, ಸದಾ ಅಸ್ತಿತ್ವಕ್ಕೆ ಉಸಿರು ನೀಡಿ ಅಬ್ಬರಿಸುತ್ತಿದ್ದ
ನಮ್ಮೂರ ಹೊಳೆ, ಮಣಕಾಲ ಮಟ್ಟಕ್ಕಿಳಿದು
ಎದೆ ಸೀಳಿಕೊಂಡು ರಣಗುಟ್ಟುತ್ತದೆ.

○ ○ ○

ಏನೆಂದೆ ? ಬಂದ ನಿನಗೂ ಹಾಗೆ ಅನ್ನಿಸುತ್ತದೆ ಅಲ್ಲಾ ?
ಮರ, ಬೆಟ್ಟ, ಹೊಳೆ, ಒಂದೊಂದು ಗೋರಿಯಾಗಿ,
ನಮಗಾಗಿ ನಿರೀಕ್ಷಿಸುವಂತೆ ಕಂಡರೆ
ಅಚ್ಚರಿಗೊಳ್ಳಬೇಡ;
ಹೇಗೂ ಜೊತೆ ಜೊತೆಗೇ ಇದ್ದೇವಲ್ಲ!
ಹೀಗೇ ಉಸಿರಾಡಿಸು, ಕೆಲವು ದಿನ ; ಬೇಗ ಹೊಂದಿಕೊಳ್ಳುತ್ತೀ.

ನೋಡಿದೆಯಾ, ನೋಡಿದಷ್ಟೂ ದೂರ
ಮೊಳಕಾಲೂರಿ, ಬಾಯಾರಿ, ಬಾಗಿ ಕೈಮುಗಿವ ಜನರೇ ಕಾಣುತ್ತಾರೆ.
ಏನು? ಪ್ರಾರ್ಥನೆ ಸಲ್ಲಿಸುತ್ತಿದ್ದಾರೆ ಅನ್ನುತ್ತೀಯಾ?
ಮುಗಿಲು ಬಿರಿಯುವಂತೆ ಕೂಗಿವರೆಂದು ಹೇಳುತ್ತೀಯಾ?
ಬೂಟು, ಗುಂಡಿನ ಸದ್ದು, ಕುರ್ಚಿಗಳ ಗುದ್ದು, ಹಾರ ತುರಾಯಿ
ಕಾರು ತುತ್ತೂರಿ ಮೆರವಣಿಗೆಯ ಸುಡುಮದ್ದಿಗೆ
ಅಡಗಿ ಹೋಗಿರಬೇಕು !

ಸ್ವಲ್ಪ, ತಲೆ ಮೇಲಕೆತ್ತು; ಬಾಗಿಸುತ್ತಲೆ, ಹೀಗೆ
ಬಾಗುತ್ತ ಬಾಗುತ್ತ, ಎಲ್ಲಿ ನೆಲದಲ್ಲಿಯೇ ಹೂತು—
ಹೋಗುತ್ತೀಯೋ ಅನಿಸುತ್ತವೆ ಅಲ್ಲಾ ?
ಏನು ಪರವಾಯಿಲ್ಲ! ಕೆಲವು ದಿನ ಹೀಗೆಯೇ ಉಸಿರಾಡಿಸು.

○ ○ ○

ನಮ್ಮ ನಮ್ಮ ಮನೆ, ರಸ್ತೆ, ಹಗಲು ಮಲಗಿ
ರಾತ್ರಿಯ ದೈತ್ಯನರ್ತನಕ್ಕೆ ಮಾಂತ್ರಿಕ ಕೀರ್ತನಕ್ಕೆ
ನೆಲೆಯಾಗುತ್ತವೆ; ಬಲಿಯಾಗುತ್ತ.
ಮನೆ ಮನೆಯ ಛತ್ತು, ಸದ್ದಿಲ್ಲದೇ ಕೆಳಗಿಳಿಯುತ್ತ
ತಲೆಯನ್ನು ಕುತ್ತುತ್ತಲೇ ಬರುತ್ತದೆ:

ಮತ್ತೆ ರಸ್ತೆ ಜಾರು ಜಾರಾಗುತ್ತ, ಸುತ್ತುತ್ತಲೇ
ಏರುತ್ತದೆ, ಅಡಿ ಅಡಿಯ ಬುಡದಿಂದ.

ಂ ಂ ಂ

ಅವರೆಲ್ಲ ಮೇಲೆತ್ತಿದ ಧ್ವಜದಡಿಯಲ್ಲಿಯೇ
ತಲೆಯೆತ್ತಿದ ಕುರ್ಚಿ, ಭೂತಾಕಾರ
ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೂ
ಅಖಂಡ ಭೂತ ಬಲಿ ಬೇಡುತ್ತಿದೆ;
ಅದಕ್ಕಾಗಿಯಾದರೂ ಉಸಿರಾಡಿಸು, ಹೀಗೇ!

ಮನುಷ್ಯನಾಗಿ ಹುಟ್ಟಿದ್ದು ಸರಿ;
ಮನುಷ್ಯನಾಗಿಯೇ ಬದುಕಬೇಕೆನ್ನುವ
ನಿನ್ನ ಛಲ—ಹುಲು ಬಯಕೆ—ಹೂಳು;
ಬಾಳು ಹೇಗಾದರೂ ಚಿಂತಿಸಬೇಡ;
ಬೇಡುತ್ತಲೇ ಹೋಗು;
ಇದ್ದರೋ ತಿನ್ನು; ಇಲ್ಲದಿದ್ದರೆ ಕನ್ನ,
ಅದೂ ಇಲ್ಲದಾಗ ಮಣ್ಣು.

ಂ ಂ ಂ

ನಿದ್ದೆ ಮಾಡು; ಸುದ್ದಿ ಮಾಡು ;
ನನ್ನ, ನಿನ್ನ, ಎಲ್ಲರ ರಕ್ತ ಹೆಪ್ಪುಗಟ್ಟಿ, ಕಪ್ಪುಗಟ್ಟಿ
ಮುಗಿಲ ಗಂಟೆಯಾಗಿ,
ಕಾಲದ ನಿರ್ವಾತದೆದೆಗೆ ಅಪ್ಪಳಿಸಿ
ಕೊಚ್ಚಿ ಹಾಕುವವರೆಗೆ;
ನೆಲದ ಬಸಿರಲ್ಲಿ ಬಿಸಿನೆತ್ತರ ಪಂಜು
ಹಿಂಡುಗಟ್ಟಿ ಬೀಸುವವರೆಗೆ;
ಕ್ಷಿತಿಜದ ಹಣೆಯಲ್ಲಿ ರಕ್ತದ ಸೂರ್ಯ
ಉರಿಯುವವರೆಗೆ;
ನಿದ್ದೆ ಮಾಡು ಸುದ್ದಿ ಮಾಡು !

(ಬಿಡುಗಡೆಯಾಗಲಿರುವ **ನನ್ನ ಸುತ್ತು** ಕವನಸಂಕಲನದಿಂದ)

ಕೆಲವು ರೆಡ್ ಇಂಡಿಯನ್ ಹಾಡುಗಳು

ಅನು: ಗುರುಮೂರ್ತಿ ಪೆಂಡಕೂರು

ರಣರಂಗ

ನಮ್ಮ ನಾಡನೇ ಕಸಿದು
ನಮ್ಮ ಬೀಡುಗಳ ಸುಟ್ಟು
ನಮ್ಮ ಬದುಕನೇ ರಣರಂಗ ಮಾಡಿದಿರಿ.
ನಮ್ಮನೇ ಬಹಿಷ್ಕರಿಸಿದಿರಿ

ಟಿಟಾಂಕಾ ಆಯೋಟೆಕ್

ಗಂಡಸರು

ನಾವು ಗಂಡಸರು
ಅದು ನಮ್ಮ ದುರಾದೃಷ್ಟ
ನೀವು ಹೆಂಗಸರು
ಅದು ನಿಮ್ಮ ಅದೃಷ್ಟ.
ನಡೆಯುವೆವು ನಾವು ಸಮರಾಂಗಣಕ್ಕೆ
ನಡೆಯಿರಿ ನೀವು ಬೆಚ್ಚನೆಯ ಮನೆಗಳಿಗೆ

ಟೇನಾ

ನಾನೇನೊ ಹೋದೇನು

ನಾನೇನೊ ಹೋದೇನು
ಹೋದೇನು ಇನ್ನಿಲ್ಲವಾಗಿ; ಮಣ್ಣಲ್ಲಿ ಮಣ್ಣಾಗಿ.
ಆದರೀ ನಾಡು
ನಾನೀಗ ನಡೆದಾಡುವೀ ನಾಡು
ಎಂದೆಂದಿಗೂ ಬದಲಾಗದೀ ನಾಡು
ಎಲ್ಲಿ ಹೋದೀತು ಎಲ್ಲಿ ಹೋದೀತು

ಒಮಡಾ

●

ಬಳ್ಳಾರಿ: ಬಂಡಾಯ ಸಮ್ಮೇಳನ

ಚಂದ್ರಶೇಖರ ಪಾಟೀಲ

ಜನವರಿ ೨೪. ಬಳ್ಳಾರಿಯ ರಣ ರಣ ಬಿಸಿಲಿನಲ್ಲಿ ಏಳನೆಯ ರಾಜ್ಯಮಟ್ಟದ ಬಂಡಾಯ ಸಾಹಿತ್ಯ ಸಮ್ಮೇಳನ ಸುರುವಾದದ್ದೇ ಪ್ರತಿಭಟನೆಯೊಂದಿಗೆ. ರಾಜ್ಯದ ಅನೇಕ ಕಡೆಗಳಿಂದ ಬಂದಿದ್ದ ಬಂಡಾಯ ಬರಹಗಾರರು ಬೆಂಡಿಗೇರಿ ಪ್ರಕರಣವನ್ನು ಮುಂದೆ ಮಾಡಿಕೊಂಡು "ಹೆಗಡೆ ರಾಜ್ಯ ಹೇಲಿನ ರಾಜ್ಯ" ಎಂಬ ಕೂಗಿನೊಂದಿಗೆ ಊರಲ್ಲಿ ಸುತ್ತಾಡಿದ್ದು. ಹೆಸರಿಗೆ 'ಸಾಹಿತ್ಯ' ಸಂಘಟನೆಯಾಗಿದ್ದರೂ ಬಂಡಾಯ ಅಪ್ಪಿಕೊಂಡ ಇಡೀ ಬದುಕಿನ ಆಯಾಮಕ್ಕೆ ಸ್ಪಷ್ಟ ಸಂಕೇತವಾಗಿತ್ತು.

ಈ ಕೂಗೇ ನೋವಾಗಿ, ಹಾಡಾಗಿ ಹರಿದದ್ದು ಬೆಂಗಳೂರಿನ ಗೆಳೆಯ ತಿಮ್ಮರಾಜು—

ನನ್ನ ಈ ನಾಡಿನಲ್ಲಿ
ಬೆವರೆಲ್ಲಾ ನದಿಯಾಗಿ
ಮೂರು ದಿಕ್ಕು ಕಡಲು

—ಎಂಬ ಬರಗೂರರ ಕವನಕ್ಕೆ ತನ್ನ ತುಂಬು ಕೊರಳಿನಿಂದ ಜೀವ ತುಂಬಿದಾಗ.

ಜ್ಯೋತಿಯ ಬೆಳಗುವಿಕೆ ಇಲ್ಲ. ಪ್ರಾರ್ಥನಾ ಪದ್ಯವಿಲ್ಲ. ಯಾರ ಅಮೃತ ಹಸ್ತದಿಂದಲೂ ರಿಬ್ಬನ್ ಕಟ್ ಇಲ್ಲ. ಇದು ಬಂಡಾಯ ಸಮ್ಮೇಳನದ ವೈಶಿಷ್ಟ್ಯ. ಕಳೆದ ಒಂಬತ್ತು ವರ್ಷಗಳಲ್ಲಿ ಸಂಘಟನೆ ಬೆಳೆಯಬೇಕಾದ ರೀತಿಯಲ್ಲಿ ಬೆಳೆದಿಲ್ಲ ಎಂಬ ಅರಿವಿನ ನೋವಿದ್ದರೂ ನನಗೆ ನಿಜವಾಗಿಯೂ ಖುಶಿಯಾಗಿದ್ದು, ಬಳ್ಳಾರಿ ಸಮ್ಮೇಳನದಲ್ಲಿ ಅನೇಕ ಹೊಸ ಮುಖಗಳು ಮಿನುಗಿದ್ದು: ಸಂಘಟನೆ ಬಿಟ್ಟು ಹೋಗಿದ್ದ ಅನೇಕ ಹಳೆಯ ಮುಖಗಳು ಮರಳಿ ಬಂದದ್ದು.

ಯಾವುದೇ ಕಟಾಚಾರದ ಕರ್ಮಕಾಂಡಗಳಿರದ ಇಂಥ ಸಮ್ಮೇಳನಗಳು ಸುರುವಿನಿಂದ

ಕೊನೆಯ ವರೆಗೂ ಅನೇಕ ವಿಚಾರ, ಅಭಿಪ್ರಾಯಗಳ ಸಂಘರ್ಷಗಳಿಗೆ ಹಾದಿ ಮಾಡಿ ಕೊಡುತ್ತವೆ. ಊಟ-ಫರಾಳ ನಡೆದಾಗಲೂ ನಿಂತ ಕಾಲ ಮೇಲೆ ಚರ್ಚೆ ಮುಂದುವರೆಯುತ್ತದೆ.

ಮೊದಲ ಗೋಷ್ಠಿಯ ಪ್ರಾರಂಭದಲ್ಲಿ ಸಂಚಾಲಕರಾದ ಅಲ್ಲಮಪ್ರಭು ಬೆಟ್ಟದೂರ ಮತ್ತು ಎಲ್. ಹನುಮಂತಯ್ಯ ಬಂಡಾಯ ನಡೆದು ಬಂದ ದಾರಿಯನ್ನು ಅವಲೋಕಿಸಿ ಪರಂಪರೆ ಹಾಗೂ ಬಂಡಾಯ ಪ್ರಕ್ರಿಯೆಯ ಸೂಕ್ಷ್ಮ ಸಂಬಂಧಗಳನ್ನು ಬಿಡಿಸಿ ಹೇಳಿದರು.

ಕರ್ನಾಟಕದ ಪಂಚಾಯತ ರಾಜ್ಯವ್ಯವಸ್ಥೆಯ ಒಳ್ಳೆಯ ಕ್ರಮದ ಹಿಂದೆಯೂ ಕೈ ಮೇಲು ಮಾಡಿಕೊಂಡಿರುವ ಜನತಾ, ಕಾಂಗ್ರೆ ಪಕ್ಷಗಳ ಬಲಿಷ್ಠ ವರ್ಗಗಳ ತಂತ್ರವನ್ನು ಬಯಲಿಗೆಳೆದ ಜಿ. ಎಚ್. ರಾಘವೇಂದ್ರ, ಗೋಷ್ಠಿಯ ಮುಖ್ಯ ವಿಚಾರಧಾರೆಗೆ ಹಾದಿ ತೆರೆದರು. ನಂತರ ಮೈಕು ಎದುರಿಸಿದ ಸಮಾಜವಾದಿ ಗೆಳೆಯ ಕೆ. ರಾಮದಾಸರು ಕರ್ನಾಟಕ ರಾಜಕೀಯದಲ್ಲಿ ಮೂರನೆಯ ಶಕ್ತಿಯ ಬಗ್ಗೆ ಮಾತಾಡುವಾಗ ಸಭಿಕರಲ್ಲಿ ವಿಶೇಷ ಕುತೂಹಲವಿತ್ತು. ಸಮಕಾಲಿನ ಇತಿಹಾಸವನ್ನು ಮೆಲುಕು ಹಾಕಿದ ಅವರು "ಇಂದು ಎಲ್ಲ ರಾಷ್ಟ್ರಿಯ ಪಕ್ಷಗಳೂ ಅಪ್ರಸ್ತುತವಾಗಿವೆ. ಅವು ನಿಜವಾದ ಅರ್ಥದಲ್ಲಿ ಪಕ್ಷಗಳೇ ಅಲ್ಲ" "ಎಂದು ಹೇಳುತ್ತ, ಪರ್ಯಾಯ ಶಕ್ತಿಯ ಅನಿವಾರ್ಯತೆಯನ್ನು ಒತ್ತಿ ಹೇಳಿದರು. ರೈತ, ದಲಿತ, ಭಾಷಾ ಚಳುವಳಿಗಳ ಹಿನ್ನೆಲೆಯಲ್ಲಿ ಒದಗಲೇ ಬೇಕಾದ ಪ್ರಜ್ಞೆಯ ಸ್ಫೋಟ ಕುರಿತು ಚರ್ಚಿಸುತ್ತ ೧೯೮೭ರ ಡಿಸೆಂಬರ ೨೧ ರಂದು ಉದಯಿಸಿದ "ಕನ್ನಡ ದೇಶ" ಪಕ್ಷ, ದಿನ ತುಂಬುವ ಮೊದಲೇ ಹುಟ್ಟಿದ ಕೂಸು ಎಂದು ಕರೆದ ಅವರು ರೈತ ಚಳುವಳಿಗೆ ದಲಿತ ಚಳುವಳಿಯ ಬಲ ಸಿಕ್ಕರೆ ಮಾತ್ರ ಪರ್ಯಾಯ ಶಕ್ತಿ ಸಾಧ್ಯ ಎಂದರು.

ಈ ರಾಮದಾಸರು ಪಾಳೇಗಾರ ಲಂಕೇಶರು ಗಾಂಧೀ ಜಯಂತಿಯಂದು ಹುಟ್ಟು ಹಾಕಿದ 'ಕನ್ನಡ ಪ್ರಗತಿ ರಂಗ' ದ ಮುಖ್ಯ ವಕ್ತಾರರು. ಅದರ ಗತಿ ಏನಾಯಿತೆಂದು ಈಗ ಎಲ್ಲರಿಗೂ ಗೊತ್ತು. ಈ ಬಗ್ಗೆ ಪ್ರಶ್ನೆ ಕೇಳಿದಾಗ ರಾಮದಾಸರು ಯಾವ ಭ್ರಮೆಗೂ ಒಳಗಾಗದೆ ತಾವೊಬ್ಬ ವಾಸ್ತವ ಪ್ರಜ್ಞೆಯ ಸಮಾಜವಾದಿ ಎಂದು ಸ್ಪಷ್ಟಗೊಳಿಸಿದರು. ಅವರು ಹೇಳಿದರು: "ಪ್ರಗತಿರಂಗ ಎಂಬುದು ಕೆಲವರ ವೈಯಕ್ತಿಕ ದರ್ದಿನಿಂದ ಹುಟ್ಟಿಕೊಂಡ ವೇದಿಕೆ ಮಾತ್ರ. ಅದು ಮೂರನೆಯ ಶಕ್ತಿಯಾಗಲು ಸಾಧ್ಯವಿಲ್ಲ."

ಗೋಷ್ಠಿಯ ಅಧ್ಯಕ್ಷತೆ ವಹಿಸಿದ ಜಾಣಗೆರೆ ವೆಂಕಟರಾಮಯ್ಯ ತಮ್ಮ ಸಾದಾಸೀದಾ ರೀತಿಯಲ್ಲಿ ತಮಗೆ ಕಂಡ ಕೆಲ ಸತ್ಯಗಳನ್ನು ಹೊರಹಾಕಿದಾಗ ಸಭೆಯಲ್ಲಿ ಕಾವೇ

ದ್ದು ಸ್ವಾಭಾವಿಕ, ಮುಖ್ಯವಾಗಿ ಅವರು, ಲಂಕೇಶರಿಗೆ ತಾನೂ ಗುಂಡೂರಾವ ಗಬೇಕು, ಹೆಗಡೆ ಆಗಬೇಕು ಎಂಬ ತೀವ್ರ ರಾಜಕೀಯ ಮಹತ್ವಾಕಾಂಕ್ಷೆ ಇದ್ ಂದೂ, 'ಕನ್ನಡ ದೇಶ'ದ ಉಗಮಕ್ಕೆ ಸರಿಯಾದ ವಾತಾವರಣ ಉಂಟಾಗು ತ್ತಿದ್ದಾಗ ಅವರಿಗೆ ಒಮ್ಮೆಲೇ 'ಜ್ಞಾನೋದಯ'ವಾಗಿ ಅಕ್ಟೋ. ೨ ರಂದು ಉಪ ವಾಸದ ಹೆಸರಿನಲ್ಲಿ ಗೊಂದಲ ಸುರುಮಾಡಿದರೆಂದೂ ಹೇಳಿದಾಗ, ಮೊದಲ ಸಾಲಿನಲ್ಲಿಯೇ ಕುಳಿತ ಲಂಕೇಶಾಭಿಮಾನಿ ಶೂದ್ರ ಶ್ರೀನಿವಾಸರು ಬಾಯಿ ಹಾಕಿ ದ್ದು, ಆಮೇಲೆ ಇತರರೂ ಬಾಯಿ ಹಾಕಿ ಅವರ ಬಾಯಿ ಬಂದು ಮಾಡಿಸಿದ್ದು ತುಂಬ ರಂಜನೀಯ ನೋಟವಾಗಿತ್ತು.

ಗೋಷ್ಠಿ ಮುಗಿದ ನಂತರ ಶೂದ್ರ ಹಾಗೂ ರಾಮದಾಸ ಇಬ್ಬರೂ ಜಾಣಗೆರೆ ಅವರನ್ನು 'ಘೇರಾವೊ' ರೀತಿಯಲ್ಲಿ 'ಅಟ್ಯಾಕ್' ಮಾಡುತ್ತಿದ್ದುದನ್ನು ಕಂಡೆ. ರಾಮದಾಸ ಅಂದೇ ರಾತ್ರಿ ಮೈಸೂರಿಗೆ ಹೋದರು. ಸಮ್ಮೇಳನ ಮುಗಿಯುವ ವರೆಗೂ ಬೇರೆ ಬೇರೆ ನೆಲೆಗಳಲ್ಲಿ ಲಂಕೇಶರನ್ನು ಏಕಾಂಗವೀರನಾಗಿ ಸಂರಕ್ಷಿಸುತ್ತ, ಕೊನೆಗೂ ಹುತಾತ್ಮನಾಗುವ ಕೀರ್ತಿ ಶೂದ್ರ ಶ್ರೀನಿವಾಸರದಾಗಿತ್ತು.

ಪ್ರೆಸ್ ಗ್ಯಾಲರಿಯಲ್ಲಿ ನನ್ನ ಮಗ್ಗುಲಿಗೆ ಇದ್ದ 'ಹಿಂದೂ' ಪತ್ರಿಕೆಯ ಬಳ್ಳಾರಿ ಪ್ರತಿನಿಧಿಯಾಗಿದ್ದ ಒಬ್ಬ ಹಿರಿಯರು ಗೋಷ್ಠಿಯುದ್ದಕ್ಕೂ ಕಣ್ಣು ಮುಚ್ಚಿಯೇ ಇದ್ದರು. ನಾನು ಪ್ರೀತಿಯಿಂದ ಮೈದಡವಿ ಎಚ್ಚರಿಸಿದಾಗ, "ನನಗೆ ಕಣ್ಣು ಮುಚ್ಚಿ ಕೇಳೋದೇ ಅಭ್ಯಾಸ. ನಿದ್ದೆ ಮಾಡ್ತಾ ಇಲ್ಲ!" ಎಂದರು. ನಾನು ಅಚ್ಚರಿ ಹಾಗೂ ಅಸೂಯೆಗಳಿಂದ ಕಣ್ಣು ಕಣ್ಣು ಬಿಟ್ಟೆ.

●

ಪರಿಸರ ಪ್ರಜ್ಞೆಯನ್ನು ಜನರಲ್ಲಿ ಹೆಚ್ಚಿಸಲು ತಮ್ಮ ಮೊನಚಾದ ಬರಹಗಳ ಮೂಲಕ ಸಾಕಷ್ಟು ಶ್ರಮಿಸುತ್ತಿರುವ ನಾಗೇಶ ಹೆಗಡೆ, ಬಹಳ ತಿಳಿಯಾದ ಶೈಲಿ ಯಲ್ಲಿ ಸ್ವಾರಸ್ಯಕರವಾಗಿ ಎರಡನೆಯ ಗೋಷ್ಠಿ ಪ್ರಾರಂಭಿಸಿದರು. ಇಡೀ ಗ್ಲೋ ಬಲ್ ಹಿನ್ನೆಲೆಯಲ್ಲಿ, ಪರಿಸರದ ಸಂಪನ್ಮೂಲಗಳನ್ನು ದೋಚುವ ಶಕ್ತಿಗಳ ಬಗ್ಗೆ ವಿವರಿಸುತ್ತ. "ಆಗಾಗ ಗಡಿಯಾಚೆಯ ಗುಮ್ಮನನ್ನು ತೋರಿಸುವ ರಾಜಕಾರಣಿ ಗಳು ನಮ್ಮಲ್ಲಿದ್ದಾರೆ. ನಮ್ಮ ವೈರಿಗಳು ಹೊರಗೆ ಇಲ್ಲ, ನಮ್ಮ ನಡುವೆಯೇ ಇದ್ದಾರೆ." ಎಂದ ಅವರು 'ಬಂಡಾಯ' ಎಂಬುದು ಅರ್ಥಶಾಸ್ತ್ರ, ವಿಜ್ಞಾನ ರಾಜಕೀಯಕ್ಕೂ ವಿಸ್ತರಿಸಬೇಕಾಗಿದೆ —ಎಂದು ಕರೆ ಇತ್ತರು.

ಡಾ। ಶಿವರಾಮ ಕಾರಂತರು ನೀಲಗಿರಿಯ ಬಗ್ಗೆ ಇತ್ತೀಚೆಗೆ ಬದಲಾಯಿಸಿಕೊಂಡ

ನಿಲುವಿನ ಬಗ್ಗೆ ಪ್ರಶ್ನೆ ಕೇಳಿದಾಗ ನಾಗೇಶ್ ಹೆಗಡೆ ಸುತ್ತುಬಳಸಿ, ತೇಲಿಸಿ ಉತ್ತರಿಸಲು ಪ್ರಯತ್ನಿಸಿದರೆಂದೇ ನನಗೆ ಅನ್ನಿಸಿತು.

ಮೂರನೆಯ ಜಗತ್ತು ಮತ್ತು ಸಾಮ್ರಾಜ್ಯಶಾಹಿ ಬಗ್ಗೆ ಪ್ರಬಂಧ ಮಂಡಿಸಿದ ಸನತ್‌ಕುಮಾರ ಬೆಳಗಲಿ ಅವರು ಅನಂತರ ಪ್ರಶ್ನೆಗಳಿಗೆ ಉತ್ತರಿಸಿದ ರೀತಿ ಮೊಂಡ (ಡಾಗ್ಮ್ಯಾಟಿಕ್) ಕಮ್ಯೂನಿಸ್ಟರ ಶೈಲಿಯಲ್ಲೇ ಇತ್ತು. "ಸಾಮ್ರಾಜ್ಯ ಶಾಹಿ ಅಂದರೆ ಬರಿ ಅಮೇರಿಕನ್ ಸಾಮ್ರಾಜ್ಯಶಾಹಿಯೇ ಅಲ್ಲ. ಇಂದಿನ ಸಂದ ರ್ಭದಲ್ಲಿ ನಾವು ರಶಿಯನ್ ಸಾಮ್ರಾಜ್ಯಶಾಹಿಯನ್ನೂ ಗುರುತಿಸಬೇಕು" ಎಂದು ರಾಮದಾಸ್, ನಾನು ಹಾಗೂ ಇನ್ನೊಬ್ಬ ಸ್ನೇಹಿತರು ಸೂಚಿಸಿದಾಗ ಸನತ್ ಹೇಳಿದರು; "ಇಂಥ ಮಾತುಗಳೆಲ್ಲಾ ಅಮೇರಿಕನ್ ಸಾಮ್ರಾಜ್ಯಶಾಹಿಯ ಪಿತೂ ರಿಯ ಫಲಗಳೇ".... ಇನ್ನು ವಾದ ಮಾಡಿ ಫಲವಿಲ್ಲವೆಂದು ನಾವೆಲ್ಲ ಸುಮ್ಮ ನಾಗಬೇಕಾಯಿತು.

ಶೂದ್ರ ಶ್ರೀನಿವಾಸ್, ಜನಾಂಗದ್ವೇಷ ಹಾಗೂ ಭಯೋತ್ಪಾದನೆ ಕುರಿತು ಒಳ್ಳೆ ಯ ಪ್ರಬಂಧ ಓದಿದರು. ಅವರೂ ಎಂದಿನಂತೆ ಎರಡೂ ದಂಡೆಯ ಮೇಲೆ ಕಾಲು ಇಟ್ಟರು: 'ಗೂರ್ಖಾಲ್ಯಾಂಡಿಗೆ ಮಾನವೀಯ ದೃಷ್ಟಿಯಿಂದ ಸ್ವಾಯ ತ್ತತೆ ಕೊಡಬೇಕು'—ಎಂದ ಉಸಿರಿನಲ್ಲಿಯೇ, 'ಈಗಾಗಲೇ ಬಂಗ್ಲಾದೇಶ ರಚನೆ ಯಿಂದ ಬಂಗಾಲಿಗಳು ಬಹಳ ಕಳಕೊಂಡಿದ್ದಾರೆ, ಆದ್ದರಿಂದ ಬಂಗಾಲ ವಿಭಜನೆ ಮಾಡಿ ಮತ್ತೆ ಅವರಿಗೆ ನೋವುಂಟು ಮಾಡಬಾರದು'- ಎಂದೂ ಹೇಳಿದರು; ಇವರ ಸ್ವಭಾವ, ನಿಲುವು ಅರಿತ ಸ್ನೇಹಿತರು ಇವರೊಂದಿಗೂ ವಾದ ಮಾಡ ಲು ಹೋಗಲಿಲ್ಲ.

ಸಿ. ವೀರಣ್ಣ ಈ ಗೋಷ್ಠಿಯ ಅಧ್ಯಕ್ಷರು. ತಮ್ಮದೇ ದಿಕ್ಕಿನಲ್ಲಿ ವಿವೇಚನೆ ಮಾಡಿ ದ ಅವರು, "ಶಕ್ತಿಯ ಆವಿಷ್ಕಾರ ನಮಗೆ ಅಗತ್ಯ. ನಮ್ಮ ಪರಿಸರವಾದಿಗಳು ಅಣುಸ್ಫೋಟನೆಯ ಬಗ್ಗೆ ಯಾಕೆ ಮಾತಾಡುತ್ತಿಲ್ಲ?" ಎಂಬ ಪ್ರಶ್ನೆ ಮುಂದಿ ಟ್ಟರು ಇಂದಿರಾ, ರಾಜೀವರಂಥವರನ್ನು ದಾಳಗಳನ್ನಾಗಿ ಬಳಸಿಕೊಳ್ಳುತ್ತಿರುವ ಹಿಂದೂ ಫ್ಯಾಶಿಸ್ಟ್ ಶಕ್ತಿಗಳ ಬಗ್ಗೆ ಅವರು ಎಚ್ಚರಿಕೆ ನೀಡಿದರು.

●

ಮುಂದಿನ ಗೋಷ್ಠಿಯಲ್ಲಿ ತಮ್ಮ ಖಡಕ್ ವಿಚಾರಗಳಿಂದ ಸಾಕಷ್ಟು ಬಿಸಿ ಹುಟ್ಟಿ ಸಿದವರು ಮಲ್ಲಿಕಾ ಘಂಟಿ. "ಸತಿ ಪದ್ಧತಿ, ಬೆತ್ತಲ ಸೇವೆ ಮುಂತಾದ ಅನಾಗರಿಕ ಪದ್ಧತಿಗಳು ಇಂದಿಗೂ ಜಾರಿಯಲ್ಲಿರುವ ಈ ದೇಶದಲ್ಲಿ ಮಹಿಳೆ ಮಾರಾಟದ

ರಕಾಗಿಯೇ ಮುಂದುವರೆದಿದ್ದಾಳೆ. ಸಮಾನತೆಯ ಬಗ್ಗೆ ಮಾತಾಡುವ ಗಂಡ
ರು ಮೊದಲು ತಮ್ಮ ಹೆಂಡಂದಿರಿಗೆ ಸಮಾನತೆ ನೀಡಲಿ"—ಎಂದವರು ಅಹ್ವಾ
ವಿತ್ತಾಗ ಸಹಜವಾಗಿಯೇ ಚಪ್ಪಾಳೆಗಳು ಸುರಿದವು. ತಮ್ಮ ತಗ್ಗುದನಿಯಲ್ಲಿ
ತುಂಬ ಪ್ರಬುದ್ಧವಾದ ವಾದಸರಣಿಯನ್ನು ಮಂಡಿಸಿದ ಸಾರಾ ಅಬೂಬಕ್ಕರ
ಧರ್ಮ ಮತ್ತು ಮಹಿಳೆ' ನಡುವಿನ ಸಂಬಂಧಗಳನ್ನು ಆಳದ ನೆಲೆಗಳಲ್ಲಿ ಗುರು
ತಿಸುವ ಪ್ರಯತ್ನ ಮಾಡಿದರು. (ಗುಡಿಬಂಡೆ ಪೂರ್ಣಿಮಾ ಅವರ ಗೈರುಹಾಜರಿ
ಯಲ್ಲಿ ಅವರ ಪ್ರಬಂಧ ಓದಲಾಯಿತು.)

ಅಧ್ಯಕ್ಷ ಭಾಷಣದ ಮುನ್ನ ವೇದಿಕೆಗೆ ಬಂದ ಬಾನು ಮುಸ್ತಾಕ್ ಅವರು ಇಸ್ಲಾಂ
ಧರ್ಮ ಮಹಿಳೆಯರಿಗೆ ನೀಡಿರುವ 'ಹಕ್ಕು' ಗಳನ್ನು ಪಟ್ಟಿ ಮಾಡಿ, ದೀರ್ಘವಾಗಿ
ಮಾತಾಡಿದಾಗ, ಅವರ ಮಾತಿನಲ್ಲಿ ಅನೇಕರಿಗೆ "ಇಸ್ಲಾಂ ಪ್ರತಿಪಾದನೆ"ಯ ಧ್ವನಿ
ಕೇಳಿಸಿದ್ದು ಆಶ್ಚರ್ಯವಲ್ಲ. ಅಧ್ಯಕ್ಷ ರವಿ ಬೆಳಗೆರೆ ಈ ಮಾತು ಆಡಿಯೂ
ಬಿಟ್ಟರು. ತನ್ನ ಯಥಾ ಪ್ರಕಾರದ ಹಗುರ ಶೈಲಿಯಲ್ಲಿ ರವಿ ಮಾತಾಡಿ, ಸಭಿಕರ
ಬಿಗಿದ ನರಗಳನ್ನು ಸಡಿಲು ಮಾಡಿದರು.

●

ಊಟದ ಬಿಡುವಿನಲ್ಲಿ ಪಡ್ಡರಸೆ ರಘುರಾಮಶೆಟ್ಟಿ ಅವರೊಂದಿಗೆ ಅದು ಇದು
ಮಾತಾಡಲು ಟೈಮಿತ್ತು. ಪ್ರಗತಿರಂಗದ ನಂಜನಗೂಡಿನ ಸಭೆಯ ಪ್ರಸ್ತಾಪ
ಬಂತು. "ಆ ಮನುಷ್ಯನ" (ಅರ್ಥಾತ್ ಪಾಳೇಗಾರ ಲಂಕೇಶನ) 'ಪಾಠ ಹೇಳು
ವ' ಶೈಲಿ ಕಂಡು ಜಿಗುಪ್ಸೆಯಾಯಿತಂತೆ ಶೆಟ್ಟರಿಗೆ. ಹೇಳಿದರು: "ನಂಜುಂಡಸ್ವಾಮಿಗೆ
ಜನಶಕ್ತಿ ಇದೆ. ಆದರೆ ಈ ಲಂಕೇಶ್ ಅವನೊಬ್ಬ ಗುಮ್ಮ, ಪೆಡಂಭೂತ ಎಂಬ
ರೀತಿಯಲ್ಲಿ ಬರೆಯುತ್ತಾರೆ. ಅವನು ಪೆಡಂಭೂತವಾದರೆ ಇವನಾರು ? ಇವ
ನೊಬ್ಬ ಮಾರೀಚ. ಇವನು ಮಾಡುತ್ತಿರುವ ಕೆಲಸವೇ ಮಾರೀಚನದು!"

●

ಸಮೂಹ ಮಾಧ್ಯಮಗಳು ಮತ್ತು ಹಿಂದುಳಿದ ವರ್ಗಗಳ ಬಗ್ಗೆ ಪ್ರಬಂಧ ಮಂ
ಡಿಸಿದವರು ಒಡೆಯರ್ ಡಿ. ಹೆಗ್ಗಡೆ. ಅಧಿಕೃತ ಅಂಕಿ ಅಂಶಗಳೊಂದಿಗೆ ವಿವರವಾಗಿ
ಮಾತಾಡಿದ ಅವರು, ಸಾಮಾಜಿಕವಾಗಿ ಸಾಂಸ್ಕೃತಿಕವಾಗಿ ಒಂದು ಫ್ಯಾಸಿಸ್ಟ್ ಶಕ್ತಿ
ಯಾಗಿರುವ ಹಿಂದೂಧರ್ಮದ ಪ್ರಾಧಾನ್ಯವಿರುವ ಈ ದೇಶದಲ್ಲಿ ಸಮೂಹ
ಮಾಧ್ಯಮಗಳು ಹಿಂದುಳಿದ ವರ್ಗದವರಿಗೆ ದಕ್ಕದೇ ಇರುವ ದುರಂತವನ್ನು
ಚೆನ್ನಾಗಿ ಬಿಂಬಿಸಿದರು.

೧೯೭೦ರ ದಶಕದಲ್ಲಿ ಕನ್ನಡ ಸಾಹಿತ್ಯದ ಬಗ್ಗೆ ತಮ್ಮ ಬಿಚ್ಚು ಮಾತಿನ ವಿಮರ್ಶೆಯಿಂದಾಗಿ ಘಟನೆಗಳ ಪರಂಪರೆಯನ್ನೇ ನಿರ್ಮಿಸಿದ ಬಿ. ಬಸವಲಿಂಗಪ್ಪನವರು 'ದಲಿತರಿಗೆ ಬೌದ್ಧಧರ್ಮಕ್ಕೆ ಮತಾಂತರ ಅನಿವಾರ್ಯವೆ ?' ಎಂಬುದರ ಬಗ್ಗೆ ಮಾತಾಡಲು ಎದ್ದು ನಿಂತಾಗ ಸಭಿಕರಲ್ಲಿ ಬಹಳ ಆಸಕ್ತಿ ಇತ್ತು. ಗಾಳಿಗೋಪುರದ ಪುರೋಹಿತ ಸಾಹಿತ್ಯವನ್ನು ಬಹಿಷ್ಕರಿಸಲು ಕರೆಕೊಟ್ಟ ಅವರ 'ಸಾರ್ವಜನಿಕ ಭಾಷಣ'ದ ಶೈಲಿಯಲ್ಲಿ ವಿಷಯದ ಆಳವಾದ ವಿವೇಚನೆಗೆ ಅವಕಾಶವೇ ಇರಲಿಲ್ಲ. ಅವರು ಸಮಸ್ಯೆಗಳನ್ನು ಸೂತ್ರಬದ್ಧವಾಗಿ ಸರಳೀಕರಿಸುತ್ತಿದ್ದಂತೆ ತೋರಿತು.

"ಜನಪರ ಚಳುವಳಿಗಳು: ಮುಂದೇನು?" ಎಂಬುದರ ಬಗ್ಗೆ ಡಾ॥ ಪಿ. ಶಿ. ರಾಮಚಂದ್ರೇಗೌಡರು ನಮ್ಮ ನೆಲದ ರೈತ ಚಳುವಳಿ, ದಲಿತ ಚಳುವಳಿ, ಭಾಷಾ ಚಳುವಳಿಗಳನ್ನು ಸಮಾಜ ಶಾಸ್ತ್ರೀಯ ಹಿನ್ನೆಲೆಯಲ್ಲಿ ವಿಶ್ಲೇಷಿಸಿ, ರಾಷ್ಟ್ರೀಯತೆ ದೇಶೀಯತೆಗಳ ಪರಿಕಲ್ಪನೆಗಳ ಬಗ್ಗೆ ಅನೇಕ ಒಳನೋಟಗಳುಳ್ಳ ಮಾತು ಹೇಳಿದರು. ಕರ್ನಾಟಕದ ಜನತಾ ಸರಕಾರದಲ್ಲಿ ದಲಿತ ವರ್ಗದ ಆಸೆಗಳು ಕಮರುತ್ತಿರುವ ಕತೆಯನ್ನು ಎಲ್. ಹನುಮಂತಯ್ಯ ಹೇಳುತ್ತ, "ಈ ದೇಶದಲ್ಲಿ ಬಂಡವಾಳಶಾಹಿ, ಪುರೋಹಿತಶಾಹಿಗಳು ನೆಲ ಹಿಡಿದು ಕುಂತಿರುವವರೆಗೆ ಇಲ್ಲಿ ಎಡ ಸರಕಾರ ಬಂದರೂ ಅಸ್ಪೃಶ್ಯತೆ ಮಾಯವಾಗುವುದಿಲ್ಲ" ಎಂದು ಸ್ಪಷ್ಟಪಡಿಸಿದರು.

ವಡ್ಡರಸೆ ಈ ಗೋಷ್ಠಿಯ ಅಧ್ಯಕ್ಷರು. ಗಡಸು ದನಿಯ ಅವರ ಗ್ರಾಂಥಿಕ ಶೈಲಿ ಶಿಸ್ತಿನಿಂದ ಬಾಂಬುಗಳನ್ನು ಒಗೆಯುವ ಯೋಧನ ರೀತಿಯದಾಗಿತ್ತು. ಈ ದೇಶದ ಶೂದ್ರರನ್ನು, ದಲಿತರನ್ನು ದಾರಿತಪ್ಪಿಸುತ್ತಲೆ ಬಂದಿರುವ ಬ್ರಾಹ್ಮಣ ಶಕ್ತಿಯನ್ನು ಕಟುವಾಗಿ ವಿಡಂಬಿಸಿದ ಅವರು, ಈ 'ಹಾಳು ಹಿಂದೂ ಸಮಾಜ' ವನ್ನು ಧ್ವಂಸ ಮಾಡಲು ಎಲ್ಲ ನೆಲೆಯಲ್ಲಿ ಬಂಡಾಯ ನಮ್ಮ ಬದುಕಿನ ಬಗೆಯಾಗಬೇಕು ಎಂದು ಒತ್ತಿ ಹೇಳಿದಾಗ ಸಭೆಯಲ್ಲಿ ಗಂಭೀರ ಮೌನ ಆವರಿಸಿತ್ತು.

●

ಬಸವಲಿಂಗಪ್ಪನವರ 'ಚಾರಿತ್ರಿಕ ಮಹತ್ವ'ದ ಬಗ್ಗೆ ವಡ್ಡರಸೆ ನಾಲ್ಕು ಮಾತುಗಳಲ್ಲಿ ಹೇಳಿದ್ದನ್ನು ಶೂದ್ರ ಶ್ರೀನಿವಾಸ, "ಏನು! ಎದುರಿಗೆ ಕೂಡ್ರಿಸಿಕೊಂಡು ಚೆನ್ನಾಗಿ ಹೊಗಳಿ ಬಿಟ್ಟಿರಲ್ಲ!"? ಎಂದು ಉಡಾಫೆ ಮಾತಾಡಿದಾಗ, ವಡ್ಡರಸೆ ಹೇಳಿದರು: "ನೀನೊಬ್ಬ 'ಶೂದ್ರ' ಎಂಬ ಹೆಸರಿಟ್ಟುಕೊಂಡ ಬ್ರಾಹ್ಮಣ. ಅಷ್ಟೇ. ಕಾಲ ಪ್ರವಾಹದಲ್ಲಿ ನಿಮ್ಮಂಥವರು ಚಿಂದಿಯಾಗಿ ಹೋಗುತ್ತಾರೆ." ಎಂದಾಗ, ಸುತ್ತ ಕುತೂಹಲದಿಂದ ಸೇರಿದವರಿಗೆಲ್ಲ ಆ ಮಾತು ಆಡಬಾರದ ಮಾತೆಂದೇನೂ ಅನ್ನಿಸ

ಲ್ಲಿ. ಯಾರು ಏನೇ ಅಂದರೂ ಶೂದ್ರ ಶ್ರೀನಿವಾಸ್ ಮಾತ್ರ ನಗುನಗುತ್ತಲೇ
ನೈವೇದ್ಯ ಸ್ವೀಕರಿಸುತ್ತಿದ್ದರು—ಬ್ರಾಹ್ಮಣ ಶೈಲಿಯಲ್ಲಿ.

●

ಇಡೀ ಸಮ್ಮೇಳನದಲ್ಲಿ 'ಸಾಹಿತ್ಯ'ದ ಬಗ್ಗೆ ಇದ್ದ ಗೋಷ್ಠಿ ಒಂದೇ ಒಂದು
ಮಾತ್ರ. ರಾಜಶೇಖರ ನೀರಮಾನ್ವಿ ಅಧ್ಯಕ್ಷತೆಯಲ್ಲಿ ಕುಂವೀ ಕತೆಗಳು. ಚಂಪಾ
ಕಾವ್ಯ, ಬರಗೂರ ಕಾದಂಬರಿ ಮತ್ತು ಚೆನ್ನಣ್ಣನ ಕಾವ್ಯದ ಬಗ್ಗೆ ಫಕೀರ
ಮುಹಮ್ಮದ ಕಟ್ಪಾಡಿ. ಅಶೋಕ ಶೆಟ್ಟರ, ಗುಡಿಹಳ್ಳಿ ನಾಗರಾಜ ಹಾಗೂ ಗಂಗಾ
ರಾಮ ಚಂಡಾಲರ ವಿಚಾರಗಳನ್ನು ಕೇಳುವ ಅವಕಾಶವಿತ್ತು. ಇಲ್ಲಿ ಕೂಡ ಸಾಹಿ
ತ್ಯದ ನೆಲೆಗಳನ್ನು ನಮ್ಮ ಸಾಮಾಜಿಕ-ಸಾಂಸ್ಕೃತಿಕ ವಾಸ್ತವದ ಕಕ್ಷೆಯಲ್ಲಿಯೇ
ಗುರುತಿಸುವ ಪ್ರಯತ್ನ. ನಮ್ಮ 'ಸಾಹಿತ್ಯ ವಿಮರ್ಶೆ' ಅನಿವಾರ್ಯವಾಗಿ ಪಡೆದು
ಕೊಳ್ಳುತ್ತಿರುವ ಹೊಸ ಆಯಾಮಗಳಿಗೆ ದಿಕ್ಸೂಚಿಯಾಗಿತ್ತು.

●

ಕವಿಗೋಷ್ಠಿಯಲ್ಲಿ ಪಾಲುಗೊಂಡವರು ಸುಮಾರು ೫೦ ಕವಿಗಳು. ಇಂಥ ಗೋಷ್ಠಿ
ಗಳಿಗೆ ನಾನು ಯಾವಾಗಲೂ 'ಗೌರೀಶಂಕರ ಯಾತ್ರಾ ಟ್ರೇನು' ಎಂದು ಕರೆಯು
ತ್ತೇನೆ. ಎಲ್ಲರಿಗೂ ಜಾಗವಿದೆ ಇಲ್ಲಿ. ಆದರೂ ಓದಿದವರಲ್ಲಿ ಕೆಲವರಾದರೂ
ಬದುಕಿನ ವಾಸ್ತವಗಳಿಗೆ ಜೀವಂತವಾಗಿ ಸ್ಪಂದಿಸಿ ಅದನ್ನು ಕಲೆಯಾಗಿ ಮಾಡಿಸು
ವಲ್ಲಿ ಯಶಸ್ವಿಯಾಗಿದ್ದರು.

ಅಧ್ಯಕ್ಷತೆ ವಹಿಸಿದ ಎಚ್. ಎಸ್. ಶಿವಪ್ರಕಾಶ, ಅತ್ಯಂತ ಸ್ಪಷ್ಟವಾದ ಶಬ್ದ
ಗಳಲ್ಲಿ, ನವ್ಯ ಹಾಗೂ ಬಂಡಾಯದ ಬಗ್ಗೆ ತಮ್ಮ ಅಭಿಪ್ರಾಯ ಹೇಳಿದರು.
ನವ್ಯರ ಕೊಡುಗೆಯನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಆದರೆ ಕೇವಲ ಅಕ್ಷರ
ರೂಪಕ್ಕೆ ಮಿತಿಗೊಂಡಿದ್ದ ಹಾಗೂ ಅತಿ–ಅಂತರ್ಮುಖತೆಗೆ ಬಲಿಯಾದ ನವ್ಯ
ಕಾವ್ಯದ ಬಗ್ಗೆ ಓದುಗರು ಬೇಸತ್ತಿದ್ದಾರೆ. ಈಗ ಅನಿವಾರ್ಯವಾಗಿ ಕನ್ನಡ ಕಾವ್ಯ
ಸಾಮಾಜಿಕ ರಾಜಕೀಯ ಆತ್ಯಪ್ತಿಗೆ ದನಿ ಕೊಡುವಲ್ಲಿ ಹಾಗೂ ಮತ್ತೊಮ್ಮೆ
ಹಾಡಿನ ಮಾದರಿಯನ್ನು ಹೊಂದುತ್ತಿರುವಲ್ಲಿ ಹೊಸ ಹೆಜ್ಜೆ ಇಡುತ್ತಿದೆ. ಪದ್ಯವು
ಗದ್ಯವಾಗುವ, ಹಾಡು ಯಾಂತ್ರಿಕ ಲಯವಾಗುವ ಅಪಾಯವಿದ್ದರೂ, ಅದನ್ನು
ಮೀರಿ ಅನೇಕರು ಒಳ್ಳೆಯ ಕಾವ್ಯ ಬರೆಯುತ್ತಿದ್ದಾರೆ" ಅಂದರು ಶಿವಪ್ರಕಾಶ್.
ಪರಂಪರೆಯ ನೆನಪುಗಳನ್ನು ಅರಗಿಸಿಕೊಳ್ಳುತ್ತಲೇ ನಾವು ಬುದ್ಧನಂತೆ, ಶರಣ
ರಂತೆ 'ಜಂಗಮ'ವಾಗಿ ಮುಂದುವರೆಯಬೇಕು. ೨೦ನೆಯ ಶತಮಾನದ ವಿಶಿಷ್ಟ

ಸಮಸ್ಯೆಗಳಾದ ಅಂತಾರಾಷ್ಟ್ರೀಯ ಬಂಡವಾಳಶಾಹಿ, ನವವಸಾಹತುಶಾಹಿ, ಪುರೋಹಿತಶಾಹಿಯ ಆಹ್ವಾನಗಳನ್ನು ನಾವು ಸ್ವೀಕರಿಸಬೇಕು—ಎಂಬ ಅವರ ಮಾತು ಇನ್ನೂ ನವ್ಯದ ನೊಸ್ಟಾಲ್ಜಿಯಾದಲ್ಲಿ ಕನವರಿಸುತ್ತಿರುವ ಕೆಲವು ಕವಿಗಳಿಗೆ. ಹಲವು ವಿಮರ್ಶಕರಿಗೆ ನೇರವಾಗಿ ಹೇಳುವಂತಿದ್ದವು.

ಕುಂ. ವೀರಭದ್ರಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಹಳೆಯ ಮುಖಗಳೆಲ್ಲ-ಬರಗೂರ್, ಪಾಲೀಕಾರ್, ಚಂಪಾ, ದರ್ಗಾ ಮುಂತಾದವರು ಹತ್ತು ನಿಮಿಷ ಮಾತ್ರ ವಿನಾಗಿ, ಬಂಡಾಯ ಪರಂಪರೆಯ ಪ್ರವಾಹ ಗುಣವನ್ನೇ ಒತ್ತಿ ಹೇಳಿದವು.

●

ಮತ್ತೆ ತಿಮ್ಮರಾಜು ಹಾಡಿದ ಸಾಲುಗಳೇ ನೆನಪಾಗುತ್ತವೆ. ಶಬ್ದದಲ್ಲಿ. ನಾದದಲ್ಲಿ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಂಡುಬಿಡುವ ಅಪರೂಪದ ಹಾಡುಗಾರ ತಿಮ್ಮರಾಜು. ಅವರು ಮೈದುಂಬಿ ಹಾಡಿದ—

ಆ ಬೆಟ್ಟದಲ್ಲಿ ಬೆಳದಿಂಗಳಲ್ಲಿ
ಸುಳಿದಾಡಬೇಡ ಗೆಳತೀ...

—ಸಾಲುಗಳು ಬಂಡಾಯದ ಮೂಲಸೆಲೆ ಬದುಕಿನ ಪ್ರೀತಿಯೇ ಎಂಬುದನ್ನು ಗುಂಗಾಗಿ ಮಾರ್ದನಿಸುತ್ತಿದ್ದವು. ಎರಡು ದಿನದ ಸಮ್ಮೇಳನದ ಯಶಸ್ವಿಗೆ ಹಗಲಿರುಳು ಶ್ರಮಿಸಿದ ಚನ್ನಬಸವಣ್ಣ., ಅಲ್ಲಮಪ್ರಭು. ನೀರವಸ್ವಾ ಮುಂತಾದ ಬಂಡಾಯ ಗೆಳೆಯರ ಮುಖದ ಮೇಲೆ ಸಂತೃಪ್ತಿಯ ಕಳೆ ತಂದಿದ್ದವು. ●

ಡಾ। ಬಾಬಾಸಾಹೇಬ ಅಂಬೇಡ್ಕರರ

ಹಿಂದೂ ಧರ್ಮದ ನಿಗೂಢಗಳು

Riddles of Hinduism

ಕನ್ನಡ ಅನುವಾದ : ಡಾ। ಮನಜ

ಡೆಮಿ ೧/೮: ೪೦೦ ಪುಟ

ಮುಖಬೆಲೆ ರೂ. ೫೦ : ಪ್ರಕಟನಾಪೂರ್ವ ಬೆಲೆ ರೂ. ೩೫

ಸಿದ್ಧಾರ್ಥ ಗ್ರಂಥಮಾಲೆ

೯-೪೮, ೧ನೇ ಹಂತ ಕುವೆಂಪುನಗರ, ಮೈಸೂರು-೨೩

ದಿ ಕರ್ನಾಟಕ ಸೆಂಟ್ರಲ್ ಕೋ-ಅಪರೇಟಿವ್ ಬ್ಯಾಂಕ ಲಿ., ಧಾರವಾಡ.

(23. 11. 1916 ರಂದು ದಿವಂಗತ ಎಸ್. ವಿ. ಮೆಣಸಿನಕಾಯಿ, ಇವರಿಂದ ಸ್ಥಾಪಿಸಲ್ಪಟ್ಟ)

....

ಕರ್ನಾಟಕ ರಾಜ್ಯದಾದ್ಯಂತ ಹೆಸರು ವಾಸಿಯಾದ, ವಜ್ರ ಮಹೋತ್ಸವವನ್ನು ಆಚರಿಸಿದ ಪ್ರಥಮ ದರ್ಜೆಯ 86 ಶಾಖೆಗಳುಳ್ಳ ಜಿಲ್ಲಾ ಮಧ್ಯವರ್ತಿ ಸಹಕಾರಿ ಬ್ಯಾಂಕ.

ದೂರವಾಣಿ:	ಅಧ್ಯಕ್ಷರು	80188 (ಆಫೀಸ)	67399 (ಮನೆ	
	ವ್ಯ. ನಿರ್ದೇಶಕರು	80187 "		
	ಪ್ರ. ವ್ಯವಸ್ಥಾಪಕರು	80187 "	8652	"
	ಉಪ ಪ್ರ. ವ್ಯವಸ್ಥಾಪಕರು (ಲೆಕ್ಕ)	80186 "	—	

ಜೂನ ಅಖೈರಕ್ಕೆ ಇದ್ದಂತೆ (ರೂ. ಲಕ್ಷಗಳಲ್ಲಿ)

	1986.	1987.		1986.	1987
ಅಧಿಕೃತ ಭಾಂಡವಲ	600.00	600.00	ಗುಂತಾಯಿಸಿದ	928.00	931.45
ಸಂದಾಯವಾದ ಶೇರ ಭಾಂಡವಲ.	338.16	353.83	ಸರ್ಕಾರ ಭದ್ರತಾ ಪತ್ರದ ಮುದ್ದತೀ ತೇವಿನಲ್ಲಿ		
ಧಿಗಳು.	124.86	115.81	ಒಟ್ಟು ಕೊಟ್ಟ ಸಾಲ	5081.75	5650.02
ವುಗಳು.	3572.72	3574.10	ದುಡಿಯುವ ಭಾಂಡವಾಲು	6671.23	6933.04
ರಗಿನಿಂದ ತಂದ ಲಗಳು.	2164.57	2498.61			

ಈ ಬ್ಯಾಂಕಿನ ಯಾವತ್ತೂ ಆಫೀಸುಗಳಲ್ಲಿ ಚಾಲ್ತಿ, ಸೇವಿಂಗ್ಸ, ಬ್ಯಾಂಕ, ಸ್ಪೇಶಲ್ ಕ್ಯೂಮುಲೇಟಿವ್ ಒಂದು ತಿಂಗಳಿಂದ ಹತ್ತು ವರ್ಷಗಳ ಮುದ್ದತ್ ಠೇವುಗಳು, ಸ್ವೀಕರಿಸಲ್ಪಡುವವು. ಇದಲ್ಲದೇ ಅತ್ಯಂತ ಹೆಚ್ಚಿಗೆ ಬಡ್ಡಿಗಳಿಸುವ ಹತ್ತು ವರ್ಷ ಅವಧಿಯ "ಶ್ರೀ ಲಕ್ಷ್ಮೀ" ಠೇವುಗಳಿಗಾಗಿ ವಿಚಾರಿಸಿರಿ. ಹಾಗೂ ಪಿಗ್ಮಿ ಠೇವುಗಳನ್ನು ಶೇಖರಿಸಲಾಗುತ್ತದೆ. ರೂ.30,000-00 ಗಳವರೆಗೆ ಠೇವುಗಳಿಗೆ ಡಿಪಾಜಿಟ್ ಇನ್ಸುರನ್ಸ ಭದ್ರತೆ ಇದೆ.

ಧಾರವಾಡ ಹೆಡ್ ಆಫೀಸ, ಮಾಳಮಡ್ಡಿ, ರಾಣೆಬೆನ್ನೂರ ಮತ್ತು ಹುಬ್ಬಳ್ಳಿ ಶಾಖೆಗಳಲ್ಲಿ ಭದ್ರವಾಗಿಡಲು ಲಾಕರುಗಳು ಸಿಗುತ್ತವೆ.

ಹೆಚ್ಚಿನ ಮಾಹಿತಿಗಾಗಿ ಸಮೀಪದ ಶಾಖೆಯಲ್ಲಿ ವಿಚಾರಿಸಬಹುದು.

ವಿ. ಗೋವಿಂದರೆಡ್ಡಿ, ಜೆ. ಬಿ. ಸಲೋಗಲ್, ವಾಯ್. ಬಿ. ಬಸನಗೌಡರ,
ಎಂ. ಎ. ಎಚ್‌ಡಿಸಿ. ಉಪಾಧ್ಯಕ್ಷರು ಅಧ್ಯಕ್ಷರು
ವ್ಯವಸ್ಥಾಪದ ನಿರ್ದೇಶಕರು.

ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ ನಿಯಮಿತ

ನಂ. 1 ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018
(ಷೆಡ್ಯೂಲ್ಡ ಸಹಕಾರಿ ಬ್ಯಾಂಕ್)
ಟೆಲೆಕ್ಸ :0845-2074 ಅಪೆಕ್ಸ್ ಇನ್: ದೂರವಾಣಿ 602324, 602374
606782, 602424

ಪ್ರಮುಖ ಲಕ್ಷಣಗಳು

	(ರೂ. ಲಕ್ಷಗಳಲ್ಲಿ)
ಠೇವಣಿಗಳು	15200.14
ಪಡೆದ ಸಾಲುಗಳು	3292.81
ಸಾಲಗಳು ಮತ್ತು ಮುಂಗಡಗಳು	17100.28
ದುಡಿಯುವ ಬಂಡವಾಳ	22933.62

ಠೇವಣಾತಿಗಳ ಮೇಲೆ ನಾವು ಇತರ ಬ್ಯಾಂಕುಗಳಿಗಿಂತ ಹೆಚ್ಚಿನ ಬಡ್ಡಿದರ ನೀಡುತ್ತೇವೆ. ಅವಧಿ ಠೇವಣಾತಿಗಳ ಮೇಲೆ-ಶೇಕಡ $3\frac{1}{4}$ ರಿಂದ ಶೇಕಡ $10\frac{1}{4}$ ರತನಕ ಉಳಿತಾಯ ಖಾತೆ ಠೇವಣಾತಿಗಳ ಮೇಲೆ ಶೇಕಡ $5\frac{1}{4}$. ತಮಗಾಗಿ ಅನೇಕ ಆಕರ್ಷಕ ಉಳಿತಾಯ ಯೋಜನೆಗಳು ನಮ್ಮಲ್ಲಿವೆ. ನಮ್ಮ 31 ಶಾಖೆಗಳಲ್ಲಿ ಯಾವುದಾದರೊಂದನ್ನು ಸಂಪರ್ಕಿಸಿ.

ಜಿ. ಎಸ್. ಹೆಗಡೆ ಅಜ್ಜೀಬಳ, ಎಂ. ಎನ್. ನಾಗಭೂಷಣ್, ಕೆ. ಜೈರಾಜ್
ಐ. ಎ. ಎಸ್
ಅಧ್ಯಕ್ಷರು ಉಪಾಧ್ಯಕ್ಷರು ವ್ಯವಸ್ಥಾಪಕ ನಿರ್ದೇಶಕರು

ಸಂಕ್ರಮಣ ಪ್ರಕಾಶನ, ಧಾರವಾಡ

ಇದೀಗ ಬಿಡುಗಡೆಯಾಗಿದೆ

ಡಾ. ಮಾನಜ (ಮ. ನ. ಜವರಯ್ಯ) ಅವರ ಕಾದಂಬರಿ

ಮಾಗಿ

ಮುಖ ಬೆಲೆ : ೨೫ ರೂ. ರಿಯಾಯ್ತಿ ಬೆಲೆ : ೨೦ ರೂ.

ಬರಲಿರುವ ಕೃತಿಗಳು

ಚಂದ್ರಶೇಖರ ಪಾಟೀಲರ ಏಳನೆಯ ಕವನಸಂಕಲನ

ಅರ್ಧಸತ್ಯದ ಹುಡುಗಿ

ಮುಖ ಬೆಲೆ : ೧೫ ರೂ. ರಿಯಾಯ್ತಿ ಬೆಲೆ : ೧೨ ರೂ.

ಈ ಪ್ರಕಟನೆಗಳೂ ನಮ್ಮಲ್ಲಿ ಲಭ್ಯ

ಕನ್ನಡ ನಾಡಿಗೊಂದು ಪ್ರಾದೇಶಿಕ ಪಕ್ಷ : ಸಂ–ಚಂಪಾ	೩=೦೦
'ಕಾವ್ಯಾನಂದ'ರ ಕಾವ್ಯ (ವಿಮರ್ಶೆ) : ವೃಷಭೇಂದ್ರ ಅರ್ಕಸಾಲಿ	೫=೦೦
ಕಾರ್ಯ (ಕಾದಂಬರಿ) : ಅರವಿಂದ ಮಾಲಗತ್ತಿ	೧೫=೦೦
ಕಪ್ಪು ನಾಡಿನ ಕೆಂಪು ಸೂರ್ಯ : ಸಂ–ಹಿ. ಮ. ಗುರುಬಸವರಾಜ	೧೨=೦೦

ಲೇಖಕರ ಗಮನಕ್ಕೆ

- ಸಂಕ್ರಮಣ ಪ್ರಕಾಶನವು ವ್ಯಾಪಕವಾಗಿ ಪುಸ್ತಕ ಪ್ರಕಟನಾ ಕಾರ್ಯ ಕೈ ಕೊಳ್ಳಲಿದ್ದು ಸಂಕ್ರಮಣ ಬಳಗದ ಲೇಖಕರು ಇದರ ಪ್ರಯೋಜನ ಪಡೆಯಬಹುದು. ವಿವರ ಬೇಕಿದ್ದರೆ ಬರೆಯಿರಿ.
- ನಿಮ್ಮ ಹೊಸ ಪ್ರಕಟನೆಗಳ ಜಾಹಿರಾತುಗಳನ್ನು ಕೇವಲ ಒಂದು ನೂರು ರೂ.ಗಳ ರಿಯಾಯ್ತಿ ದರದಲ್ಲಿ 'ಸಂಕ್ರಮಣ'ದಲ್ಲಿ ಪ್ರಕಟಿಸಲು ಅವಕಾಶವಿದೆ.

ಸಂಕ್ರಮಣ ಪ್ರಕಾಶನದ ಬೃಹತ್ ಯೋಜನೆ

ಕನ್ನಡ ಲೇಖಕರ ವಿಳಾಸಗಳು

- ಹಲವು ದಿಕ್ಕಿನಲ್ಲಿ ಹಬ್ಬುತ್ತಿರುವ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃತಿ ರಚನೆ ಮಾಡುತ್ತಿರುವ ಎಲ್ಲ ಸಮಕಾಲೀನ ಕನ್ನಡ ಲೇಖಕರ ಹೆಸರು–ವಿಳಾಸಗಳ ಬೃಹತ್ ಸಂಗ್ರಹ.

- ಪತ್ರಿಕೆಗಳಿಗೆ, ಲೇಖಕರಿಗೆ, ಓದುಗರಿಗೆ, ಪ್ರಕಾಶಕರಿಗೆ, ಸಭೆ–ಸಮ್ಮೇಳನ-ವಿಚಾರಸಂಕಿರಣ ಏರ್ಪಾಡು ಮಾಡುವವರಿಗೆಲ್ಲ ಒಂದು ಉಪಯುಕ್ತ ಕೈಪಿಡಿ.

- ಈ ಸಂಕಲನದಲ್ಲಿ ದಾಖಲೆಗೊಳ್ಳಬಯಸುವ ಲೇಖಕರು ತಮ್ಮ ಹೆಸರು-ವಿಳಾಸ ಪಿನ್‌ಕೋಡ-ಫೋನ ನಂಬರು ಇತ್ಯಾದಿ ವಿವರ ತಿಳಿಸಬೇಕೆಂದು ಕೋರಲಾಗಿದೆ.

- ಲೇಖಕರು ತಮ್ಮ ಪ್ರತಿಗಾಗಿ ಮುಂಗಡವಾಗಿ ರೂ. ೧೫. (ರೂ. ೧೨ ಸಂಕಲನ + ರೂ. ೩. ಅಂಚೆವೆಚ್ಚ) ಎಂ.ಓ. ಅಥವಾ ಡಿ.ಡಿ. ಮೂಲಕ ಕಳಿಸಬೇಕು.

- ವಿವರಗಳಿಗಾಗಿ ಬರೆಯಿರಿ :

ಸಂಕ್ರಮಣ ಪ್ರಕಾಶನ
ಸಾಧನಕೇರಿ
ಧಾರವಾಡ–೫೮೦ ೦೦೮
(ಫೋನ : ೮೦೫೦೯)

(ವಿ. ಸೂ. : ಸಂಕ್ರಮಣದ ಚಂದಾದಾರರಾಗಿರುವ ಲೇಖಕರಿಗೆ ಪ್ರತ್ಯೇಕವಾಗಿ ಪತ್ರ ಕಳಿಸಲಾಗಿಲ್ಲ. ಈ ಸ್ನೇಹಿತರು ಕೂಡಲೇ ಪುಸ್ತಕದಲ್ಲಿ ದಾಖಲೆಯಾಗಬೇಕಾದ ತಮ್ಮ ವಿಳಾಸವನ್ನು ಖಚಿತ ಪಡಿಸಿ, ರೂ. ೧೫/– ಗಳನ್ನು, ಎಂ. ಓ. ಮಾಡಬೇಕೆಂದು ಕೋರಿಕೆ.)

ಜ್ಯದ ನಿಸ್ಸಹಾಯಕ ಹೆಣ್ಣುಮಕ್ಕಳಿಗೆ 'ಅರಿಶಿನ-ಕುಂಕುಮ'ದ ಕೊಡುಗೆ

ದೇವದಾಸಿ ಪದ್ಧತಿಯ ನಿರ್ಮೂಲನ ಹಾಗೂ ಅವರ ಪುನರುದ್ಧಾರ

ರೆ ತಲಾಂತರದಿಂದ ಬಂದಿದ್ದ ದೇವದಾಸಿ ಪದ್ಧತಿಯಂಥ ಹೀನ ಸಂಪ್ರದಾಯದ ಮಾಜಿಕ ಪಿಡುಗನ್ನು ತೊಡೆದು ಹಾಕಲೆಂದು ಕರ್ನಾಟಕ ದೇವದಾಸೀ (ಸಮರ್ಪಣಾ ಷೇಧ) ಕಾನೂನನ್ನು ಜಾರಿಗೊಳಿಸಲಾಗಿದೆ.

ಾವ ಸ್ತ್ರೀಯನ್ನೂ ದೇವರು, ದೇವಾಲಯ ಅಥವಾ ಧಾರ್ಮಿಕ ಸಂಸ್ಥೆಯ ಸರಿನಲ್ಲಿ ಸಮರ್ಪಿಸುವುದನ್ನು ಈ ಕಾನೂನು ನಿಷೇಧಿಸುತ್ತದೆ. ಅಲ್ಲದೆ ಅಂತಹ ಪರಾಧಗಳ ಶೋಧನೆ, ವಿಮುಕ್ತಿಗೊಂಡ ಮಹಿಳೆಯರ ಪಾಲನೆ ರಕ್ಷಣೆ, ಆಕೆಯ ್ಯಾಣ ಹಾಗೂ ಪುನರುದ್ಧಾರಕ್ಕೂ ಈ ಕಾನೂನು ಅನುವು ಮಾಡಿಕೊಡುತ್ತದೆ. ಕಾನೂನಿನ ಉಲ್ಲಂಘನೆಯ ಅಪರಾಧಗಳಿಗೆ ರೂ. 2000ದಿಂದ5000 ರೂ. ವರೆಗೆ ಜುಲ್ಮಾನೆ ವಿಧಿಸಬಹುದಾಗಿದೆ.

ಗೆ ವಿಮುಕ್ತಿಗೊಂಡ ಮಹಿಳೆಯ ವಿವಾಹ ಆಕೆಯ ಪುನರುದ್ಧಾರದ ಶ್ರೇಷ್ಠ ಾರ್ಗ. ಇಂತಹ ಮದುವೆಗಳಿಗೆ ಉತ್ತೇಜನ ನೀಡುವ ಸಲುವಾಗಿ ರಾಜ್ಯ ಸರ್ಕಾರ ದಂಪತಿಗಳಿಗೆ 3000—00 ರೂ.ಗಳ ಪ್ರೋತ್ಸಾಹ ಧನವನ್ನು ನೀಡುತ್ತದೆ. ಪ್ರೋತ್ಸಾಹ ಧನವನ್ನು ಪಡೆಯಲು ಯುವಕರು 21ವರ್ಷದ ಮೇಲ್ಪಟ್ಟವ ಗಿದ್ದು ಮಾಹೆಯಾನ 500 ರೂ.ಗಳ ಖಚಿತ ಸಂಪಾದನೆಯುಳ್ಳವರಾಗಿರಬೇಕು. ವಾಹವಾಗುವ ದೇವದಾಸಿಯರು 18ರಿಂದ 35 ವರ್ಷ ವಯಸ್ಸಿನವರಾಗಿದ್ದು ರ್ನಾಟಕದಲ್ಲಿ ಕನಿಷ್ಠ 2 ವರ್ಷಗಳಿಂದ ವಾಸವಾಗಿರಬೇಕು.

ದರೊಂದಿಗೆ, ಇನ್ನೂ ಅನೇಕ ಯೋಜನೆಗಳನ್ನು ರಾಜ್ಯ ಸರ್ಕಾರ ದೇವದಾಸಿ ರ ಪುನರುದ್ಧಾರಕ್ಕಾಗಿ ಹಮ್ಮಿಕೊಂಡಿದೆ. ಜನತಾ ಮನೆಗಳ ನೀಡಿಕೆ ಈ ಯೋ ನೆಗಳಲ್ಲೊಂದು. ಇದರೊಂದಿಗೇ ದೇವದಾಸಿಯರಿಗೆ ಸಾಲಗಳನ್ನು ಹಾಗೂ ಪ್ರೋ ್ಸಾಹ ಧನವನ್ನು ನೀಡಿ ತನ್ಮೂಲಕ ಅವರು ಸಣ್ಣ ಕೈಗಾರಿಕೆ, ಹೈನುಗಾರಿಕೆ ಂತಾದ ವ್ಯಾಪಾರ, ಉದ್ಯೋಗಗಳನ್ನು ಪ್ರಾರಂಭಿಸಿ ಆರ್ಥಿಕವಾಗಿ ಸ್ವಾತಂ ವನ್ನು ಪಡೆಯುವಂತೆ ಮಾಡಲಾಗುವದು.

ಲ್ಲದೆ ಸೌಂದತ್ತಿ ಮತ್ತು ಅಥಣಿಗಳಲ್ಲಿ ಅಬಲಾಶ್ರಮಗಳನ್ನು ರಾಜ್ಯ ಸರ್ಕಾರ ಾಪಿಸಿದೆ. ಇಲ್ಲಿ ದೇವದಾಸಿ ಜೀವನವನ್ನು ತೊರೆದ ಮಹಿಳೆಯರಿಗೆ ಆಶ್ರಯ ಡಲಾಗುತ್ತಿದೆ.

ಬಗ್ಗೆ ಹೆಚ್ಚಿನ ಮಾಹಿತಿಗಾಗಿ ನಿಮ್ಮ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ಹಾಯಕ ನಿರ್ದೇಶಕರನ್ನು ಸಂಪರ್ಕಿಸಿ.

ಅಸಹಾಯಕರಿಗೊಂದು ಸಹಾಯದ ಯೋಜನೆ.

'ಕರ್ನಾಟಕ ವಾರ್ತೆ'

ಜನವರಿ ೧೯೮೮

No. R. N. 29730/76 No. KRNG 97
Licenced to Post Without Prepayment
Licence No. WPP-31

ಕರ್ನಾಟಕ ಸಾಹಿತ್ಯ ಅಕಾದೆಮಿ

ನೃಪತುಂಗ ರಸ್ತೆ—ಬೆಂಗಳೂರು— ೫೬೦೦೦೨.

ಕನ್ನಡಿಗರಾದ ನಮಗೆ ನಮ್ಮ ಭಾರತೀಯ
ಪರಿಸರದ ಸೋದರ ಭಾಷೆಗಳಲ್ಲಿ ಯಾವ
ಸೃಜನಾತ್ಮಕ ಕಾರ್ಯಗಳು ನಡೆಯುತ್ತಿವೆ
ಎಂಬುದು ಗೊತ್ತೇ ಇಲ್ಲ.

ಹಾಗೆ ಗೊತ್ತಾಗುವುದು ನಿಜವಾಗಿಯೂ ಅಗತ್ಯ
ವೆಂದು ನಿಮಗೆ ಅನ್ನಿಸುವುದಿಲ್ಲವೆ ?

ಹಾಗಾದರೆ, ಕರ್ನಾಟಕ ಸಾಹಿತ್ಯ ಅಕಾದೆಮಿಯು
ಪ್ರಕಟಿಸುತ್ತಿರುವ

"ಚಂದನ"

ತ್ರೈಮಾಸಿಕ ಪತ್ರಿಕೆಗೆ ಚಂದಾದಾರರಾಗಿರಿ.
ವಾರ್ಷಿಕ ಚಂದಾ ಕೇವಲ ಹತ್ತು ರೂಪಾಯಿಗಳು.

ಇದರ ಜತೆಗೆ ಕನ್ನಡ ಸಾಹಿತ್ಯದ ಸಾಧನೆಗಳನ್ನು
ಕನ್ನಡೇತರ ಭಾಷಾ ಸಾಹಿತ್ಯ ಪರಿಸರದವರಿಗೆ
ಪರಿಚಯ ಮಾಡಿಕೊಡುವ **"ಚಂದನ"**
ತ್ರೈಮಾಸಿಕವೊಂದು ಇಂಗ್ಲಿಷ್ ಭಾಷೆಯಲ್ಲಿ
ಪ್ರಕಟವಾಗುತ್ತಿದೆ. ಈ ಪತ್ರಿಕೆಗೂ ಚಂದಾ
ಕೇವಲ ಹತ್ತು ರೂಪಾಯಿಗಳು.

: : ದಯಮಾಡಿ ಚಂದಾದಾರರಾಗಿರಿ : :

ಪ್ರಧಾನ ಸಂಪಾದಕರು 'ಚಂದನ'
ಕರ್ನಾಟಕ ರಾಜ್ಯ ಸಾಹಿತ್ಯ ಅಕಾದೆಮಿ,
ನೃಪತುಂಗ ರಸ್ತೆ,
ಬೆಂಗಳೂರು-- ೫೬೦೦೦೨.